# ಕರ್ನಾಟಕ ವಿಕಾಸ

## Karnataka Vikas

ಮೇ May 2016



ದಿನಾಂಕ:24.04.2016 ರಂದು ಜಾರ್ಖಂಡ್ ರಾಜ್ಯದ ಜೆಮ್‌ಷೆಡ್‌ಪುರದಲ್ಲಿ ನಡೆದ ಗ್ರಾಮ ಉದಯ್ ಸೇ ಭಾರತ್ ಉದಯ್ ಕಾರ್ಯಕ್ರಮದಲ್ಲಿ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಪ್ರಶಸ್ತಿ ಸ್ವೀಕರಿಸುತ್ತಿರುವುದು.







ದಿನಾಂಕ:14.04.2016 ರಿಂದ 16.04.2016 ರವರೆಗೆ ಡಾ||ಬಿ.ಆರ್.ಅಂಬೇಡ್ಕರ್‌ರವರ 125ನೇ ವರ್ಷದ ಜನ್ಮ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಸಾಮರಸ್ಯ ದಿವಸವನ್ನು ಆಚರಿಸಲಾಯಿತು.





17.04.2016 ರಿಂದ 20.04.2016ರ ವರೆಗೆ ರಾಷ್ಟ್ರೀಯ ಪಂಚಾಯತ್ ರಾಜ್ ದಿವಸದ ಅಂಗವಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗ್ರಾಮ ಕಿಸಾನ್ ಸಭೆಗಳನ್ನು ನಡೆಸಲಾಯಿತು.

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಮೇ 2016 | ಸಂಪುಟ : 57 | ಸಂಚಿಕೆ : 06

May 2016 | Volume : 57 | Issue : 06


## ಈ ಸಂಚಿಕೆಯೊಳಗೆ


| | | |
|---|---|---|
| 5 | ವರದಿ | – ಎ.ಎ. ಅಬ್ದುಲ್ಲ<br>– ಕೆ. ಪಿ. ಸಂಜೀವಪ್ಪ<br>– ರಾಚಯ್ಯ ಚೌಕಿಮಠ<br>– ಬಂಡೆಪ್ಪ ತೇಲಿ |
| 20 | ಲೇಖನ | – ಎನ್. ಕೃಷ್ಣಪ್ಪ ಕೋಡಿಪಾಳ್ಯ<br>– ಡಾ|| ಹೆಚ್. ಎಂ. ಸುದರ್ಶನ |
| 25 | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 28 | ಯಶೋಗಾಥೆ | – ಕೆ. ರಾಜಶೇಖರ್<br>– ಸಿದ್ದಲಿಂಗಯ್ಯ<br>– ಗೋಪಾಲ ಪಿ. ಮಾಳಿ<br>– ಎನ್. ಸುಜೇಂದ್ರ |
| 36 | ಕವಿಯ(ಕ್ಷ)ಪ್ರಶ್ನೆ | – ಗಂಗರಾಜು ಎಂ. |
| 37 | ಕಾವ್ಯ ವಿಕಾಸ | – ಜಯರಾಮು ಎನ್. |
| 38 | ಪಂಚತಂತ್ರ ವರದಿ | |
| 39 | ಸಕಾಲ ವರದಿ | |
| 40 | ಸುತ್ತೋಲೆ | |





ಪ್ರಕಾಶಕರು

**ಕೆ. ಯಾಲಕ್ಕಿ ಗೌಡ**

ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ಡಾ. ಎಂ.ಎಸ್. ಮಂಜುನಾಥ**

**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು

**ಹೆಚ್.ಬಿ. ಗುರುಸ್ವಾಮಿ**


### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ


ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com


### ವಿಶೇಷ ಸೂಚನೆ


ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಪ್ರತಿ ತಿಂಗಳು ಸಕಾಲದಲ್ಲಿ ಓದುಗರಿಗೆ ತಲುಪುವ ಏಕೈಕ ಪತ್ರಿಕೆಯೆಂದರೆ ತಪ್ಪಾಗದು. ಏಪ್ರಿಲ್ 2016ರ ಸಂಚಿಕೆಯಲ್ಲಿ ಪ್ರಕಟವಾದ ಗ್ರಾಮ ಪಂಚಾಯತಿ ಪಿ.ಡಿ.ಒ ಗಳಿಗೆ ಕೌಶಲ್ಯ ಗಳಿಸಿಕೊಳ್ಳುವ ಬಗ್ಗೆ ಎಸ್.ದಕ್ಷಿಣಾಮೂರ್ತಿಯವರು ಇರುವೆಯ ಉದಾಹರಣೆಯೊಂದಿಗೆ ಚೆನ್ನಾಗಿ ವಿವರಿಸಿದ್ದಾರೆ. ಪತ್ರಿಕೆಯಲ್ಲಿ ಎಲ್ಲಾ ಲೇಖನಗಳು, ಯಶೋಗಾಥೆ, ಸುತ್ತೋಲೆ, ನಡಾವಳಿಗಳು ಚೆನ್ನಾಗಿ ಮೂಡಿಬಂದಿರುವುದು ತುಂಬಾ ಸಂತೋಷವಾಗಿದೆ.

**ಶ್ರೀ ಕೊತ್ತಲ ಮಹದೇವಪ್ಪ,**
ಶಿಕ್ಷಕ–ಸಾಹಿತಿ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ 582116.

ಏಪ್ರಿಲ್ 2016ರ ಕರ್ನಾಟಕ ವಿಕಾಸ ಮಾಸಪತ್ರಿಕೆಯ ಮುಖಪುಟವು ವರ್ಣರಂಜಿತವಾಗಿದೆ. ಪತ್ರಿಕೆಯಲ್ಲಿನ ಸುತ್ತೋಲೆಗಳು, ಪಂಚತಂತ್ರ ಪ್ರಗತಿ ವರದಿ, ಸಕಾಲವರದಿ, ಗ್ರಾಮ ಸಭೆಗಳ ಕಾರ್ಯಸೂಚಿ ಅಂಶಗಳು, ವಿವಿಧ ಕಾರ್ಯಕ್ರಮ ಸಭೆಗಳು, ಕಾವ್ಯವಿಕಾಸ, ಕವಿಯ(ಕ್ಷ) ಪ್ರಶ್ನೆ ಚೆನ್ನಾಗಿ ಮೂಡಿ ಬಂದಿವೆ. ಪತ್ರಿಕೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಕುಡಿಯುವ ಶುದ್ಧ ನೀರು, ಅಧಿಕ ಶೌಚಾಲಯ ನಿರ್ಮಾಣ, ಹೊಲಗಳ ಬದು ಮತ್ತು ಇಂಗು ಗುಂಡಿಯ ನಿರ್ಮಾಣ, ರೈತರ ಸ್ವಾವಲಂಬನೆಗೆ ಸಮಗ್ರ ಕೃಷಿ ಬಳಕೆ, ರೈತರಿಗೆ ನೆರವಾದ ಒಕ್ಕಣೆ ಕಣ, ಗ್ರಾಮ ಪಂಚಾಯತಿಯ ಆಯ–ವ್ಯಯ ಮಾದರಿಯ ವರದಿ ಇನ್ನು ಮುಂತಾದ ಲೇಖನಗಳು ಉತ್ತಮವಾಗಿವೆ.

**ಶ್ರೀ ಮರಿದೇವರ ಸಿದ್ದಪ್ಪ**
ನಿವೃತ್ತ ಶಿಕ್ಷಕರು, ಚೌಡಾಪುರ ಅಂಚೆ, ಕೂಡ್ಲಿಗಿ ತಾಲೂಕು, ಬಳ್ಳಾರಿ 583135.

ಏಪ್ರಿಲ್ 2016 ರ ಕರ್ನಾಟಕ ವಿಕಾಸ ಮಾಸ ಪತ್ರಿಕೆ ಬಹಳ ಆಕರ್ಷಕವಾಗಿ ಮೂಡಿಬಂದಿದೆ. ಇಂತಹ ಬರಗಾಲದ ಪರಿಸ್ಥಿತಿಯಲ್ಲೂ 1000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಲೋಕಾರ್ಪಣೆ ಮಾಡಿರುವುದು ಬಹಳ ಸಂತೋಷಕರ ವಿಷಯವಾಗಿದೆ. ಶ್ರೀ ಬಸವರಾಜ ಕಂಬಿ ರವರ ಕರ್ನಾಟಕವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವಾಗಿಸುವತ್ತ ದಾಪುಗಾಲು ವರದಿಯು ಬಹಳ ಉಪಯುಕ್ತವಾಗಿದೆ. ಪತ್ರಿಕೆಯಲ್ಲಿನ ಲೇಖನಗಳು, ಯಶೋಗಾಥೆಗಳು ಚೆನ್ನಾಗಿ ಮೂಡಿಬಂದಿವೆ. ಸರ್ಕಾರದಲ್ಲಿ ಹೊರಡಿಸಲಾಗಿರುವ ಸುತ್ತೋಲೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಿರುವುದರಿಂದ ಗ್ರಾಮಗಳಿಗೆ ತಲುಪದೇ ಇರುವಂತೆ ಎಷ್ಟೋ ಮಾಹಿತಿಗಳು ಲಭ್ಯವಾಗುತ್ತಿವೆ. ಇದರಿಂದ ಸರ್ಕಾರದಲ್ಲಿ ಆಗುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ತಿಳಿಯುವುದು ಸುಲಭವಾಗಿದೆ. ಇಂತಹ ಉತ್ತಮ ಮಾಹಿತಿಯನ್ನು ನೀಡುತ್ತಿರುವ ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಸಂಪಾದಕ ವರ್ಗದವರಿಗೆ ವಂದನೆಗಳು.

**ಶ್ರೀ ಚಿದಾನಂದ,**
ತಮ್ಮೇನಹಳ್ಳಿ ಪಾಳ್ಯ, ಸರ್ಕಾರಿ ಶಾಲೆ ಹತ್ತಿರ,
ಅಚ್ಯುತನಗರ ಪೋಸ್ಟ್, ದಾಸನಪುರ ಹೋಬಳಿ,
ಬೆಂಗಳೂರು ಉತ್ತರ ತಾಲೂಕು 560107.

**ವರದಿ**

# ಪಾಲಿಬೆಟ್ಟ ಗ್ರಾಮ ಪಂಚಾಯತಿ ವಿಶೇಷ ಗ್ರಾಮ ಸಭೆ ಹಾಗೂ ಉಚಿತ ಕಣ್ಣಿನ ತಪಾಸಣಾ ಶಿಬಿರ

**ಎ.ಎ. ಅಬ್ದುಲ್ಲ**

ಗ್ರಾಮೋದಯದಿಂದ ಭಾರತ ಉದಯ ಅಭಿಯಾನದ ಅಂಗವಾಗಿ ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕು ಪಾಲಿಬೆಟ್ಟ ಗ್ರಾಮ ಪಂಚಾಯತಿ ವತಿಯಿಂದ ಪಂಚಾಯತ್ ರಾಜ್ ದಿವಸ ವಿಶೇಷ ಗ್ರಾಮ ಸಭೆಯನ್ನು ವಿರಾಜಪೇಟೆ ಶಾಸಕರಾದ ಕೆ.ಜಿ.ಬೋಪಯ್ಯರವರು ಉದ್ಘಾಟಿಸಿ



ಮಾತನಾಡಿ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ನೀಡುತ್ತಿರುವ ಹಲವು ಸೌಲಭ್ಯಗಳನ್ನು ಗ್ರಾಮಸ್ಥರು ಗ್ರಾಮಸಭೆಗಳಿಗೆ ಹಾಜರಾಗಿ ಮಾಹಿತಿ ಪಡೆದುಕೊಳ್ಳುವ ಬಗ್ಗೆ ಹಾಗೂ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಗ್ರಾಮ ಸಬೆಯಲ್ಲಿ ಗ್ರಾಮಸ್ಥರಿಗೆ ನಿವೇಶನ, ವಸತಿ ಯೋಜನೆ ಒಳಗೊಂಡಂತೆ ನಮ್ಮ ಗ್ರಾಮ ನಮ್ಮ ಯೋಜನೆ ಕ್ರಿಯಾ ಯೋಜನೆಯನ್ನು ತಯಾರಿಸಲಾಯಿತು. ಶೆ.25 ನಿಧಿಯಲ್ಲಿ ಪಂಚಾಯತ್ ವ್ಯಾಪ್ತಿಯ ತೀವ್ರ ಕಾಡಾನೆ ಹಾವಳಿ ಪ್ರದೇಶದಲ್ಲಿ ವಾಸವಿರುವ ಕುಟುಂಬಗಳಿಗೆ ಸೋಲಾರ್ ದೀಪಗಳನ್ನು ವಿತರಿಸಲಾಯಿತು. ಪುಲಿಯಂಡ ಬೋಪಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮ ಸಭೆಯಲ್ಲಿ ನೋಡಲ್

ಪಾಲಿಬೆಟ್ಟ ಗ್ರಾಮ ಪಂಚಾಯಿತಿಯು ವಿಶೇಷ ಗ್ರಾಮ ಸಭೆ ಮತ್ತು ಉಚಿತ ಕಣ್ಣಿನ ತಪಾಸಣಿ ಶಿಬಿರ ಏರ್ಪಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಪಾಲಿಬೆಟ್ಟ ಗ್ರಾಮ ಪಂಚಾಯತ್, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ



ಅಧಿಕಾರಿಗಳಾಗಿ ಡಾ. ನವೀನ್ ಕುಮಾರ್ ರವರು ಹಾಜರಿದ್ದರು. ಜಿಲ್ಲಾ ಪಂಚಾಯತ್ ಸದಸ್ಯರಾದ ಮೂಕೋಂಡ ವಿಜು ಸುಬ್ರಮಣಿ, ತಾಲ್ಲೂಕು ಪಂಚಾಯತ್ ಸದಸ್ಯರಾದ ಕುಟ್ಟಂಡ ಅಜಿತ್ ಕರುಂಬಯ್ಯ ದಿನದ ಮಹತ್ವದ ಬಗ್ಗೆ ಮಾತನಾಡಿದರು ಪಾಲಿಬೆಟ್ಟ ಗ್ರಾ.ಪಂ ಪಿಡಿಒ ಎ.ಎ. ಅಬ್ದುಲ್ಲ ಪವರ್ ಪಾಯಿಂಟ್ ಪ್ರಸೆಂಟೇಶನ್ ಮೂಲಕ ನಮ್ಮ ಗ್ರಾಮ ನಮ್ಮ ಯೋಜನೆ ಕುರಿತು ವರದಿ ಹಾಗೂ ವಿಶೇಷ ಗ್ರಾಮ ಸಭೆಗಾಗಿ ಮಾಹಿತಿ ಕೈಪಿಡಿ ವಿಷಯಗಳ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ನೀಡಿದರು. ವಿವಿಧ ವಸತಿ ನಿವೇಶನ ಯೋಜನೆಗಳಿಗೆ ಉದ್ಯೋಗ ಖಾತರಿ ಯೋಜನೆ ಫಲಾನುಭವಿಗಳನ್ನು ಆಯ್ಕೆ ಮಾಡಲಾಯಿತು. ಪಂಚಾಯತ್ ರಾಜ್ ದಿನದ ಅಂಗವಾಗಿ ಪಾಲಿಬೆಟ್ಟ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾನಿಗಳಾದ ಶ್ರೀ ಮುನೀರ್ ಎಂ. ಯು. ಹಾಗೂ ಶ್ರೀ ಮುರುಗೇಶನ್ ಪಾಲಿಬೆಟ್ಟ ಇವರುಗಳ ಪ್ರಾಯೋಜಕತ್ವದಲ್ಲಿ ಕೊಯಮತ್ತೂರು ಅರವಿಂದ್ ಕಣ್ಣಾಸ್ಪತ್ರೆಯ ವೈದ್ಯರಿಂದ ಉಚಿತ ಕಣ್ಣು ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಪೂರ್ವಾಹ್ನ 8.30 ಕ್ಕೆ ಉಚಿತ ಕಣ್ಣು ತಪಾಸಣಾ ಕಾರ್ಯಕ್ರಮದೊಂದಿಗೆ ಪ್ರಾರಂಭವಾದ ಗ್ರಾಮ ಸಭೆ ಮಾನ್ಯ ಪ್ರಧಾನಮಂತ್ರಿಗಳು ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣ ನೇರ ಪ್ರಸಾರ ದೊಂದಿಗೆ ಸಂಜೆ 5:00 ಗಂಟೆಗೆ ಅರ್ಥಪೂರ್ಣ ಕಾರ್ಯಕ್ರಮಗಳೊಂದಿಗೆ ಮುಕ್ತಾಯ ಮಾಡಲಾಯಿತು.



# ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನ

ವರದಿ



ಕೆ. ಪಿ. ಸಂಜೀವಪ್ಪ

ಮಾಲೂರು ತಾಲ್ಲೂಕಿನ 28 ಗ್ರಾಮ ಪಂಚಾಯಿತಿಗಳಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ರವರ ವಿಚಾರ ದಾರೆಗಳ ಬಗ್ಗೆ ಕಲಾತಂಡಗಳಿಂದ ಬೀದಿ ನಾಟಕಗಳ ಮೂಲಕ ಜನರಲ್ಲಿ ಅರಿವು ಮೂಡಿಸ ಲಾಯಿತು.

## ಅಭಿಯಾನ ಕಾರ್ಯಕ್ರಮದ ಉದ್ದೇಶ:

ಪ್ರಸಕ್ತ ವರ್ಷ ಡಾ|| ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವಾರ್ಷಿಕೋತ್ಸವವಾದ್ದರಿಂದ ಗ್ರಾಮ ಪಂಚಾಯತಿಗಳು ಡಾ|| ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಸ್ಮರಣೆ ಅಥವಾ ಚರ್ಚೆ ಮಾಡುವುದರ ಮೂಲಕ ಸಾಮಾಜಿಕ ಸಾಮರಸ್ಯ ಕಾಪಾಡಲು ಶ್ರಮಿಸುವುದು. ಕ್ಷೇತ್ರ ಇಲಾಖೆಗಳ ತಳಮಟ್ಟದ ಅಧಿಕಾರಿ ಸಿಬಂದಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕೇಂದ್ರ ಪುರಸ್ಕೃತ ಯೋಜನೆಗಳು ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು ಹಾಗೂ ಇತರೆ ಎಲ್ಲಾ ಯೋಜನಗಳನ್ನು ಮನವರಿಕೆ ಮಾಡಿಕೊಡುವುದು ಹಾಗೂ ಮಹಿಳಾ ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ಚಟುವಟಿಕೆಗಳು ಹಾಗೂ ರೈತರಿಗೆ ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಮನವರಿಕೆ ಮಾಡಿಕೊಡುವುದು.



ಗ್ರಾಮ್ ಉದಯ್ ಸೇ ಭಾರತ್ ಉದಯ್ ಅಭಿಯಾನ ಅಂದರೆ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯೇ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗುತ್ತದೆ ಎಂಬುದರ ಧ್ಯೇಯೋದ್ದೇಶದೊಂದಿಗೆ ಏಪ್ರಿಲ್ 14 ರಿಂದ 24ರವರೆಗೆ ಡಾ|| ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವಾರ್ಷಿಕೋತ್ಸವ ಸಮಾರಂಭವನ್ನು ಆಂದೋಲನ ಕಾರ್ಯಕ್ರಮದ ಮಾದರಿಯಲ್ಲಿ ಮಾಲೂರು ತಾಲ್ಲೂಕಿನ ಪಂಚಾಯತ್ ರಾಜ್ ಸಂಸ್ಥೆಗಳಾದ ತಾಲ್ಲೂಕು ಪಂಚಾಯತ್ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಗಳ ಸಹಯೋಗದೊಂದಿಗೆ ಮತ್ತು 28 ಗ್ರಾಮ ಪಂಚಾಯತಿಗಳ ಮೂಲಕ ತಾಲ್ಲೂಕಿನಾದ್ಯಂತ 369 ಗ್ರಾಮಗಳಿಗೆ ಮನವರಿಕೆಯಾಗುವ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಮಾಲೂರು, ಕೋಲಾರ ಜಿಲ್ಲೆ

# ಕಾರ್ಯಕ್ರಮದ ವಿವರಗಳು

| ಕ್ರ.ಸಂ | ದಿನಾಂಕ | ಕಾರ್ಯಕ್ರಮ |
|---|---|---|
| 1 | 14-04-2016<br>15-04-2016<br>16-04-2016 | ಡಾ॥ಬಿ.ಆರ್.ಅಂಬೇಡ್ಕರ್ ರವರ ವಿಚಾರ ದಾರೆಗಳ ಬಗ್ಗೆ ಪಂಚಾಯತ್ ರಾಜ್ ಹಾಗೂ ಸಾಮಾಜ ಕಲ್ಯಾಣ ಇಲಾಖೆಯ ಸೌಲಭ್ಯಗಳ ಬಗ್ಗೆ ಕಲಾತಂಡಗಳಿಂದ ಬೀದಿ ನಾಟಕಗಳ ಮೂಲಕ ಜನರಲ್ಲಿ ಅರಿವು ಮೂಡಿಸುವುದು |
| 2 | **17-04-2016**<br>**18-04-2016**<br>**19-04-2016** | **ಕೃಷಿ, ತೋಟಗಾರಿಕೆ, ರೇಷ್ಮೆ, ಸಾಮಾಜಿಕ ಮತ್ತು ವಲಯ ಅರಣ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಶು ಸಂಗೋಪನೆ ಇಲಾಖೆಗಳ ಸಹಯೋಗದೊಂದಿಗೆ ಕಿಸಾನ್(ರೈತರ ಗ್ರಾಮಸಭೆ) ಗ್ರಾಮಸಭೆಗಳನ್ನು ನಡೆಸುವುದು** |
| 3 | 20-04-2016<br>21-04-2016<br>22-04-2016 | ನಮ್ಮ ಗ್ರಾಮ, ನಮ್ಮ ಯೋಜನೆ ಬಗ್ಗೆ ವಾರ್ಡ್ ಸಭೆಗಳನ್ನು ನಡೆಸುವುದು |
| 4 | 23-04-2016 | ಮಧ್ಯಾಹ್ನ 4.00 ಗಂಟೆಗೆ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ , ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾದ್ಯಕ್ಷರು ಹಾಗೂ ಸದಸ್ಯರು ರವರು ಮಾನ್ಯ ಮುಖ್ಯ ಮಂತ್ರಿಗಳು ಮಾಡುವ ಬಾಷಣದಲ್ಲಿ ಹಾಜಗರಾಗಲು ಕೋರಿದೆ. |
| 5 | 24-04-2016 | ಪಂಚಾಯತಿಗಳಲ್ಲಿ ಗ್ರಾಮಸಭೆಗಳನ್ನು ನಡೆಸಿ ಮಧ್ಯಾಹ್ನ 3.00 ಗಂಟೆಗೆ ಮಾನ್ಯ ಪ್ರಧಾನ ಮಂತ್ರಿಗಳು ಮಾಡುವ ಬಾಷಣವನ್ನು ಎಲೆಕ್ಟ್ರಾನಿಕ್ ಮಾದ್ಯಮದ ಮೂಲಕ ಜನರಿಗೆ ತೋರಿಸುವುದು ಹಾಗೂ ಬಾಷಣದ ಅನುವಾದವನ್ನು ಹಿಂದಿ ಶಿಕ್ಷಕರ ಮುಖಾಂತರ ಕನ್ನಡದಲ್ಲಿ ಅನುವಾದ ಮಾಡಿಸುವುದು |

ತಾಲ್ಲೂಕು ಪಂಚಾಯತ್ ಮಾಲೂರು, ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಇಲಾಖೆಗಳ ಸಹಯೋಗದೊಂದಿಗೆ ಕೃಷಿ, ತೋಟಗಾರಿಕೆ, ರೇಷ್ಮೆ, ಸಾಮಾಜಿಕ ಮತ್ತು ವಲಯ ಅರಣ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮತ್ತು ಇತರೆ ಇಲಾಖೆಗಳೊಂದಿಗೆ ದಿನಾಂಕ: 14.04.2016ರಂದು ಈ ದಿಸೆಯಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಿ ಸರ್ಕಾರದ ಮಾರ್ಗಸೂಚಿ ಮತ್ತು ಸುತ್ತೋಲೆಯಂತೆ ಯಾವ ತರಹ ಕಾರ್ಯಕ್ರಮವನ್ನು ಮಾಡಬೇಕೆಂಬುದರ ಬಗ್ಗೆ ವಿಚಾರ ವಿನಿಮಯ ಸಲಹೆ ಸೂಚನೆಗಳನ್ನು ಪಡೆದು ಈ ಕೆಳಕಂಡಂತೆ ಕಾರ್ಯಕ್ರಮವನ್ನು ರೂಪಿಸಿ ನಿರ್ಣಯಿಸಲಾಯಿತು. ಮಾಲೂರು ತಾಲ್ಲೂಕಿನ ತಾಲ್ಲೂಕು ಮಟ್ಟದ ಎಲ್ಲಾ ಇಲಾಖಾ ಅಧಿಕಾರಿಗಳ ಸಹಯೋಗದೊಂದಿಗೆ ಗ್ರಾಮ ಪಂಚಾಯತಿ ನೋಡಲ್ ಅಧಿಕಾರಿಗಳೊಂದಿಗೆ 28 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನ ಮತ್ತು ರಾಷ್ಟ್ರೀಯ ಸಾಮರಸ್ಯ ದಿವಸ ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸವನ್ನು ಅರ್ಥಪೂರ್ಣವಾಗಿ ಮಾಡಲು ಹಾಗೂ ಈ ಸಂಬಂಧ ವಿಡಿಯೋ, ಛಾಯಚಿತ್ರ, ಇತರೆ ಸಂಪೂರ್ಣ ದಾಖಲೀಕರಣದೊಂದಿಗೆ ತಾಲ್ಲೂಕು ಪಂಚಾಯತಿಗೆ ಸಲ್ಲಿಸಲು ನಿರ್ಣಯಿ ಸಿರುತ್ತದೆ.

ತಾಲ್ಲೂಕು ಪಂಚಾಯತಿ ಕೇಂದ್ರ ಸ್ಥಾನದಲ್ಲಿ ಮತ್ತು 28 ಗ್ರಾಮ ಪಂಚಾಯತಿಗಳಲ್ಲಿ ಈ ಕೆಳಕಂಡಂತೆ ಕಾರ್ಯಕ್ರಮವನ್ನು ಹಮ್ಮಿ ಕೊಂಡಿರುತ್ತದೆ.



## ಕಾರ್ಯಕ್ರಮಗಳು:

### "ರಾಷ್ಟ್ರೀಯ ಸಾಮರಸ್ಯ ದಿವಸ"

ಪ್ರಸಕ್ತ ವರ್ಷ ಡಾ॥ ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮ ವಾರ್ಷಿಕೋತ್ಸವವಾದ್ದರಿಂದ ಗ್ರಾಮ ಪಂಚಾಯತಿಗಳು ಡಾ॥ ಬಿ.ಆರ್. ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಸ್ಮರಣೆ ಅಥವಾ ಚರ್ಚೆ ಮಾಡುವುದರ ಮೂಲಕ ಸಾಮಾಜಿಕ ಸಾಮರಸ್ಯ ಕಾಪಾಡುವ ಉದ್ದೇಶದಿಂದ ಗ್ರಾಮ ಪಂಚಾಯತಿಗಳಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ರವರಿಗೆ ಮಾಲಾರ್ಪಣೆ ಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು/ ಉಪಾಧ್ಯಕ್ಷರು/ ಸದಸ್ಯರು/ ಗ್ರಾಮಸ್ಥರ ಸಮ್ಮುಖದಲ್ಲಿ ಮತ್ತು ತಾಲ್ಲೂಕು ಪಂಚಾಯತಿಯ ನೇತೃತ್ವದಲ್ಲಿ ಕ್ಷೇತ್ರದ ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕೆ.ಎಸ್.ಮಂಜುನಾಥಗೌಡ ರವರ ಸಮ್ಮುಖದಲ್ಲಿ ಮಾಲೂರು ಟೌನ್‌ನ ಉದ್ಯಾನವನದಲ್ಲಿರುವ ಡಾ॥ ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆ ನಂತರ ತಾಲ್ಲೂಕಿನ 28 ಗ್ರಾಮ ಪಂಚಾಯತಿಗಳಿಂದ ಬಂದಿರುವ ಟ್ಯಾಬ್ಲೋಗಳ ಮೆರವಣಿಗೆಯನ್ನು ಚುನಾಯಿತ ಜನಪ್ರತಿನಿಧಿಗಳನ್ನು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಸಂಘ ಸಂಸ್ಥೆಗಳು ಸಾರ್ವಜನಿಕರು ಭಾಗಿಯಾಗಿ ಮಾಲೂರು ಟೌನ್‌ನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಿ ಆನಂತರ ಸರ್ಕಾರಿ ಬಾಲಕಿಯ ಪದವಿ ಪೂರ್ವ ಕಾಲೇಜು ಮೈದಾನದ ಆವರಣದಲ್ಲಿ ಸಾರ್ವಜನಿಕ ಭೃಹತ್ ಕಾರ್ಯಕ್ರಮವನ್ನು ಹಮ್ಮಿಕೊಂಡು "ರಾಷ್ಟ್ರೀಯ ಸಾಮರಸ್ಯ ದಿವಸ್"ನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

### ಕಲಾ ತಂಡಗಳಿಂದ ಬೀದಿ ನಾಟಕ ಮೂಲಕ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ:

ದಿನಾಂಕ: 14.04.2016 ರಿಂದ 16.04.2016ರ ವರೆವಿಗೆ 3 ದಿನಗಳ ಅವಧಿಯಲ್ಲಿ ಮಾಲೂರು ತಾಲ್ಲೂಕಿನ 28 ಗ್ರಾಮ ಪಂಚಾಯತಿಗಳಲ್ಲಿ ಹೆಚ್ಚಿನ ಜನಸಂಖ್ಯೆ ಇರುವ ಆಯ್ದ ಗ್ರಾಮಗಳಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆಗಳ ಬಗ್ಗೆ ಪಂಚಾಯತ್ ರಾಜ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸೌಲಭ್ಯಗಳ ಬಗ್ಗೆ ಕಲಾತಂಡಗಳಿಂದ ಬೀದಿ ನಾಟಕಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಶ್ರೀ ವಿ.ಬಾಲಕೃಷ್ಣ, ಮುಖ್ಯಸ್ಥರು "ತಾಯಿ ಬೇರು ಜಾನಪದ ಕಲಾತಂಡ (ರಿ)" ದೊಡ್ಡಮಲೆ ಗ್ರಾಮ, ಮಾಲೂರು ತಾಲ್ಲೂಕುರವರ ನೇತೃತ್ವದಲ್ಲಿ ಕಾರ್ಯಕ್ರಮವನ್ನು ನಡೆಸಿಕೊಡಲು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ನಿರ್ದೇಶನದಂತೆ, ಸದರಿ ಕಲಾ ತಂಡವು ಆಯ್ದ ಗ್ರಾಮಗಳಿಗೆ ಭೇಟಿ ನೀಡಿ ಬೀದಿ ನಾಟಕಗಳ ಮೂಲಕ ಜನರಲ್ಲಿ ಅರಿವು ಮುಡಿಸುವ ಕಾರ್ಯಕ್ರಮವನ್ನು ನಡೆಸಿರುತ್ತದೆ.

### ಕಿಸಾನ್ ಗ್ರಾಮ ಸಭೆಗಳು :

ದಿನಾಂಕ: 17.04.2016 ರಿಂದ 19.04.2016 ರವರೆಗೆ 3 ದಿನಗಳ ಅವಧಿಯಲ್ಲಿ ವಿಶೇಷ ಕಿಸಾನ್ ಗ್ರಾಮ ಸಭೆಗಳನ್ನು ತಾಲ್ಲೂಕಿನ 28 ಗ್ರಾಮ ಪಂಚಾಯತಿಗಳಲ್ಲಿ ಚುನಾಯಿತ ಜನಪ್ರತಿನಿಧಿಗಳು, ರೈತರು, ಗ್ರಾಮಸ್ಥರನ್ನು ಈ ಸಭೆಗೆ ಆಹ್ವಾನಿಸಿ ಕೃಷಿ, ತೋಟಗಾರಿಕೆ, ರೇಷ್ಮೆ, ಸಾಮಾಜಿಕ ಅರಣ್ಯ, ವಲಯ ಅರಣ್ಯ ಪಶುಪಾಲನೆ, ಮಹಿಳಾ ಅಭಿವೃದ್ಧಿ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಯೋಗದೊಂದಿಗೆ ಈ ಇಲಾಖೆಗಳ ಕೇಂದ್ರ ಪುರಸ್ಕೃತ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳಿಂದ ರೈತರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ಪರಿಚಯ ಮಾಡಿಕೊಟ್ಟು, ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ಯೋಜನೆಗಳನ್ನು ರೂಪಿಸಲು ರೈತರ ಸಲಹೆ ಸೂಚನೆಗಳನ್ನು ಪಡೆದು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ, ಮತ್ತು ರೈತರ ಸರ್ವತೋಮುಖ ಅಭಿವೃದ್ಧಿಗೆ ರೈತರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಹಾಗೂ ಇತ್ತೀಚಿನ ದಿನಗಳಲ್ಲಿ ರೈತರ ಆತ್ಮಹತ್ಯೆ ಹೆಚ್ಚಿಗೆ ಆಗುತ್ತಿದ್ದು, ಇದನ್ನು ತಡೆಗಟ್ಟಲು ರೈತರಿಗೆ ಮನಸ್ಥೈರ್ಯವನ್ನು ತುಂಬಿ ತಕ್ಷಣ ಸ್ಪಂದಿಸಿ ನಿಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಡುವುದಾಗಿ ರೈತರ ಮನಸಿನಲ್ಲಿ ಮನದಟ್ಟು ಮಾಡಿ ವಿಚಾರ ವಿನಿಮಯ ಮಾಡಿಕೊಂಡು ಸಲಹೆ ಸೂಚನೆಗಳನ್ನು ಪಡೆದು ತೀರ್ಮಾನಿಸಲಾಯಿತು.




## ವಾರ್ಡ್ ಸಭೆಗಳು :

ದಿನಾಂಕ: 20.04.2016 ರಿಂದ 22.04.2016ರ ವರೆಗೆ 3 ದಿನಗಳ ಅವಧಿಯಲ್ಲಿ ಮಾಲೂರು ತಾಲ್ಲೂಕಿನ 28 ಗ್ರಾಮ ಪಂಚಾಯತಿಗಳ 505 ಗ್ರಾಮ ಪಂಚಾಯತಿ ಸದಸ್ಯರುಗಳ ಅವರವರ ಕ್ಷೇತ್ರಗಳಲ್ಲಿ ವಾರ್ಡ್ ಸಭೆಗಳನ್ನು ಹಮ್ಮಿಕೊಂಡು ಕರ ಪತ್ರಗಳ ಮೂಲಕ ವ್ಯಾಪಕ ಪ್ರಚಾರ ನೀಡಿ ಗ್ರಾಮಗಳ ಮೂಲಭೂತ ಸೌಕರ್ಯಗಳ ಅವಶ್ಯಕತೆ ಬಗ್ಗೆ, “ನಮ್ಮ ಗ್ರಾಮ ನಮ್ಮ ಯೋಜನೆಯ” ಬಗ್ಗೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳ ಬಗ್ಗೆ, ನಿವೇಶನ ರಹಿತ, ವಸತಿ ರಹಿತ ಫಲಾನುಭವಿಗಳನ್ನು ಗುರುತಿಸುವ ಬಗ್ಗೆ, ಹಾಗೂ ಇತರೆ ಇಲಾಖೆಗಳ ಕಾರ್ಯಕ್ರಮದ ತಿಳುವಳಿಕೆ ನೀಡಿ ಫಲಾನುಭವಿಗಳ ಪಟ್ಟಿಮಾಡಿ, ಸ್ವ-ಸಹಾಯ ಸಂಘಗಳನ್ನು ಗುರುತಿಸುವ ಬಗ್ಗೆ, ಬರಗಾಲ ಪ್ರಯುಕ್ತ ಕೆಲಸವಿಲ್ಲದೆ ಸಂಪಾದನೆ ಇಲ್ಲದೆ ಜೀವನೋಪಾಯದ ತೊಂದರೆಯಿಂದ ಗುಳೇ ಹೊಗುವುದನ್ನು ತಡೆಗಟ್ಟಲು ನರೇಗಾ ಯೋಜನೆಯನ್ನು ಉಪಯೋಗಿಸಿಕೊಂಡು ಒಂದು ಉದ್ಯೋಗ ಚೀಟಿಗೆ 150 ದಿನಗಳ ಉದ್ಯೋಗಾವಕಾಶ ಪಡೆದು ಜೀವನ ನಡೆಸಲು ಸಾದ್ಯವಾಗುವುದರಿಂದ ಆ ಮೂಲಕ ಜನರಿಗೆ ಮನದಟ್ಟಾಗುವ ರೀತಿಯಲ್ಲಿ ಕಾರ್ಯಕ್ರಮ ರೂಪಿಸಿ ಹಾಗೂ ಈ ಸಭೆಗಳಿಗೆ ಹಾಲು ಉತ್ಪಾದಕ ಸಹಕಾರ ಸಂಘಗಳ ಸದಸ್ಯರುಗಳನ್ನು ಆಹ್ವಾನಿಸಿ ಅವರ ಕುಂದುಕೊರತೆ ಮತ್ತು ಸಲಹೆ ಸೂಚನೆಗಳನ್ನು ಪಡೆದು ದನಕರುಗಳಿಗೆ ಮೇವು ಬೆಳೆಯುವ ಬಗ್ಗೆ ಕಾರ್ಯಕ್ರಮಗಳ ಕರಡು ಕ್ರಿಯಾ ಯೋಜನೆಯನ್ನು ರೂಪಿಸಿ ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾಗೊಳಿಸುವ ಬಗ್ಗೆ ವಿಚಾರ ವಿನಿಮಯ ಮತ್ತು ಸಲಹೆ ಸೂಚನೆಗಳನ್ನು ಪಡಿದು ನಿರ್ಣಯಿಸಲಾಯಿತು.

## ವಿಶೇಷ ಗ್ರಾಮ ಸಭೆಗಳು:

ದಿನಾಂಕ: 21.04.2016ರಂದು ಭಾರತ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಗಳು ಹಾಗೂ ಕರ್ನಾಟಕ ರಾಜ್ಯ ನೋಡಲ್ ಅಧಿಕಾರಿಗಳಾದ ಗೌರವಾನ್ವಿತ. ಶಶಿಕುಮಾರ್ ಅಧಿಕಾರಿಗಳವರು ಮಾಲೂರು ತಾಲ್ಲೂಕಿನಲ್ಲಿ ನಡೆಯುವ “ಗ್ರಾಮ ಉದಯ್ ಸೇ ಭಾರತ್ ಉದಯ್” ಕಾರ್ಯಕ್ರಮ ನಡೆಸುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಲು ಆಗಮಿಸಿದ್ದು, ಇವರ ಜೊತೆಗೆ ಮಾಲೂರು ತಾಲ್ಲೂಕು ಪಂಚಾಯತ್ ಆಡಳಿತಾಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಕೋಲಾರರವರಾದ ಶ್ರೀಯುತ ಹೆಚ್. ಲಕ್ಷ್ಮೀನಾರಾಯಣರವರು, ಶ್ರೀಯುತ ಚಲುವರಾಜು, ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಕೋಲಾರರವರು ಸಹ ಆಗಮಿಸಿದ್ದು, ವಿಶೇಷವಾಗಿ ಗ್ರಾಮ ಸಭೆಯನ್ನು ಆಯೋಜಿಸಿದ್ದು, ಮಾಲೂರು ತಾಲ್ಲೂಕಿನ ತೊರ್ನಹಳ್ಳಿ ಗ್ರಾಮ ಪಂಚಾಯತಿಯ ಹೆಡಗಿನಬೆಲೆ ಗ್ರಾಮ, ಮಡಿವಾಳ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ, ಮತ್ತು ನೊಸಗೇರೆ ಗ್ರಾಮ ಪಂಚಾಯತಿಯ ಚಿಕ್ಕಾಪುರ ಗ್ರಾಮಗಳಲ್ಲಿ ಕೇಂದ್ರ ಸರ್ಕಾರದ ನೋಡಲ್ ಅಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮುಖದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆ ನಂತರ ಮೂರು ಗ್ರಾಮಗಳ ವಿಶೇಷ ಗ್ರಾಮ ಸಭೆಗಳಿಗೆ ಖುದ್ದು ಹಾಜರಾಗಿ ಉದ್ಘಾಟನೆ ಮಾಡಿ ಗ್ರಾಮ ಸಭೆಯಲ್ಲಿ ಪಾಲ್ಗೊಂಡು, ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನದ ಉದ್ದೇಶವನ್ನು ಪರಿಚಯಿಸಿ ಗ್ರಾಮ ಸಭೆಗಳಲ್ಲಿ ಸಿಗುವಂತಹ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಪರಿಚಯವನ್ನು ತಿಳಿಸಿ ಕಾರ್ಯಕ್ರಮವನ್ನು ನಡೆಸಿಕೊಟ್ಟಿರುತ್ತಾರೆ. ಈ ಮೂರು ಗ್ರಾಮಗಳ ವಿಶೇಷ ಗ್ರಾಮಸಭೆಗಳನ್ನು ಖುದ್ದು ವಿಕ್ಷಣೆ ಮಾಡಿ ಹಾಗೂ ತಾಲ್ಲೂಕಿನಾದ್ಯಂತ 28 ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನದ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಸುತ್ತಿರುವ ಬಗ್ಗೆ ವಿಡಿಯೋಗ್ರಫಿ, ಛಾಯಾಚಿತ್ರಗಳನ್ನು ಹಾಗೂ ಇತರೆ ದಾಖಲೀಕರಣಗಳನ್ನು ವೀಕ್ಷಿಸಿ ಎಲ್ಲಾ ಕಾರ್ಯಕ್ರಮಗಳು ತಾಲ್ಲೂಕಿನ ತಾಲ್ಲೂಕು ಪಂಚಾಯತ್



ಕಾರ್ಯನಿರ್ವಾಹಕ ಅಧಿಕಾರಿಗಳ ಶ್ರದ್ಧೆ, ನಿಷ್ಠೆ, ವೈಯುಕ್ತಿಕ ಜವಾಬ್ದಾರಿಯಿಂದ ಹಾಗೂ ಸರ್ಕಾರದ ಮಾರ್ಗಸೂಚಿ ಮತ್ತು ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಹಿನ್ನೆಲೆಯಲ್ಲಿ ತಾಲ್ಲೂಕಿನಾದ್ಯಂತ ವಿಜೃಂಭಣೆಯಿಂದ ಕಾರ್ಯಕ್ರಮಗಳು ನಡೆಯುತ್ತಿರುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ರವರಿಗೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಕೋಲಾರ ರವರಿಗೆ ಸಮಗ್ರ ವರದಿಯನ್ನು ನೀಡಿರುತ್ತಾರೆ.

**ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನ ಬಗ್ಗೆ ಉದ್ದೇಶಿಸಿ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರು ದಾವಣಗೆರೆ ಉಪಕೇಂದ್ರದ ಸ್ಯಾಟ್ ಕಾಂ ಕಾರ್ಯಕ್ರಮ :**

ದಿನಾಂಕ: 23.04.2016ರಂದು ಬೆಳಿಗ್ಗೆ: 10.30 ಗಂಟೆಗೆ ತಾಲ್ಲೂಕು ಪಂಚಾಯತ್ ಸಾಮಾರ್ಥ್ಯ ಸೌಧದ ಕಟ್ಟಡದ ಮುಂಭಾಗದಲ್ಲಿ ಏರ್ಪಡಿಸಿರುವ ತಾತ್ಕಾಲಿಕ ಸಭಾಂಗಣದಲ್ಲಿ ತಾಲ್ಲೂಕು ಪಂಚಾಯತ್ ವತಿಯಿಂದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳಾದ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳು, ಮಾನ್ಯ ತಾಲ್ಲೂಕು ಪಂಚಾಯತಿ ಸದಸ್ಯರುಗಳು, ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಸದಸ್ಯರುಗಳು, ತಾಲ್ಲೂಕು ಮಟ್ಟದ ಇಲಾಖಾಧಿಕಾರಿಗಳು, ತಾಲ್ಲೂಕು ಪಂಚಾಯತ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಗ್ರಾಮ ಪಂಚಾಯತಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನದ ಬಗ್ಗೆ ಉದ್ದೇಶಿಸಿ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರರವರು ದಾವಣಗೆರೆ ಉಪಕೇಂದ್ರದ ಸ್ಯಾಟ್ ಕಾಂ ಕಾರ್ಯಕ್ರಮವನ್ನು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಯತ್ ರಾಜ್ ಸಂಸ್ಥೆಯು ಏರ್ಪಡಿಸಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಮಂತ್ರಿಗಳಾದ ಗೌರವಾನ್ವಿತ ಎಚ್.ಕೆ. ಪಾಟೀಲರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ನಾಗಾಂಬಿಕಾದೇವಿ ಮತ್ತು ಇತರರು ಸ್ಯಾಟ್ ಕಾಂ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳು ಅನಿವಾರ್ಯ ಕಾರಣಗಳಿಂದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರುವುದಿಲ್ಲ. ಮೊದಲಿಗೆ ಕಾರ್ಯಕ್ರಮವನ್ನು ನಾಡಗೀತೆಯೊಂದಿಗೆ ಪ್ರಾರಂಭಿಸಿ ಶ್ರೀಮತಿ ನಾಗಾಂಬಿಕಾದೇವಿಯವರು ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳನ್ನು ಆಹ್ವಾನಿಸಿದರು. ಈ ಕಾರ್ಯಕ್ರಮದ ಬಗ್ಗೆ ನಡೆಯುವ ರಾಷ್ಟ್ರೀಯ ಪಂಚಾಯತ್ ರಾಜ್ ದಿವಸದ ಮೂಲ ಧ್ಯೇಯೋದ್ದೇಶಗಳನ್ನು ಪರಿಚಯಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಮಂತ್ರಿಗಳಾದ ಗೌರವಾನ್ವಿತ ಎಚ್.ಕೆ. ಪಾಟೀಲರವರು ಮಾತನಾಡುತ್ತ, ಗೌರವಾನ್ವಿತ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀಯುತ ನರೇದ್ರ ಮೋದಿರವರು ಈ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ನೀಡಿ, ಭಾರತದಾದ್ಯಂತ ರಾಷ್ಟ್ರಪಿತ ಮಹಾತ್ಮ ಗಾಂಧಿರವರ, ಗ್ರಾಮ ಸ್ವರಾಜ್ ಮತ್ತು ಡಾ॥ ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮ ವಾರ್ಷಿಕೋತ್ಸವವಾದ್ದರಿಂದ ಗ್ರಾಮ ಪಂಚಾಯತಿಗಳು ಡಾ॥ ಬಿ.ಆರ್.ಅಂಬೇಡ್ಕರ ವಿಚಾರಧಾರೆಗಳನ್ನು "ಗ್ರಾಮ್ ಉದಯ್ ಸೇ ಭಾರತ್ ಉದಯ್ ಅಭಿಯಾನ್" ದೇಶದಾದ್ಯಂತ ಹಮ್ಮಿಕೊಂಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಭಾಷಣ ಮಾಡಿದರು.

ಮೇಲ್ಕಂಡ ಕಾರ್ಯಕ್ರಮಕ್ಕೆ ದಿನಾಂಕ: 23.04.2016ರ ಸ್ಯಾಟ್ ಕಾಂ ಕಾರ್ಯಕ್ರಮದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಮತ್ತು ಇತರೆ ಹಾಜರಾತಿ ಶೇಕಡ 88% ರಷ್ಟು ಹಾಜರಾಗಿರುತ್ತಾರೆ ಎಂಬುದಾಗಿ ವರದಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಲ್ಲಿಸಲಾಗಿರುತ್ತದೆ.

ಕಾರ್ಯಕ್ರಮವನ್ನು ರಾಷ್ಟ್ರಗೀತೆಯೊಂದಿಗೆ ಮುಕ್ತಾಯ ಗೊಳಿಸಲಾಯಿತು.

## ದಿನಾಂಕ: 23.04.2016ರ ಸ್ಯಾಟ್ ಕಾಂ ಕಾರ್ಯಾಕ್ರಮದ
## ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಹಿತ ಪ್ರತಿನಿಧಿಗಳ ಮತ್ತು ಇತರೆ ಹಾಜರಾತಿ

| ಜಿಲ್ಲೆ:ಕೋಲಾರ | | | ತಾಲ್ಲೂಕು:ಮಾಲೂರು | |
|---|---|---|---|---|
| **ಕ್ರ.ಸಂ** | **ಚುನಾಯಿತ ಜನ ಪ್ರತಿನಿಧಿಗಳು/ತಾಲ್ಲೂಕು ಮಟ್ಟದ/ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿ ಅಧಿಕಾರಿ/ನೌಕರರ ವಿವರಗಳು** | **ಒಟ್ಟು** | **ಹಾಜರಾದವರ ಸಂಖ್ಯೆ** | **ಶೇಕಡವಾರು** |
| 1 | ಜಿಲ್ಲಾ ಪಂಚಾಯತಿ ಸದಸ್ಯರು | 5 | 4 | 80% |
| 2 | ತಾಲ್ಲೂಕು ಪಂಚಾಯತಿ ಸದಸ್ಯರು | 20 | 15 | 75% |
| 3 | ಗ್ರಾಮ ಪಂಚಾಯತಿ ಸದಸ್ಯರು | 505 | 441 | 87% |
| 4 | ತಾಲ್ಲೂಕು ಮಟ್ಟದ ಅಧಿಕಾರಿಗಳು | 18 | 16 | 89% |
| 5 | ತಾಲ್ಲೂಕು ಪಂಚಾಯತಿ ಕಛೇರಿ ಸಿಬ್ಬಂದಿ | 25 | 25 | 100% |
| ಒಟ್ಟು | | **568** | **497** | **88%** |

**ದಿನಾಂಕ: 24.04.2016ರ ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ ಆಚರಣೆ, ಗ್ರಾಮೋದಯದಿಂದ ಭಾರತೋದಯ ಅಭಿಯಾನ ವಿಶೇಷ ಗ್ರಾಮ ಸಭೆಗಳು ಮತ್ತು ಗ್ರಾಮ ಸಭೆಗಳನ್ನು ಉದ್ದೇಶಿಸಿ ಗೌರವಾನ್ವಿತ ಮಾನ್ಯ ಪ್ರಧಾನ ಮಂತ್ರಿಗಳು ಭಾರತ ಸರ್ಕಾರ ರವರ ಮನ್ ಕೀ ಭಾತ್ ಕಾರ್ಯಕ್ರಮ:**

ಮಾಲೂರು ತಾಲ್ಲೂಕಿನ 28 ಗ್ರಾಮ ಪಂಚಾಯತಿಗಳಲ್ಲಿ ದಿನಾಂಕ: 24.04.2016ರಂದು "ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ" ಆಚರಣೆ "ಗ್ರಾಮೋದಯದಿಂದ ಭಾರತೋದಯ ಅಭಿಯಾನ" ಕಾರ್ಯಕ್ರಮ ನಡೆಸಲಾಯಿತು. ಅಂತಿಮ ಘಟ್ಟವಾದ ವಿಶೇಷ ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮ ಸಭೆಗಳನ್ನು ಉದ್ದೇಶಿಸಿ ಮಧ್ಯಾಹ್ನ 3.00 ಗಂಟೆಗೆ ಎಲ್ಲಾ 28 ಗ್ರಾಮ ಪಂಚಾಯತಿಗಳಲ್ಲಿ ವಿಶೇಷ ಗ್ರಾಮ ಸಭೆ ನಡೆಯುವ ಗ್ರಾಮಗಳಲ್ಲಿ ಕೇಬಲ್ ಸಂಪರ್ಕ ಪಡೆದು ಟಿ.ವಿ.ಗಳನ್ನು ಅಳವಡಿಸಿ ಪ್ರಸರಣವನ್ನು ಗ್ರಾಮ ಸಭೆಯಲ್ಲಿ ತೋರಿಸಲು ಗ್ರಾಮ ಪಂಚಾಯತಿಯವರು ಏರ್ಪಡಿಸಿದ್ದರು. ಹಿಂದಿಯಲ್ಲಿ ಮಾತನಾಡುವುದನ್ನು ಕನ್ನಡದಲ್ಲಿ ತರ್ಜುಮೆಮಾಡಿ ತಿಳಿಸಲು ವಿಶೇಷ ಗ್ರಾಮ ಸಭೆಗಳು ನಡೆಯುವ ಗ್ರಾಮಗಳಿಗೆ ವಿಧ್ಯಾ ಇಲಾಖೆಯ ಸ್ಥಳೀಯ ಹಿಂದಿ ಶಿಕ್ಷಕರನ್ನು ನಿಯೋಜಿಸಿದ್ದರು. ಗೌರವಾನ್ವಿತ ಶ್ರೀ ನರೇಂದ್ರ ಮೋದಿ, ಮಾನ್ಯ ಪ್ರಧಾನ ಮಂತ್ರಿಗಳು ಭಾರತ ಸರ್ಕಾರರವರ "ಮನ್ ಕೀ ಬಾತ್" ಕಾರ್ಯಕ್ರಮದ ಭಾಷಣವನ್ನು ಜೆಆರ್‌ಡಿ ಟಾಟಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಜೆಮ್‌ಷೆಡ್‌ಪುರ (ಜಾರ್ಖಂಡ್)ನಿಂದ ದೇಶಾದ್ಯಂತ ಇರುವ ಎಲ್ಲಾ ಗ್ರಾಮ ಪಂಚಾಯತಿಗಳನ್ನು ಉದ್ದೇಶಿಸಿ ಮಾತನಾಡಿದ್ದು, 14ನೇ ಹಣಕಾಸು ಆಯೋಗದ ಮೂಲಕ ಗ್ರಾಮ ಪಂಚಾಯತ್ ವಿಕಾಸ ಯೋಜನೆಗಾಗಿ 5 ವರ್ಷಗಳಿಗಾಗಿ ನೀಡಲಾದ ಅನುದಾನ, ಗ್ರಾಮೀಣಾಭಿವೃಧ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದಿಂದ ನೀಡಿರುವ "ಗ್ರಾಮ ಸಭಾ ಓದುವಿಕೆ ಪುಸ್ತಕ"ದ 25 ಕಾರ್ಯಕ್ರಮಗಳನ್ನು ಓದಿ ತಿಳಿಸಲಾಯಿತು.

"ನಮ್ಮ ಗ್ರಾಮ ನಮ್ಮ ಯೋಜನೆ", "ಸ್ವಚ್ಛ ಭಾರತ ಮಿಷನ್", "ಗ್ರಾಮ ಪಂಚಾಯತ್ ಅಭಿವೃದ್ಧಿ ಯೋಜನೆ" "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ" "ಗ್ರಾಮೀಣ

ಕುಡಿಯುವ ನೀರು ಮತ್ತು ನೈರ್ಮಲ್ಯ" ಕಾರ್ಯಕ್ರಮಗಳು, ವಿವಿಧ ವಸತಿ ಯೋಜನೆಗಳು, ಮೂಲಭೂತ ಸೌಕರ್ಯ್ಯ, ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಗಳ ಎಲ್ಲಾ ಯೋಜನೆಗಳ ಕಾರ್ಯಕ್ರಮಗಳು ಹಾಗೂ ಇನ್ನಿತರ ಕಾರ್ಯಕ್ರಮಗಳ ಕುರಿತು ಗ್ರಾಮ ಸಭೆಗಗಳಲ್ಲಿ ವಿಮರ್ಶೆ ಮಾಡಿ ವಿಶೇಷ ಗ್ರಾಮ ಸಭೆ ನಡೆಯುವ ಮುಂಚೆ ನಾಡ ಗೀತೆಯನ್ನು ಹಾಡಿ ಗ್ರಾಮ ಸಭೆಯು ಮುಗಿಯುವ ಮುಂಚೆ ರಾಷ್ಟ್ರಗೀತೆಯನ್ನು ಹಾಡಿ ವಿಶೇಷ ಗ್ರಾಮ ಸಭೆಗಳನ್ನು ಮುಕ್ತಾಯಗೊಳಿಸಿ ನಡೆಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸಕ್ತ ವರ್ಷ ಡಾ॥ ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವಾರ್ಷಿಕೋತ್ಸವವಾದ್ದರಿಂದ ಗ್ರಾಮ ಪಂಚಾಯತಿಗಳು ಡಾ॥ ಬಿ.ಆರ್.ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಸ್ಮರಣೆ ಅಥವಾ ಚರ್ಚೆ ಮಾಡುವುದರ ಮೂಲಕ ಸಾಮಾಜಿಕ ಸಾಮರಸ್ಯ ಕಾಪಾಡಲು ಶ್ರಮಿಸುವುದು. ಕ್ಷೇತ್ರ ಇಲಾಖೆಗಳ ತಳಮಟ್ಟದ ಅಧಿಕಾರಿ ಸಿಬ್ಬಂದಿಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕೇಂದ್ರ ಪುರಸ್ಕೃತ ಯೋಜನೆಗಳು ಮತ್ತು ರಾಜ್ಯ ಪುರಸ್ಕೃತ ಯೋಜನೆಗಳು ಮತ್ತು ಇತರೆ ಯೋಜನಗಳನ್ನು ಮನವರಿಕೆ ಮಾಡಿ "ಗ್ರಾಮೋದಯದಿಂದ ಭಾರತೋದಯ ಅಭಿಯಾನ" ದಿನಾಂಕ: 24.04.2016 ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸವನ್ನು ಆಚರಣೆ ಮಾಡಿ ವಿಶೇಷ ಗ್ರಾಮ ಸಭೆಗಳಿಗೆ ಮಾಲೂರು ತಾಲ್ಲೂಕು ಪಂಚಾಯತಿ ಆಡಳಿತಾಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಕೋಲಾರರವರು, ಸಹಾಯಕ ಯೋಜನಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಕೋಲಾರರವರು, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಮಾಲೂರು ಗ್ರಾಮಗಳಲ್ಲಿ ನಡೆಯುವ ವಿಶೇಷ ಗ್ರಾಮ ಸಭೆಗಳಲ್ಲಿ ಪಾಲ್ಗೊಂಡು ಈ ಸಂಬಂಧಿಸಿದ ವಿಡಿಯೋ ಚಿತ್ರಣ, ಛಾಯಾಚಿತ್ರ ಮತ್ತು ದಾಖಲೀಕರಣವನ್ನು ಪರಿಶೀಲಿಸಿದರು.

### ಅಂತಿಮ ಸಂಕ್ಷಿಪ್ತ ವರದಿ:

"ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನ" ಅಂದರೆ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯೇ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗುತ್ತದೆ ಎಂಬ ರಾಷ್ಟ್ರಪತಿ ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ ಮಂತ್ರದ ಧ್ಯೇಯೋದ್ದೇಶದೊಂದಿಗೆ ಏಪ್ರಿಲ್ 14 ರಿಂದ 24-4-2016ರ ವರೆಗೆ ಭಾರತ ಸರ್ಕಾರದ ವತಿಯಿಂದ ಮಾರ್ಗಸೂಚಿ ಮತ್ತು ಸುತ್ತೋಲೆ ಪ್ರಕಾರ ಮಾಲೂರು ತಾಲ್ಲೂಕು, ಮಾಲೂರು ವಿಧಾನ ಸಭಾ ಕ್ಷೇತ್ರದ ಗೌರವಾನ್ವಿತ ಶ್ರೀ ಕೆ.ಎಸ್.ಮಂಜುನಾಥಗೌಡ ರವರ ನೇತೃತ್ವದಲ್ಲಿ ಅವರ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಂತೆ ಡಾ॥ ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವಾರ್ಷಿಕೋತ್ಸವ ಸಮಾರಂಭವನ್ನು ಮಾಲೂರು ತಾಲ್ಲೂಕಿನ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳ ಮತ್ತು ಸಿಬ್ಬಂದಿ ವರ್ಗದವರ ಸಂಪೂರ್ಣ ಸಹಕಾರ ಮತ್ತು ಸಹಯೋಗದೊಂದಿಗೆ ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನ್ ಕಾರ್ಯಕ್ರಮವನ್ನು 28 ಗ್ರಾಮ ಪಂಚಾಯತಿಗಳ ಮೂಲಕ ತಾಲ್ಲೂಕಿನಾದ್ಯಂತ 369 ಗ್ರಾಮಗಳಿಗೆ ಮನವರಿಕೆಯಾಗುವ ರೀತಿಯಲ್ಲಿ ನಡೆಸಲಾಗಿರುತ್ತದೆ. ಈ ಕಾರ್ಯಕ್ರಮದ ವಿಕ್ಷಣೆಗೆ ದಿನಾಂಕ: 21.04.2016ರಂದು ಭಾರತ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಗಳು ಹಾಗೂ ಕರ್ನಾಟಕ ರಾಜ್ಯ ನೋಡಲ್ ಅಧಿಕಾರಿಗಳಾದ ಗೌರವಾನ್ವಿತ ಶಶಿಕುಮಾರ್‌ರವರು ಮೇಲ್ವಿಚಾರಣೆ ಮಾಡಲು ಆಗಮಿಸಿದ್ದು, ಇವರ ಜೊತೆಗೆ ಮಾಲೂರು ತಾಲ್ಲೂಕು ಪಂಚಾಯತಿ ಆಡಳಿತಾಧಿಕಾರಿಗಳು ಹಾಗೂ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಕೋಲಾರರರವರು, ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಕೋಲಾರರವರು ಸಹ ಆಗಮಿಸಿ ಸಮಗ್ರ ವರದಿ ನೀಡಿರುತ್ತಾರೆ. ❄

# ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ

**ವರದಿ**



**ರಾಚಯ್ಯ ಚೌಕಿಮಠ**

ಜೆಮಶೆಡ್‌ಪುರದಲ್ಲಿ ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು ೩೦೦೦ ಜನ ಪ್ರತಿನಿಧಿಗಳನ್ನು ಒಟ್ಟಿಗೆ ಸೇರಿಸಿ "ಗ್ರಾಮ ಉದಯ್ ಸೇ ಭಾರತ ಉದಯ್ ಅಭಿಯಾನ್" ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು "ರಾಷ್ಟ್ರದ ಜನರ ಅಭಿವೃದ್ಧಿಯ ಜೀವನಾಡಿ ದೇಶದ ಸಮಸ್ತ ಗ್ರಾಮಗಳಲ್ಲಿ ನೆಲೆಯುರಿದ್ದು, ಗ್ರಾಮಗಳ ಅಭಿವೃದ್ಧಿಯಿಂದ ದೇಶವು ಖಂಡಿತವಾಗಿ ಅಭಿವೃದ್ಧಿಯಾಗುವುದರಲ್ಲಿ ಎರಡು ಮಾತಿಲ್ಲ" ಎಂಬಂತೆ ಗ್ರಾಮ ಸ್ವರಾಜ್ಯದ ಕನಸನ್ನು ಕಂಡಿದ್ದರು. ಈ ಹಿನ್ನೆಲೆಯಲ್ಲಿ 2016ರ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯ ಅಂಗವಾಗಿ "ಗ್ರಾಮಗಳ ಅಭಿವೃದ್ಧಿಯಿಂದ ಭಾರತದ ಅಭಿವೃದ್ಧಿ" ಎಂಬ 10 ದಿನಗಳ ಅಭಿಯಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಳಮಟ್ಟದಿಂದಲೇ



ಬಲಪಡಿಸುವುದಕ್ಕೆ ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಮೊದಲು ಪ್ರತಿವರ್ಷ ನವದೆಹಲಿಯ ವಿಜ್ಞಾನಭವನದಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯನ್ನು ಮಾಡಲಾಗುತ್ತಿತ್ತು. ಮೊಟ್ಟಮೊದಲ ಬಾರಿಗೆ ರಾಷ್ಟ್ರ ರಾಜಧಾನಿಯಿಂದ ಹೊರಗೆ ಅಂದರೆ ಜಾರ್ಖಂಡ್ ರಾಜ್ಯದ ಬಿರ್ಸಾ ಮುಂಡಾರ ಜನ್ಮಸ್ಥಳ ಹಾಗೂ ಛೋಟಾ ನಾಗಪುರವೆಂದೇ ಪ್ರಸಿದ್ಧಿಯಾದ ಜೆಮಶೆಡ್‌ಪುರದಲ್ಲಿ ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 3000 ಜನಪ್ರತಿನಿಧಿಗಳನ್ನು ಒಟ್ಟಿಗೆ ಒಂದೇ ಸ್ಥಳದಲ್ಲಿ ಸೇರಿಸಿ "ಗ್ರಾಮೋದಯ ಸೇ ಭಾರತ ಉದಯ್ ಅಭಿಯಾನ್" ಕಾರ್ಯಕ್ರಮದ ಸಮಾರೋಪ ಸಮಾರಂಭ ಮಾಡಿದರು. ಈ ಮೂಲಕ ಕೇಂದ್ರ ಸರ್ಕಾರದ ಆಡಳಿತವನ್ನು ರಾಷ್ಟ್ರ ರಾಜಧಾನಿ ಸ್ಥಳದಿಂದ ಸಾಮಾನ್ಯ ಜನರವರೆಗೆ ತಲುಪಿಸಿದಂತಾಗಿದೆ. ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ

ಸಹಾಯಕರು, ಜಿಲ್ಲಾ ಪಂಚಾಯತ್ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ನೀಡುವುದನ್ನು ರೂಢಿಸಿಕೊಂಡು ಬಂದಿದೆ. ಈ ರೀತಿಯಾಗಿ ರಾಜ್ಯಗಳಿಗೆ ಅಧಿಕಾರ ಹಂಚಿಕೆಯ ಸೂಚ್ಯಾಂಕ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಹಾಗೂ ರಾಷ್ಟ್ರೀಯ ಗ್ರಾಮ ಸಭಾ ಪುರಸ್ಕಾರ ನೀಡಿ ಗೌರವಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಇ-ಪಂಚಾಯತ್‌ನಲ್ಲಿ ಪ್ರಥಮ ಸ್ಥಾನ ಹಾಗೂ ಅಧಿಕಾರ ಹಂಚಿಕೆಯ ಸೂಚ್ಯಾಂಕದ ಅಧ್ಯಯನದಲ್ಲಿ 3ನೇ ಶ್ರೇಯಾಂಕ ಮತ್ತು ರಾಜ್ಯದ 8 ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪಂಚಾಯಿತಿ ಸಶಕ್ತೀಕರಣ ಪುರಸ್ಕಾರ ಹಾಗೂ ರಾಷ್ಟ್ರೀಯ ಗ್ರಾಮ ಸಭಾ ಪುರಸ್ಕಾರಗಳನ್ನು ಪಡೆದವು.

ಮಾನ್ಯ ಪ್ರಧಾನ ಮಂತ್ರಿಗಳು ರಾಷ್ಟ್ರದ ಸಮಸ್ತ ಗ್ರಾಮ ಸಭೆಗಳನ್ನು ಉದ್ದೇಶಿಸಿ, ರಾಷ್ಟ್ರಿಯ ಪಂಚಾಯತ್ ರಾಜ್ ಸಮಾರೂಪ ಸಮಾರಂಭದಲ್ಲಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಮಾತನಾಡಿದರು.

- ರಾಷ್ಟ್ರದ ಸಾಮಾನ್ಯ ಜನತೆಗೆ ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಹಾಗೂ ಆಧುನಿಕ ಸೌಲಭ್ಯಗಳು ಸುಲಭವಾಗಿ ದೊರೆಯುವಂತೆ ಮಾಡಲು ಡಿಜಿಟಲ್ ಇಂಡಿಯಾ ಕಾರ್ಯಕ್ರಮ ಮೂಲಕ ದೇಶದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆಪ್ಟಿಕಲ್ ಫೈಬರ್ ನೆಟವರ್ಕ್‌ನ್ನು ಅಳವಡಿಸುವುದರೊಂದಿಗೆ ಬೆರಳ ತುದಿಯಲ್ಲಿಯೇ ವಿಶ್ವದ ಮಾಹಿತಿಯನ್ನು ಪಡೆಯುವಂತೆ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.
- ರಾಷ್ಟ್ರದ ಯಾವುದೇ ಮಗುವು ಅಪೌಷ್ಟಿಕತೆಯಿಂದ ಬಳಲಬಾರದೆಂದು ಇಂದ್ರಧನುಷ್ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದ್ದು, ಈ ಕಾರ್ಯಕ್ರಮದಲ್ಲಿ ಶಿಶು ಮತ್ತು ತಾಯಿಯಂದಿರ ಆರೋಗ್ಯವನ್ನು ಕಾಪಾಡುವುದು ಮತ್ತು ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸೂಕ್ತ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತಿದೆ.
- ಗ್ರಾಮಗಳಲ್ಲಿರುವ ಜನ ಪ್ರತಿನಿಧಿಗಳು ಆಯಾ ಗ್ರಾಮ ಪಂಚಾಯತಿಗಳಲ್ಲಿ ಬರುವ ಶಾಲೆಗಳಿಗೆ ಮಕ್ಕಳು ಸರಿಯಾಗಿ ಶಾಲೆಗೆ ತೆರಳದಿದ್ದರೆ ಅವರನ್ನು ಒಂದು ಬಾರಿ ಪ್ರಶ್ನಿಸುವಂತೆ ತಿಳಿಸಿದರು. ಈ ರೀತಿಯಾಗಿ ಪ್ರಶ್ನಿಸಿದಾಗ ಮಕ್ಕಳ ಪೋಷಕರ, ಶಾಲೆಗಳ ಶಿಕ್ಷಕರ ಮತ್ತು ಆಡಳಿತ ವರ್ಗದವರ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸಿದಂತಾಗುತ್ತದೆ. ಈ ಮೂಲಕ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗುವುದನ್ನು ತಪ್ಪಿಸಿದಂತಾಗುವುದು. ಈ ರೀತಿಯಾಗಿ ಸರ್ವರಿಗೂ ಶಿಕ್ಷಣ ದೊರೆಯುವಂತೆ ಆಯಾ ಗ್ರಾಮ ಪಂಚಾಯತಿಗಳ ಮುಖ್ಯಸ್ಥರು ಹಾಗೂ ಸರ್ವಸದಸ್ಯರು ಗಮನ ಹರಿಸಬೇಕು.
- ದೇಶದ ಗ್ರಾಮಗಳು ಹಾಗೂ ನಗರಗಳನ್ನು ಗಮನ ಹರಿಸಿದಾಗ ಬಹಳ ವ್ಯತ್ಯಾಸ ಕಂಡುಬಂದಿದ್ದು, ಈ ಮೂಲಕ ಗ್ರಾಮಗಳ ಮತ್ತು ನಗರಗಳ ಅಂತರಗಳನ್ನು ಕಡಿಮೆ ಮಾಡಲು ನಗರಗಳಿಗೆ ಯಾವ ಸೌಲಭ್ಯಗಳು ದೊರೆಯುತ್ತಿವೆಯೋ ಆ ಸೌಲಭ್ಯಗಳು ಗ್ರಾಮಗಳಿಗೂ ಖಂಡಿತವಾಗಿ ಲಭಿಸಬೇಕಾಗಿದೆ. ಗ್ರಾಮಗಳಿಗೆ ವಿದ್ಯುತ್ ಹಾಗೂ ರಸ್ತೆ ಸಂಪರ್ಕದ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ. ಈ ರೀತಿಯಾಗಿ ವಿದ್ಯುತ್ ಸಂಪರ್ಕವಿಲ್ಲದ 18 ಸಾವಿರ ಹಳ್ಳಿಗಳಿಗೆ ಮುಂದಿನ ಸಾವಿರ ದಿನಗಳಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುವುದೆಂದು ಆಗಸ್ಟ್ ತಿಂಗಳಲ್ಲಿ ಘೋಷಿಸಿದ್ದು, ಈ ಕಾರ್ಯಕ್ರಮವನ್ನು ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ಗ್ರಾಮ ಪಂಚಾಯತಿಗಳ ಜನಪ್ರತಿನಿಧಿಗಳು ಸಹಕರಿಸಬೇಕೆಂದು ತಿಳಿಸಿದರು.
- ಈ ಮೊದಲು ಗ್ರಾಮ ಪಂಚಾಯತಿಗಳನ್ನು ಅಭಿವೃದ್ಧಿ ಮಾಡಲು ಹಣಕಾಸಿನ ಕೊರತೆ ಕಾಡುತ್ತಿತ್ತು. ಆದರೆ, ಈಗ 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಮುಂದಿನ 5 ವರ್ಷಗಳ ಅವಧಿಯವರೆಗೆ ಅಂದಾಜು ರೂ.2.00ಲಕ್ಷ ಕೋಟಿಗಳಿಂದ ಹೆಚ್ಚಿನ ಅನುದಾನವನ್ನು ನೇರವಾಗಿ ಗ್ರಾಮ



ಪಂಚಾಯತಿಗಳಿಗೆ ಸೇರಲಿದೆ. ಅಲ್ಲದೇ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುದಾನವು ಸಹಿತ ಗ್ರಾಮ ಪಂಚಾಯತಿಗಳಿಗೆ ತಲುಪುತ್ತಿದೆ. ಈ ರೀತಿಯಾಗಿ ಸರ್ಕಾರದ ಯೋಜನೆಗಳಿಗೆ ಬರವಿಲ್ಲ. ಆದರೆ, ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಗೊಳಿಸಿ, ಸಮರ್ಪಕವಾಗಿ ಹಣದ ಬಳಕೆ ಯಾಗುತ್ತಿದೆಂದು ಖಾತರಿಪಡಿಸುವುದು ಹಾಗೂ ಅನುದಾನವು ನೇರವಾಗಿ ಫಲಾನುಭವಿಗಳಿಗೆ ತಲುಪುವಂತೆ ಮಾಡುವುದು ಹಾಗೂ ಇದರೊಂದಿಗೆ ಗ್ರಾಮಗಳ ಅಭಿವೃದ್ಧಿ ಮಾಡುವುದು ಆಯಾ ಗ್ರಾಮಗಳ ಜನ ಪ್ರತಿನಿಧಿಗಳು ಸದಾ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಿ, ಎಲ್ಲರಿಗೂ ಮಾದರಿಯಾಗ ಬೇಕಾಗಿದೆ. ಈ ರೀತಿಯಾಗಿ ವರ್ತಿಸುವುದನ್ನು ಗಮನಿಸಿ ಅಧಿಕಾರಿಗಳು ತಮ್ಮ ಕೆಲಸವನ್ನು ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ.

- ದೇಶದ ಎಲ್ಲಾ ಗ್ರಾಮಗಳು ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮಗಳಾಗಬೇಕು. ಈ ಮೂಲಕ ನಾಡಿನ ಮಹಿಳೆಯರ, ತಾಯಂದಿರ ಹಾಗೂ ಸಹೋದರಿಯರು ಎದುರಿಸುತ್ತಿರುವ ಸಮಸ್ಯೆಯು ದೂರವಾದಂತಾಗುತ್ತದೆ.

**ಅಧಿಕಾರ ಹಂಚಿಕೆಯ ಸೂಚ್ಯಾಂಕದ ಅಧ್ಯಯನದ ಸಂಕ್ಷಿಪ್ತ ಹಿನ್ನೆಲೆ:**

ಕೇಂದ್ರದ ಮಾಜಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಣಿಶಂಕರ್ ಅಯ್ಯರ್ ನೇತೃತ್ವದ ಸಮಿತಿಯು ನೀಡಿದ ಶಿಫಾರಸ್ಸುಗಳಂತೆ ರಾಜ್ಯಗಳಲ್ಲಿ ಕ್ರಮಬದ್ಧವಾಗಿ ಚುನಾವಣೆಗಳನ್ನು ನಡೆಸುವುದು, ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸುವುದು, ರಾಜ್ಯಗಳ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವುದು, 73ನೇ ತಿದ್ದುಪಡಿ ಅನುಸಾರ ರಾಜ್ಯಗಳು ಅನುದಾನ, ಅಧಿಕಾರ ಹಾಗೂ ಸಿಬ್ಬಂದಿಗಳ ಹಂಚಿಕೆಯನ್ನು ಮಾಡುವುದಾಗಿತ್ತು. ಶಿಫಾರಸ್ಸುಗಳಲ್ಲೊಂದಾದ ರಾಜ್ಯಗಳು ಅನುದಾನ, ಅಧಿಕಾರ ಹಾಗೂ ಸಿಬ್ಬಂದಿಗಳ ಹಂಚಿಕೆ ಮಾಡಿರುವ ಬಗ್ಗೆ ಅಧ್ಯಯನವನ್ನು ಕೇಂದ್ರ ಸರ್ಕಾರವು ಪ್ರತಿ ವರ್ಷವು ಪಾರದರ್ಶಕವಾಗಿರಲೀ ಎಂದು ಮೂರನೇ ಸಂಸ್ಥೆಯಿಂದ ಕಳೆದ ಹಲವಾರು ವರ್ಷಗಳಿಂದ ವರದಿಯನ್ನು ತಯಾರಿಸಿಕೊಂಡು ಬರುತ್ತಿದೆ. ಅದರಂತೆ ಮೊದಲ ವರ್ಷ ನ್ಯಾಷನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಎಕೋನಾಮಿಕ್ ರಿಸೋರ್ಸಸ್ ಸಂಸ್ಥೆ, ನಂತರ 5 ವರ್ಷಗಳ ಕಾಲ ದೆಹಲಿಯ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಪ್ ಪಬ್ಲಿಕ್ ಆಡ್ಮಿನಿಸ್ಟ್ರೇಶನ್ ಹಾಗೂ ಕಳೆದ 2 ವರ್ಷಗಳಿಂದ ಮುಂಬೈನ ಟಾಟಾ ಸಾಮಾಜಿಕ ವಿಜ್ಞಾನಗಳ ಸಂಸ್ಥೆಯಿಂದ ಅಧಿಕಾರ ಹಂಚಿಕೆಯ ಸೂಚ್ಯಾಂಕದ ಅಧ್ಯಯನವನ್ನು ಮಾಡಿ ವರದಿಯನ್ನು ಪಡೆಯಲಾಗುತ್ತಿದೆ. ರಾಜ್ಯ ಸರ್ಕಾರವು ನೀಡಿದ ಮಾಹಿತಿಯನ್ನು ಪಡೆದುಕೊಂಡು ಟಾಟಾ ಸಾಮಾಜಿಕ ವಿಜ್ಞಾನಗಳ ಸಂಸ್ಥೆಯ 35 ಜನ ತಜ್ಞರ ತಂಡವು ಅಧ್ಯಯನವನ್ನು ನಡೆಸಿ ವರದಿಯನ್ನು ಸಲ್ಲಿಸಿದೆ. ಈ ವರದಿಯಲ್ಲಿ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್ ರಾಜ್ ಇಲಾಖೆಗೆ 3ನೇ ಶ್ರೇಯಾಂಕ ಪಡೆದು ಪ್ರಶಸ್ತಿಗೆ ಭಾಜನವಾಯಿತು.

**ಇ–ಪಂಚಾಯತ್ ಪ್ರಶಸ್ತಿ:**

ಭಾರತ ಸರ್ಕಾರದ 11 ಪಂಚಾಯತ್ ಎಂಟರ್‌ಪ್ರೈಸಸ್ ತಂತ್ರಾಂಶಗಳನ್ನು ಸಮರ್ಪಕವಾಗಿ ಬಳಕೆ ಮಾಡುವುದು ಹಾಗೂ ಅವುಗಳನ್ನು ಬಳಸಿಕೊಂಡು ನಾವಿನ್ಯತಾ ಚಟುವಟಿಕೆಗಳಲ್ಲಿ ಅವಳವಡಿಸಿಕೊಂಡು ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪುವಂತೆ ಮಾಡುವುದು ಹಾಗೂ ಮಾನವ ಸಂಪನ್ಮೂಲವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡಿರುವ ಆಯಾ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಂಕಿ–ಅಂಶಗಳನ್ನು ಗಮನಿಸಿ, ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಪ್ರತಿ ವರ್ಷ ಶ್ರೇಯಾಂಕವನ್ನು ನೀಡುತ್ತಿದೆ. ಅದರಂತೆ, ಈ ಬಾರಿ ಕರ್ನಾಟಕ ರಾಜ್ಯವು ಒಂದನೇ ಶ್ರೇಯಾಂಕ ಪಡೆದು ಪ್ರಶಸ್ತಿಯನ್ನು ಪಡೆದುಕೊಂಡಿದೆ. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೆಲವು ಉತ್ತಮವಾದ ತಂತ್ರಾಂಶಗಳಾದ ಪಂಚತಂತ್ರ ಹಾಗೂ ಗಾಂಧಿ ಸಾಕ್ಷಿ ಕಾಯಕಗಳಂತಹ ತಂತ್ರಾಂಶಗಳನ್ನು ಬಳಸಿಕೊಳ್ಳುತ್ತಿದೆ. ಈ ತಂತ್ರಾಂಶಗಳು ಕೇಂದ್ರ ಸರ್ಕಾರದ ಪ್ರಶಂಸೆಗೆ ಪಾತ್ರವಾಗಿವೆ.

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂದಿರುವ ಪ್ರಶಸ್ತಿಗಳು:**

**ಪಂಚಾಯತಿ ಸಶಕ್ತೀಕರಣ ಪುರಸ್ಕಾರ್:**

ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಡಿಯ ಎನ್.ಪಿ.ಟಿ.ಎ. ಯಡಿಯಲ್ಲಿ ಕಳೆದ ಆರ್ಥಿಕ ವರ್ಷ ಮಾಡಿರುವ ಸಾಧನೆ ಮತ್ತು ಅಭಿವೃದ್ಧಿಯನ್ನಾಧರಿಸಿ ರಾಜ್ಯಗಳ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ. ಈ ಪ್ರಶಸ್ತಿಗೆ ರಾಜ್ಯದ ಬೆಂಗಳೂರು ನಗರ ಜಿಲ್ಲಾ ಪಂಚಾಯತಿ, ಮಡಿಕೇರಿ ಹಾಗೂ ಅಫ್ಜಲ್‌ಪುರ ತಾಲ್ಲೂಕು ಪಂಚಾಯತಿ ಮತ್ತು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಶಿರಗುಪ್ಪಿ ಗ್ರಾಮ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕಿನ ಶಿಗೇಹಳ್ಳಿ, ಕಣ್ಣೂರು ಹಾಗೂ ಆವಲಹಳ್ಳಿ ಗ್ರಾಮ



ಪಂಚಾಯತಿಗಳು ಕೊರಳೊಡ್ಡಿವೆ. ಈ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಶಿರಗುಪ್ಪಿ ಗ್ರಾಮ ಪಂಚಾಯತಿಯು ಈ ಮೊದಲು 7 ಪ್ರಶಸ್ತಿಗಳನ್ನು ಪಡೆದಿರುತ್ತದೆ. ಅದರಂತೆ ಕಣ್ಣೂರು ಗ್ರಾಮ ಪಂಚಾಯತಿ ಹಾಗೂ ಅಫ್ಜಲ್‌ಪುರ ತಾಲ್ಲೂಕು ಪಂಚಾಯತಿಯು ಎರಡನೇ ಬಾರಿ ಪಂಚಾಯತಿ ಸಶಕ್ತೀಕರಣ ಪುರಸ್ಕಾರ ಪ್ರಶಸ್ತಿಯನ್ನು ಪಡೆಯಿತು. ಅಲ್ಲದೇ ಶಿಗೇಹಳ್ಳಿ ಗ್ರಾಮ ಪಂಚಾಯತಿಯು ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರವನ್ನು ಪಡೆದುಕೊಂಡಿತ್ತು.

**ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ:**

ರಾಜ್ಯದಲ್ಲಿ ಅತ್ಯುತ್ತಮವಾಗಿ ಗ್ರಾಮ ಸಭೆಯನ್ನು ನಡೆಸಿದ ಒಂದು ಗ್ರಾಮ ಪಂಚಾಯತಿಗೆ ಪ್ರಶಸ್ತಿಯನ್ನು ನೀಡುತ್ತಾ ಬರಲಾಗುತ್ತಿದೆ. ಅದರಂತೆ, ಕಳೆದ ಆರ್ಥಿಕ ಸಾಲಿನಲ್ಲಿ ಉತ್ತಮವಾಗಿ ಗ್ರಾಮ ಸಭೆಯನ್ನು ನಡೆಸಿದ ಹಾಗೂ ದಾಖಲೆಗಳನ್ನು ನಿರ್ವಹಿಸಿದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಖಂಡಿಕ ಗ್ರಾಮ ಪಂಚಾಯತಿಗೆ ಪ್ರಶಸ್ತಿಯು ಸಂಧಾನವಾಗಿದೆ.

ಈ ಅದ್ಭುತವಾದ ಕಾರ್ಯಕ್ರಮವನ್ನು ವೀಕ್ಷಿಸಲು ರಾಜ್ಯದ 103 ಜನಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರು ತೆರಳಿದ್ದರು. ಈ ರೀತಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಸರಿಯಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಂಡಲ್ಲಿ ದೇಶದ ಗ್ರಾಮಗಳು ಅಭಿವೃದ್ಧಿ ಪಥದತ್ತಸಾಗಿ, ಭಾರತವು ಶಕ್ತಿಶಾಲಿ ದೇಶವಾಗುವುದು. ಈ ಮೂಲಕ 'ರಾಷ್ಟ್ರಪಿತ ಕನಸು ಸಾಕಾರಗೊಂಡು 21ನೇ ಶತಮಾನದಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳು ಭಾರತದತ್ತ ನೋಡಲಿ' ಎಂದು ಆಶಿಸುತ್ತೇನೆ.

❄

ವರದಿ

# ದೇವರನಾವದಗಿಯಲ್ಲಿ ಪಂಚಾಯತ್ ರಾಷ್ಟ್ರೀಯ ದಿನಾಚರಣೆ
# ಗ್ರಾಮಗಳ ಆರ್ಥಿಕ ವಿಕಾಸಕ್ಕೆ ಗ್ರಾಮಸಭೆಗಳು ಸಹಕಾರಿ



ಬಂಡೆಪ್ಪ ತೇಲಿ

ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬನೆಗೊಳ್ಳಲು ಸಂಪನ್ಮೂಲ ಕ್ರೋಢೀಕರಣ ಅತ್ಯಾವಶ್ಯಕವಾಗಿದೆ.

ವಿಜಯಪುರ – ದೇಶದ ಪ್ರತಿ ಗ್ರಾಮಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿ ಪಡಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಗ್ರಾಮೀಣ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳ ಸಮರ್ಪಕ ಅನುಷ್ಠಾನಕ್ಕೆ ಗ್ರಾಮದ ಪ್ರತಿಯೊಬ್ಬ ನಾಗರಿಕನ ಸಹಭಾಗಿತ್ವ ಅಗತ್ಯವಾಗಿದೆ ಎಂದು ದೇವರನಾವದಗಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಶ್ರೀಮತಿ ಮಲ್ಲಮ್ಮ ಭಗವಂತರಾಯ ಗುಗ್ಗರಿ ಹೇಳಿದರು.



ಅವರು ಸಿಂಧಗಿ ತಾಲ್ಲೂಕಿನ ದೇವರನಾವದಗಿಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತಿಗಳ ಸಂಯುಕ್ತ ಆಶ್ರಯದಲ್ಲಿ ಪಂಚಾಯತ್ ರಾಷ್ಟ್ರೀಯ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಗ್ರಾಮಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಳೀಯ ನಾಗರಿಕರಿಗೆ ನೇರವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುವುದೇ ಗ್ರಾಮಸಭೆಯ ಮೂಲ ಉದ್ದೇಶವಾಗಿದೆ. ಗ್ರಾಮಸಭೆಗಳು ಕಾಟಾಚಾರಕ್ಕೆ ಸೀಮಿತಗೊಳಿಸದೆ ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣವಾಗಿ ನಡೆಸುವದು

ಕಾರ್ಯದರ್ಶಿ, ದೇವರನಾವದಗಿ ಗ್ರಾಮ ಪಂಚಾಯತಿ, ತಾ।। ಸಿಂದಗಿ, ಜಿ।। ವಿಜಯಪುರ




ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಇದರಿಂದ ಸರ್ಕಾರದ ಯೋಜನೆಗಳ ಸೌಲಭ್ಯಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ತಲುಪಿಸುವಲ್ಲಿ ಗ್ರಾಮಸಭೆಗಳ ಪಾತ್ರ ಮಹತ್ವದ್ದಾಗಿದೆ ಅಲ್ಲದೆ ಗ್ರಾಮಗಳ ಅರ್ಥಿಕ ವಿಕಾಸಕ್ಕೆ ಗ್ರಾಮಸಭೆಗಳು ಸಹಕಾರಿಯಾಗಿವೆ ಎಂದರು.

ಪ್ರಾಸ್ತಾವಿಕವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವಿ.ಎಸ್. ಕಬಾಡೆ ಮಾತನಾಡಿ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಸ್ವಚ್ಛ ಭಾರತ ಯೋಜನೆ, ಗ್ರಾಮ ವಿಕಾಸ ಯೋಜನೆ, ನಮ್ಮ ಗ್ರಾಮ ನಮ್ಮ ಯೋಜನೆ ವಿವಿಧ ವಸತಿ ಯೋಜನೆಗಳು ಸೇರಿದಂತೆ ಗ್ರಾಮೀಣ ಜನರಿಗೆ ಈ ಎಲ್ಲ ಯೋಜನೆಗಳ ಅರಿವು ಮೂಢಿಸಲು ಗ್ರಾಮಸಭೆಗಳು ವೇದಿಕೆಯಾಗಿವೆ ಎಂದರು.

ಕಾರ್ಯದರ್ಶಿ ಬಂಡೆಪ್ಪ ತೇಲಿ ಮಾತನಾಡಿ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬನೆ ಗೊಳ್ಳಲು ಸಂಪನ್ಮೂಲ ಕ್ರೋಢೀಕರಣ ಅತ್ಯಾವಶ್ಯಕವಾಗಿದ್ದು, ಗ್ರಾಮೀಣ ಜನರ ಮೂಲಸೌಲಭ್ಯಗಳಾದ ಕುಡಿಯುವ ನೀರು, ಬೀದಿ ದೀಪ, ರಸ್ತೆ, ಒಳಚರಂಡಿ, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಒದಗಿಸಲು ಸಂಪನ್ಮೂಲದ ಅಗತ್ಯತೆ ಅವಶ್ಯಕವಾಗಿರುತ್ತದೆ. ಸ್ಥಳೀಯ ಸಾರ್ವಜನಿಕರು ಭಾಗವಹಿಸಿ ತಮ್ಮ ತೆರಿಗೆಗಳನ್ನು ಸಕಾಲದಲ್ಲಿ ಭರಣಮಾಡಿ ಪಂಚಾಯತಿಯ ಅಭಿವೃದ್ಧಿ ಕಾರ್ಯದಲ್ಲಿ ತೊಡಗಬೇಕು ಹಾಗೂ ಸರ್ಕಾರ ದೇವರನಾವದಗಿ ಗ್ರಾಮ ಪಂಚಾಯತಿಯನ್ನು ಗ್ರಾಮ ವಿಕಾಸ ಯೋಜನೆಗೆ ಆಯ್ಕೆ ಮಾಡಲಾಗಿದ್ದು, ಗ್ರಾಮಸ್ಥರು ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಸಹಕಾರ ನೀಡಿದಲ್ಲಿ ಯೋಜನೆ ಯಶಸ್ವಿಯಾಗಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಪಂಚಾಯತ್ ಸದಸ್ಯರಾದ ಅಂಬಿಕಾ ಈರಣ್ಣ ಬಿರಾದಾರ, ಹಣಮಂತ ಬಾಸಗಿ, ಮಲಕಣ್ಣ ಕುಡಿ, ರಾಜು ಗಣಿಯಾರ, ಸುರೇಶ ವಡ್ಡರ, ಸಂಗಣ್ಣ ಗುಗ್ಗರಿ, ಲಕ್ಷ್ಮಣ ಮಾರಾತೆ, ಹಿರಿಯರಾದ ಬಸನಗೌಡ ಬಮ್ಮನಜೋಗಿ, ಭಗವಂತರಾಯ ಗುಗ್ಗರಿ, ಈರಣ್ಣಗೌಡ ಬಿರಾದಾರ, ಪಂಚಾಯತ್ ಮಾಜಿ ಅಧ್ಯಕ್ಷ ಶಿವಶರಣ ಗುಂದಗಿ, ಎಸ್.ಡಿ.ಎಂ.ಸಿ. ಅದ್ಯಕ್ಷ ಶಿವಲಿಂಗಪ್ಪ ಕುಮಸಗಿ ಮುಂತಾದವರು ಉಪಸ್ಥಿತರಿದ್ದರು.

ಶ್ರೀಶೈಲ ದೇಸುಣಗಿ ಸ್ವಾಗತಿಸಿದರು. ಸಿದ್ದು ತಳವಾರ ನಿರೂಪಿಸಿ ವಂದಿಸಿದರು.

❄

## ಲೇಖನ



ಎನ್. ಕೃಷ್ಣಪ್ಪ ಕೋಡಿಪಾಳ್ಯ

# ಅಣ್ಣಾ ಹಜಾರೆ– ಗಾಂಧಿಯುಗದ ಪಳೆಯುಳಿಕೆ

ಈ ದೇಶ ಕಂಡ ಮಹಾನ್ ಸುಧಾರಣಾವಾದಿ, ಗಾಂಧಿವಾದಿ, ದೇಶಪ್ರೇಮಿ, ಅಣ್ಣಾ ಹಜಾರೆ ಇಂದಿನ ಯುವ ಪೀಳಿಗೆಗೆ ದೇವದೂತರಂತೆ ಗೋಚರಿಸುತ್ತಾರೆ. ಕಲುಷಿತಗೊಂಡ ರಾಜಕೀಯ ವ್ಯವಸ್ಥೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಪಕ್ಷಾಂತರ ಇತ್ಯಾದಿ ಪಿಡುಗುಗಳಿಂದ ತತ್ತರಿಸುತ್ತಿದ್ದ ಈ ದೇಶದಲ್ಲಿ ಅಭದ್ರತೆ, ಗಂಡಾಂತರ, ಅಶಾಂತಿ ತಾಂಡವವಾಡುತ್ತಿರುವ ಈ ದಿನಗಳಲ್ಲಿ ಮರಳುಗಾಡಿನಲ್ಲಿ ಓಯಸಿಸ್‌ನಂತೆ ಗೋಚರವಾಗುವ ಅಣ್ಣಾ ಹಜಾರೆ ದೇಶ ಕಂಡ ಮಹಾನ್ ಮಾನವತಾವಾದಿ ಎನಿಸಿದ್ದಾರೆ.



ಅಣ್ಣಾ ಹಜಾರೆ ದೇಶ ಕಂಡ ಮಹಾನ್ ಮಾನವತಾವಾದಿ. ಗ್ರಾಮ ಸ್ವರಾಜ್ ಸ್ಥಾಪಿಸಿ ಜನರ ಕೈಗೆ ಅಧಿಕಾರ ಸಿಗಲು ಕಾರಣರಾದರು.

ನನಗೆ 2005ರ ಅಕ್ಟೋಬರ್ 22 ರಂದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್, ಹೈದರಾಬಾದ್ ಇಲ್ಲಿ 12 ದಿನಗಳ ಕಾಲ ತರಬೇತಿಗೆ ನಿಯೋಜಿಸಲಾಗಿತ್ತು. ಆಗ ಮಹಾರಾಷ್ಟ್ರದ ಪೂನಾ, ಮುಂಬೈ, ಔರಂಗಾಬಾದ್, ಅಹ್ಮದ್‌ನಗರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಾಗ ಅಹ್ಮದ್‌ನಗರ ಜಿಲ್ಲೆಯ ರಾಳೇಗಾವ್‌ಸಿದ್ಧಿ ಗ್ರಾಮದಲ್ಲಿ ನೆಲೆಸಿರುವ ಅಣ್ಣಾ ಹಜಾರೆಯವರನ್ನು ಭೇಟಿ ಮಾಡುವ ಸುಯೋಗ ಬಂತು. ಒಂದು ಕಾಲದಲ್ಲಿ ನೀರಿನ ಜಲವೇ ಬತ್ತಿ ಹೋಗಿ ಹಳ್ಳಿಯ ಜನರೆಲ್ಲಾ ಉದ್ಯೋಗ ಅರಸಿ ವಲಸೆ ಹೋಗುವ ಸ್ಥಿತಿಯಲ್ಲಿದ್ದಾಗ, ಭಾರತೀಯ ಸೇನೆಯಲ್ಲಿ 25 ವರ್ಷ ಸೇವೆ ಮಾಡಿ ನಿವೃತ್ತಿ ಬಳಿಕ ಹುಟ್ಟೂರಿಗೆ ವಾಪಸ್ ಆಗಿ ಹಳ್ಳಿ ಜನರನ್ನು ಸಾಂತ್ವನಪಡಿಸಲು ಗ್ರಾಮಾಭಿವೃದ್ಧಿ ಸಮಿತಿ ರಚಿಸಿ ಕುಡಿತ–ಜೂಜು–ಬೀಡಿ ಸೇವನೆ ತ್ಯಜಿಸಲು

ನಿರ್ದೇಶಕರು (ಗ್ರಾ.ಮೂ.ಸೌ-2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಕಾಯಕಲ್ಪ ಮಾಡಿ ಇಡಿ ಊರಿನ ಜನರನ್ನು ಒಗ್ಗೂಡಿಸಿ ಶಾಂತಿ-ನೆಮ್ಮದಿ ಮೂಡುವಂತೆ ಮಾಡಿದ ಮಹಾನ್ ವ್ಯಕ್ತಿ.

ಊರಿನ ಬಾವಿ, ಕಟ್ಟೆ, ಕೆರೆಯಲ್ಲಿದ್ದ ಜಲವೆಲ್ಲಾ ಬತ್ತಿ ಹೋಗಿದ್ದ ಸನ್ನಿವೇಶದಲ್ಲಿ ಭೂಮಿಯೆಲ್ಲಾ ಬರಡಾಗಿ ಜನರೆಲ್ಲಾ ಬೇರೆ ಕಡೆ ಗುಳೆ ಹೋಗುತ್ತಿದ್ದ ಪರಿಸ್ಥಿತಿಯಲ್ಲಿ ಊರಿನ ಜನರೆಲ್ಲಾ ಸ್ವಯಂಸೇವಕರಾಗಿ ಜಲಾನಯನ ಕಾರ್ಯಕ್ರಮದ ಸೂತ್ರದಂತೆ ಓಡುವ ನೀರು ನಡೆಯುವಂತೆ, ನಡೆಯುವ ನೀರು ನಿಲ್ಲುವಂತೆ ಮಾಡಿ ಊರಿನ ಜಮೀನನ್ನು ಅಡ್ಡಡ್ಡ ಉಳುಮೆ ಮಾಡಿಸಿ, ಸಸಿ ಗಿಡ ನೆಟ್ಟು ಅಂತರ್ಜಲ ಅಭಿವೃದ್ಧಿಗೊಂಡು ಜಲ ಭರ್ತಿಯಾಗಿ, ಊರಿನಲ್ಲಿ ಹಸಿರು ಪ್ರಸರಿಸುವಂತೆ ಮಾಡಿದರು. ಊರಿನಲ್ಲಿ ಸಹಕಾರ ಸಂಘ ಸ್ಥಾಪಿಸಿ ಕೃಷಿಕರಿಗೆ ಸಾಲ ನೀಡಿ, ಬಾವಿ ನಿರ್ಮಾಣ, ಮನೆಗಳ ನಿರ್ಮಾಣ, ಸಾಮೂಹಿಕ ವಿವಾಹ ಇತ್ಯಾದಿ ಕೈಗೊಂಡು ಊರಿನ ಆರ್ಥಿಕ ಅಸಮಾನತೆ ಹೋಗಲಾಡಿಸಿ, ಆರ್ಥಿಕ ಸ್ವಾವಲಂಬನೆ ಸಾಧಿಸಲು ಕಾರಣರಾಗಿ ಊರಿನ, ನೆರೆ ಊರಿನ ಜನರಿಗೆ ಆಪತ್ಬಾಂಧವ ಎನಿಸಿದರು. ಆನಂತರ ಸರ್ಕಾರಿ ಕಛೇರಿಗಳಲ್ಲಿನ ಜಡತ್ವ-ಭ್ರಷ್ಟ ಅಧಿಕಾರಿಗಳ ವಿರುದ್ಧ ಸಮರ ಸಾರಿ ಗ್ರಾಮ ಸ್ವರಾಜ್ ಸ್ಥಾಪಿಸಿ ಜನರ ಕೈಗೆ ಅಧಿಕಾರ ಸಿಗಲು ಕಾರಣರಾದರು.

ಈ ಮೂಲಕ ಅಹ್ಮದ್‌ನಗರ ಪಕ್ಕದ ಪೂನಾ, ಔರಂಗಾಬಾದ್ ಜಿಲ್ಲೆ ಜನರ, ಪ್ರತಿನಿಧಿಗಳ ವಿಶ್ವಾಸಗಳಿಸಿ ಇಡಿ ಮಹಾರಾಷ್ಟ್ರ ಸರ್ಕಾರದ ಗಮನ ಸೆಳೆಯುವ ಮೂಲಕ ಕೇಂದ್ರ ಬಿಂದು ಎನಿಸಿದರು.

ಸುಮಾರು 3 ದಶಕಗಳ ಕಾಲ ಮಹಾರಾಷ್ಟ್ರ ರಾಜ್ಯದ ಉದ್ದಗಲಕ್ಕೂ ಸಂಚರಿಸಿ, ಭ್ರಷ್ಟಾಚಾರ ವಿರೋಧಿ ಆಂದೋಲನ ನಡೆಸಿ ರಾಜ್ಯದ ಭ್ರಷ್ಟ ರಾಜಕಾರಣಿಗಳ ಕೆಂಗಣ್ಣಿಗೆ ಗುರಿಯಾದರೂ ಹಲವು ಭ್ರಷ್ಟ ಮುಖ್ಯಮಂತ್ರಿಗಳ ಪದಚ್ಯುತಿಗೆ ಕಾರಣರಾದರು.

ಈಗ ಲೋಕಪಾಲ್ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿ, ಜಾರಿ ಮಾಡಿ ರಾಜಕಾರಣಿಗಳ ಅಧಿಕಾರಸ್ಥರ, ಅಧಿಕಾರಿಗಳ ಸ್ವಜನ ಪಕ್ಷಪಾತ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಶ್ರಮಿಸುತ್ತಿರುವುದು ಶ್ಲಾಘನೀಯ. ಇವರು ಮಹಾತ್ಮ ಗಾಂಧಿಜೀಯವರ ಹಾದಿಯಲ್ಲಿ ಸಾಗುತ್ತಾ, ಸತ್ಯ, ಅಹಿಂಸೆ, ಸತ್ಯಾಗ್ರಹದ ಮುಖೇನ ನಾಡಿನ ದೇಶದ ಜನರ ಬದುಕು ಹಸನು ಮಾಡಲು ಪ್ರಯತ್ನಿಸು ತ್ತಿರುವುದು ಶ್ಲಾಘನೀಯ.

❄

# ಕಾರ್ಯನಿರ್ವಹಣಾ ಕ್ಷೇತ್ರದಲ್ಲಿ ಕೌಶಲ್ಯಗಳ ಉಪಯುಕ್ತತೆ ಮತ್ತು ಮಾನವೀಯ ಮೌಲ್ಯಗಳು

ಲೇಖನ



ಡಾ|| ಹೆಚ್. ಎಂ. ಸುದರ್ಶನ

ಅಧಿಕಾರಿಗಳು ಮತ್ತು ನೌಕರರು ಪ್ರತಿ ದಿನ ಒಂದಲ್ಲ ಒಂದು ಕಾರಣಕ್ಕೆ ಒತ್ತಡಕ್ಕೊಳಗಾಗುತ್ತಿದ್ದಾರೆ ಇದರಿಂದ ಅವರ ಜೀವನಶೈಲಿ ಕಾರ್ಯಕ್ಷಮತೆ ಮತ್ತು ಆರೋಗ್ಯದಲ್ಲಿ ಏರುಪೇರುಗಳಾಗುತ್ತಿದೆ.

ಕೌಶಲ್ಯ ತರಬೇತಿಯನ್ನು ಪಡೆಯುವುದರಿಂದ ಸರ್ಕಾರದ ಅಧಿಕಾರಿಗಳು/ನೌಕರರು ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹೆಚ್ಚಿನ ಕಾರ್ಯಕ್ಷಮತೆ ಮತ್ತು ತಿಳುವಳಿಕೆಯನ್ನು ಹೊಂದಲು ಸಹಕಾರಿಯಾಗುತ್ತದೆ. ಸರ್ಕಾರಿ ಸಂಸ್ಥೆಗಳು, ವ್ಯವಸ್ಥಿತ ನೀತಿ ನಿಯಮಾವಳಿಗಳಿಂದ ರೂಪಿಸಲ್ಪಟ್ಟಿದಾದರೂ ಇದರ ಉದ್ದೇಶ ಸಮಗ್ರ ಅಭಿವೃದ್ಧಿ. ಅಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯು ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಎಂಬುದನ್ನು ಮರೆಯಬಾರದು. ಇಲ್ಲಿ ಸಮಸ್ಯೆ, ಬೇಡಿಕೆ ಮತ್ತು ನಿರೀಕ್ಷೆಗಳು ಇಲ್ಲದ್ದಿದಲ್ಲಿ ಯಾವುದೇ ನೌಕರರ ಅವಶ್ಯಕತೆಯು ಇರುವುದಿಲ್ಲ. ಇಲ್ಲಿ ಅವಶ್ಯಕತೆಗಳಿಗೆ ಅನುಗುಣವಾಗಿ ಮೂಲಭೂತ ಸೌಲಭ್ಯವನ್ನು ಸರಿಯಾಗಿ



ತಲುಪಿಸಲು ಮಾನವ ಸಂಪನ್ಮೂಲವು ಸರ್ಕಾರದ ನಿಜವಾದ ಪ್ರತಿನಿಧಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ದೈಹಿಕ ಮತ್ತು ಮಾನಸಿಕವಾಗಿ ದೃಢವಾಗಿದ್ದಲ್ಲಿ ಮಾತ್ರ ಉತ್ತಮ ವರ್ತನೆಯ ಮನೋಬಾವನೆಯಿಂದ ಕೆಲಸ ಮಾಡಲು ಸಾಧ್ಯ. ಆ ಮೂಲಕ ಕಾರ್ಯಾಂಗವು ಆಡಳಿತ ಯಂತ್ರದ ವ್ಯವಸ್ಥಿತ ಮತ್ತು ಸಮರ್ಪಕ ಕಾರ್ಯ ನಿರ್ವಹಣೆಗೆ ಸಹಕಾರಿಯಾಗುತ್ತದೆ.

ಗ್ರಾಮೀಣಾಭಿವೃದ್ಧಿಯ ಮೂಲ ಆಶಯವಾದ “ಸಮಾಜದ ಉನ್ನತಿಗಾಗಿ ಸೇವೆ” ಎಂಬುದನ್ನು ಸಾಧಿಸಬಹುದು. ಇಲ್ಲಿ ಮುಖ್ಯವಾಗಿ ಅಧಿಕಾರಿ ಮತ್ತು ನೌಕರರಿಗೆ ಬೇಕಾದ್ದು ವರ್ತನೆ ಮತ್ತು ನಡವಳಿಕೆ ಬದಲಾವಣೆಗಳು. ಆ ನಿಟ್ಟಿನಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ಬದಲಾವಣೆ ತಂದು ಸಮಾಜದ ಕಟ್ಟಕಡೆಯ ವ್ಯಕ್ತಿಯ ಭಾವನೆಗಳನ್ನು, ನಂಬಿಕೆಗಳನ್ನು, ಅಭಿಪ್ರಾಯಗಳನ್ನು ಅರ್ಥೈಸಿಕೊಂಡು ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಸಮರ್ಥವಾಗುವಂತೆ ಮಾಡುವ ಉದ್ದೇಶದಿಂದ ಅಬ್ದುಲ್ ನಜೀರ್ ಸಾಬ್

ಉಪನ್ಯಾಸಕರು, (ಗ್ರಾಮೀಣಾಭಿವೃದ್ಧಿ), ಎಎನ್‌ಎಸ್‌ಎಸ್‌ಐಆರ್‌ಡಿ, ಮೈಸೂರು.

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯಲ್ಲಿ ನಿರ್ವಹಣಾ ಕೌಶಲ್ಯಗಳ ಅಗತ್ಯತೆಯ ತರಬೇತಿಯನ್ನು ಮನಗಂಡು ಮೂರು ಹಂತದ ಪಂಚಾಯತಿ ಅಧಿಕಾರಿಗಳಿಗೆ ತರಬೇತಿಯನ್ನು ನಡೆಸಲಾಗುತ್ತಿದೆ.

**ಬದಲಾವಣೆ ಜಗದ ನಿಯಮ:**

ನಿಮಗೆ ಪ್ರತಿ ವ್ಯಕ್ತಿಗಳಿಂದ ಮತ್ತು ಸರ್ಕಾರದ ವಿವಿಧ ಸೇವೆಯಲ್ಲಿ ಹೆಚ್ಚಿನ ಬದಲಾವಣೆಯ ಅವಶ್ಯಕತೆ ಇದೆ ಎಂದು ಅನಿಸುವುದು ಸಹಜವಾದ್ದು, ಇಲ್ಲಿ ಬದಲಾವಣೆಯ ಆರಂಭಿಕ ಹಂತವೇ ನಂಬಿಕೆ, ಇದಕ್ಕೆ ಇಚ್ಛಾಶಕ್ತಿಯ ಜೊತೆಗೆ ಪ್ರಮಾಣಿಕ ಪ್ರಯತ್ನವಿರಬೇಕಾಗುತ್ತದೆ ತಾಳ್ಮೆ ಹೊಂದಾಣಿಕೆ ಮತ್ತು ಧೃಡ ನಿರ್ಧಾರಗಳಿಂದ ಬದಲಾವಣೆಯ ಗಾಳಿ ಬೀಸಲು ಸಾಧ್ಯವಾಗುತ್ತದೆ. ಬದಲಾವಣೆ ಸಾಮಾಜಿಕ ಜವಾಬ್ದಾರಿಗೆ ಪ್ರೇರಣೆಯಾಗುತ್ತದೆ ಇಲ್ಲಿ ವ್ಯಕ್ತಿಗತವಾಗಿ ಜಾಗೃತೆಯಿಂದ ಕೆಲಸ ನಿರ್ವಹಿಸುವುದರ ಜೊತೆಗೆ ಇತರರ ಭಾವನೆಗಳು ಮತ್ತು ಅನಿಸಿಕೆಗಳಿಗೆ ಮಹತ್ವ ನೀಡಬೇಕಾಗುತ್ತದೆ ಬಹುತೇಕ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಕಾರ್ಯಕ್ರಮ ಗಳು ಸರಿಯಾದ ಅರ್ಹ ಪಲಾನುಭವಿಗಳಿಗೆ ತಲುಪಬೇಕು. ಅಂತೆಯೇ ಸರ್ಕಾರಿ ನೌಕರರು ಸಮುದಾಯ ಅಭಿವೃದ್ಧಿ ಕಾರ್ಯಕ್ರಮವನ್ನು ಗುಣಾತ್ಮಕವಾಗಿ ಕೈಗೊಳ್ಳಲು ಜೀವನಶೈಲಿ ಮತ್ತು ಧನಾತ್ಮಕ ಮನೋಭಾವ ಹೊಂದಿದ್ದಲ್ಲಿ ಮಾತ್ರ ಸಾಧ್ಯ. ಅದಕ್ಕಾಗಿಯೇ ಗ್ರಾಮ ಪಂಚಾಯಿತಿ ಮಟ್ಟದಿಂದ ಜಿಲ್ಲಾ ಪಂಚಾಯತ್ ಮಟ್ಟದವರೆಗೂ ಅಧಿಕಾರಿಗಳ ಮನೋಸಾಮಾಜಿಕ ನಡವಳಿಕೆ ಮತ್ತು ವರ್ತನೆಗಳು ಬದಲಾಗಬೇಕೆಂಬ ಮಹತ್ತರ ಉದ್ದೇಶದಿಂದ ವರ್ತನೆ ಮತ್ತು ನಡವಳಿಕೆಯ ಬದಲಾವಣೆ, ಒತ್ತಡ ನಿರ್ವಹಣೆ ಮತ್ತು Building Organisational Excellence in Administration ಎಂಬ ತರಬೇತಿ ಕಾರ್ಯಕ್ರಮಗಳನ್ನು ಮೂರು ಹಂತಗಳ ಪಂಚಾಯಿತಿಯ ವಿವಿಧ ಅಧಿಕಾರಿಗಳು ಮತ್ತು ಸಹವರ್ತಿ ಇಲಾಖೆಗಳ ಅಧಿಕಾರಿಗಳಿಗೆ ನಿರ್ವಹಣಾ ಕೌಶಲ್ಯ ತರಬೇತಿ ನೀಡಿ ಆ ಮೂಲಕ ಅವರಲ್ಲಿ "ನಮ್ಮ ನಡೆ ವಿಶ್ವಾಸದೆಡೆಗೆ" ಎಂಬ ಆತ್ಮವಿಶ್ವಾಸ ತುಂಬುವುದಲ್ಲದೆ ವೈಯಕ್ತಿಕವಾಗಿ ಹಾಗೂ ಸಮೂಹದ ಬೇಡಿಕೆಗೆ ಅನುಗುಣವಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುತ್ತದೆ ಆ ಮೂಲಕ ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ಎದುರಿಸಲು ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಾಯಕವಾಗುತ್ತದೆ.

**ವರ್ತನೆ ಮತ್ತು ನಡವಳಿಕೆಯ ಬದಲಾವಣೆಯ ತರಬೇತಿ:**

- ಮನೋಭಾವ ಮತ್ತು ನಡವಳಿಕೆಗಳ ಕುರಿತಾದ ಭಿನ್ನತೆಗಳನ್ನು ಗುರುತಿಸುವುದು.
- ಮನೋಭಾವ ಮತ್ತು ನಡಳಿಕೆಗಳ ನಡುವಿನ ಸಂಬಂಧಗಳು
- ಮನೋಭಾವ ಮತ್ತು ನಡಳಿಕೆಗಳನ್ನು ಸ್ವಯಂ ವಿಶೇಷ್ಲಣೆ ಮಾಡಿಕೊಳ್ಳುವುದು.
- ಮನೋಭಾವ ಮತ್ತು ನಡಳಿಕೆಗಳಲ್ಲಿ ಬದಲಾವಣೆ ತಂದುಕೊಳ್ಳುವುದು

ತರಬೇತಿಯಲ್ಲಿ ಬದಲಾವಣೆ ಎಂದರೇನು, ಅದು ವೈಯಕ್ತಿಕವಾಗಿರಬೇಕಾ, ಸಾಮಾಜಿಕವಾಗಿರಬೇಕಾ, ಅದನ್ನು ವೃತ್ತಿಯಲ್ಲಿ ಮಾತ್ರ ಅನ್ವಯಿಸಲು ಸಾಧ್ಯವೇ, ಇದರಿಂದ ವೈಯಕ್ತಿಕ ಬೆಳವಣಿಗೆಯ ಸಾಧ್ಯತೆಗಳೇನು, ವರ್ತನೆಗೆ ಸಂಬಂಧಿಸಿದ ಅಂಶಗಳಾವುವು, ನಡವಳಿಕೆಗೆ ಸಂಬಂಧಿಸಿದ ಅಂಶಗಳಾವುವು ಸಮಯ ಪರಿಪಾಲನೆಯ ಅಗತ್ಯತೆ, ಸಂವಹನದ ವಿವಿಧ ಹಂತಗಳು ಮತ್ತು ವ್ಯವಸ್ಥಿತ ಸಂವಹನಾ ಕೌಶಲ್ಯಗಳು ವಹಿಸುವ ಪಾತ್ರ, ವ್ಯಕ್ತಿತ್ವ ನಿರ್ಧರಿಸುವ ಅಂಶಗಳೊಂದಿಗೆ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿ ದಂತೆ ಪರಿಣಿತರೊಂದಿಗೆ ವಿವಿಧ ಹಂತದದಲ್ಲಿ ಚರ್ಚಿಸಿ ಮುಖ್ಯ ಅಂಶಗಳನ್ನು ಗುರುತಿಸಿ ಅವುಗಳಿಗೆ ಸರ್ವಸಮ್ಮತ ತೀರ್ಮಾನ ಕೈಗೊಳ್ಳುವುದು ಹೇಗೆ, ವರ್ತನೆ ಮತ್ತು ನಡವಳಿಕೆ ರೂಪಿಸುವಲ್ಲಿ ಮೌಲ್ಯ ಮತ್ತು ನೈತಿಕತೆಯ ಅಗತ್ಯತೆಗಳು ಒಂದು ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳನ್ನು ತಲುಪಲು ಕ್ರಿಯಾ ಯೋಜನೆಗಳನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದು ಮುಂತಾದ ವಿಷಯಗಳನ್ನು ಕೇಂದ್ರಿಕರಿಸಿ ಚಟುವಟಿಕೆ ಮುಖಾಂತರ ತರಬೇತಿಯನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತದೆ.



## ಒತ್ತಡ ನಿರ್ವಹಣೆ:

ಒತ್ತಡ ಆಧುನಿಕ ಬದುಕಿನ ಅನಿವಾರ್ಯ ಸಮಸ್ಯೆ. ಈ ಸಮಸ್ಯೆಯ ಬೇರುಗಳು ಅರ್ಧ ನಮ್ಮ ವ್ಯವಸ್ಥೆಯಲ್ಲಿದೆ, ಇನ್ನರ್ಧ ಮಾನಸಿಕ ಸ್ಥಿತಿಯಲ್ಲಿ ಅಡಗಿದೆ, ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಈ ಸಮಸ್ಯೆಯ ವಿವಿಧ ಮುಖಗಳನ್ನು ನೋಡಬಹುದು ನಮ್ಮ ಅಧಿಕಾರಿಗಳು ಮತ್ತು ನೌಕರರು ಪ್ರತಿ ದಿನ ಒಂದಲ್ಲ ಒಂದು ಕಾರಣಕ್ಕೆ ಒತ್ತಡಕ್ಕೊಳಗಾಗುತ್ತಿದ್ದಾರೆ ಇದರಿಂದ ಅವರ ಜೀವನಶೈಲಿ ಕಾರ್ಯಕ್ಷಮತೆ ಮತ್ತು ಆರೋಗ್ಯದಲ್ಲಿ ಏರುಪೇರುಗಳಾಗುತ್ತಿದೆ. ಒತ್ತಡದಿಂದ ವಿಮುಕ್ತರಾದಲ್ಲಿ ಮಾತ್ರ ತನ್ನ ಸೃಜನಶೀಲತೆಯ ವ್ಯಕ್ತಿತ್ವವನ್ನು ತೋರಲು ಸಾಧ್ಯವಾಗುತ್ತದೆ ಇಲ್ಲಿ ನಮ್ಮನ್ನು ಉತ್ತೇಜಿಸಲು ಕೆಲವೊಂದು ಹಂತದವರೆಗೆ ಒತ್ತಡ ಬೆಳವಣಿಗೆಗೆ ಸಾಧನವಾಗುತ್ತದೆ ಪ್ರಸ್ತುತ ಒತ್ತಡ ನಿರ್ವಹಣೆಗೆ ತರಬೇತಿಯಲ್ಲಿ ಸರ್ಕಾರದ ವಿವಿಧ ಹಂತದ ಅಧಿಕಾರಿಗಳು ಪ್ರತಿದಿನ ಎದುರಿಸುವ ಸಮಸೆಗಳನ್ನು ಗುರುತಿಸುವುದು ಅವುಗಳಿಗೆ ಕಾರಣಗಳನ್ನು ವಿಶ್ಲೇಷಿಸುವುದಕ್ಕೆ ತರಬೇತಿ ಸಹಾಯಕವಾಗುತ್ತದೆ. ಒತ್ತಡದಿಂದ ಶಾರೀರಿಕ ಲಕ್ಷಣದಲ್ಲಿ ಆಗುವ ಬದಲಾವಣೆ, ಕೈಗೊಳ್ಳಬೇಕಾದ ಪರಿಹಾರಕ್ರಮಗಳೇನು, ಸಾಮಾಜಿಕ ಜೀವನ ಮತ್ತು ವೃತ್ತಿ ಜೀವನದ ಸಮನ್ವಯತೆ ಕಾಯ್ದುಕೊಳ್ಳುವುದು ಹೇಗೆ, ಒತ್ತಡ ನಿರ್ವಹಣೆಯಲ್ಲಿ ಮನೋವೈಜ್ಞಾನಿಕ ಅಂಶಗಳು ವಹಿಸುವ ಪಾತ್ರವೇನು, ಸಕಾರಾತ್ಮಕ ವಿಚಾರಗಳು ಬೀರುವ ಪ್ರಭಾವ, ವಿವಿಧ ಹಂತದ ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ನಡುವೆ ಸಮನ್ವಯತೆ ಹಾಗೂ ಬಿನ್ನಭಿಪ್ರಾಯಗಳ ನಿರ್ವಹಣೆ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಪ್ರಭಾವಗಳು ಮುಂತದವುಗಳು ತರಬೇತಿ ಒಳಗೊಂಡಿರುತ್ತದೆ.

## ಕಾರ್ಯನಿರ್ವಹಣಾ ಕ್ಷೇತ್ರದಲ್ಲಿ ಕೌಶಲ್ಯಗಳ ಉಪಯುಕ್ತತೆ

ಈಗಾಗಲೇ ಹಲವಾರು ಪಂಚಾಯತಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಇನ್ನೂ ಹೆಚ್ಚಿನ 'ರೀತಿಯಲ್ಲಿ ವ್ಯವಸ್ಥಿತವಾಗಿ ಪರಿಣಾಮ ಕಾರಿಯಾಗಿ ಎಲ್ಲ ಅಧಿಕಾರಿ ನೌಕರರನ್ನೊಳಗೊಂಡು ಒಂದು ತಂಡವಾಗಿ ಕಾರ್ಯನಿರ್ವಹಿಸಿದಲ್ಲಿ ಪ್ರಮುಖ ಬದಲಾವಣೆಯನ್ನು ನಿರೀಕ್ಷಿಸಿ ಸಾಧಿಸಲು ಸಾಧ್ಯ ಎಂಬ ಉದ್ದೇಶದಿಂದ ಗ್ರಾಮೀಣ ಜನರ ಬದುಕಿನ ವಿಶೇಷತೆಗಳನ್ನು ಅರ್ಥಮಾಡಿಕೊಂಡು ಅವರಲ್ಲಿ ನಾವು ಒಬ್ಬರಾಗಿ ಕಾರ್ಯನಿರ್ವಹಿಸಲು ಕೆಲವೊಂದು ಅಭಿಪ್ರಾಯ ಭಿನ್ನತೆಗಳು ಕಂಡುಬಂದಲ್ಲಿ ಒಬ್ಬ ಅಧಿಕಾರಿಯಾಗಿ ಮತ್ತು ಸಾರ್ವಜನಿಕ ವ್ಯಕ್ತಿಯಾಗಿ ಹೇಗೆ ಕಾರ್ಯನಿರ್ವಹಿಸಬಹುದು ಎಂದು ಈಗಾಗಲೇ ಕೆಲವೊಂದು ಮಾದರಿಯಾಗಿರುವ ವ್ಯಕ್ತಿಚಿತ್ರಗಳು, ಮಾದರಿ ಪಂಚಾಯಿತಿಗಳು ನಿದರ್ಶನಗಳ ಮುಖಾಂತರ ವಿಷಯ ತಿಳಿಸಿ ಬದಲಾವಣೆಗೆ ಪ್ರೇರೆಪಿಸುವುದೇ ಈ ತರಬೇತಿಯ ಮುಖ್ಯ ಗುರಿಯಾಗಿರುತ್ತದೆ.

ಇಂತಹ ತರಬೇತಿಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಕೆಳಹಂತದ ಸಮಸ್ಯೆಗಳನ್ನು ಅಧಾರವಾಗಿಟ್ಟು ತರಬೇತಿ ನಿರ್ವಹಿಸುವುದು, ಪರಿಹಾರ ಕೈಗೋಳ್ಳಲು ಧನಾತ್ಮಕ ವಿಚಾರ ಮಂಡಿಸುವುದು ಸಾಧ್ಯವಾಗುತ್ತದೆ. ಇದರಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸಲು ಅನುವಾಗುವುದಲ್ಲದೆ ನಮ್ಮಲ್ಲಿರುವ ಕೊರತೆಗಳಿಂತ ಸಾಮಾರ್ಥ್ಯದ ಮೇಲೆ ನಂಬಿಕೆ ಹೆಚ್ಚಾಗುತ್ತದೆ ಆ ಮೂಲಕ ಸಮಸ್ಯೆಯನ್ನು ನೋಡುವ ದೃಷ್ಟಿ ಕೋನ ಬದಲಾವಣೆಯಾಗುತ್ತದೆ ಹೆಚ್ಚು ಚಟುವಟಿಕೆಗಳ ಮುಖಾಂತರ ವಿಷಯ ಮಂಡಿಸುವುದರಿಂದ ಪರಿಣಾಮಕಾರಿ ಕಲಿಕೆಗೆ ಪ್ರೆರಣೆಯಾಗುತ್ತದೆ ತರಬೇತಿಯು ವೈಯಕ್ತಿಕವಾಗಿ ಹಾಗೂ ಸಂಸ್ಥೆಯಾಗಿ ಉತ್ತಮ ಪಲಿತಾಂಶ ನೀಡುವಲ್ಲಿ ಸಹಕಾರಿಯಾಗುತ್ತದೆ.

ಚಿಂತನೆ

# ಗ್ರಾಮೀಣ ದಾರಿದ್ರ್ಯ ಮತ್ತು ಸಾಮಾಜಿಕ ಸಂರಕ್ಷಣೆ



ಪ್ರೊ. ಎ. ಎಚ್. ಮಾಸಾಪತಿ

ಹಸಿವೆ ಮತ್ತು ದಾರಿದ್ರ್ಯದ ಪ್ರಮಾಣವನ್ನು ಕಡಿಮೆ ಮಾಡಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ಸಮೃದ್ಧಿಯ ಸಮಯದಲ್ಲಿಯೂ ಸಹ, ಇವೆರಡು ಜ್ವಲಂತ ಸಮಸ್ಯೆಗಳು ನಿರಂತರವಾಗಿ ಮಾನವರನ್ನು ಹಿಂಬಾಲಿಸುತ್ತ ಬಂದಿವೆ. ವಿಶಿಷ್ಟವಾಗಿ ಕೃಷಿ ಕ್ಷೇತ್ರದಲ್ಲಿ ಆರ್ಥಿಕಾಭಿವೃದ್ಧಿಯು ಅತ್ಯಂತ ಅವಶ್ಯಕವಾಗಿದೆ. ಆದರೆ ಅನೇಕ ಸಲ ಇಂತಹ ದೃಷ್ಟಿಕೋನವನ್ನು ಉತ್ತೇಜಿಸಲು ಹಾಗೂ ಸೇರ್ಪಡಿಸಲು ಉದಾಸೀನತೆಯನ್ನು ಪ್ರದರ್ಶಿಸಲಾಗಿದೆ. ಅಭಿವೃದ್ಧಿಶೀಲ ಜಗತ್ತಿನ ಹಲವಾರು ರಾಷ್ಟ್ರಗಳು ದೀರ್ಘಕಾಲೀನ ಉದಾಸೀನತೆಯಿಂದ ಮುಕ್ತವಾಗಿ ಸಾಮಾಜಿಕ ಸಂರಕ್ಷಣಾ ಕ್ರಮಗಳನ್ನು ಕುರಿತು ಗಂಭೀರವಾದ ಚಿಂತನೆ ನಡೆಸಿವೆ. ಈ ದಿಶೆಯಲ್ಲಿ ಕಾರ್ಯಾಚರಣೆ ಮಾಡಲು ಗ್ರಾಮೀಣ ಜನರಿಗೆ ನಿಯಮಿತವಾದ ಹಣಕಾಸು, ಇನ್ನಿತರ ಅಗತ್ಯವಾದ ಸಹಾಯ ಮತ್ತು ಸ್ವಸಹಾಯ ಕಾರ್ಯಕ್ರಮಗಳಿಗೆ ಉತ್ತೇಜನ ಇತ್ಯಾದಿ ಕ್ರಮಗಳ ಅವಶ್ಯಕತೆ ಇದೆಯೆಂಬ ತಿಳುವಳಿಕೆಯು ಜಾಗೃತವಾದಾಗ; ಹಸಿವೆ ಹಾಗೂ ದಾರಿದ್ರ್ಯದ ಉಪಶಮನಕ್ಕಾಗಿ ಪ್ರಥಮ ದರ್ಜೆಯ ಕ್ರಮಗಳ ಪ್ರಾಧಾನ್ಯತೆಯನ್ನು ಗುರುತಿಸಲು ಸಾಧ್ಯವಿದೆ.



> ಸಾಮಾಜಿಕ ಸಂರಕ್ಷಣೆಯು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಗತಿಶೀಲಗೊಳಿಸಿ, ಜೀವನದ ಆಧಾರ ಹಾಗೂ ವರಮಾನವನ್ನು ಅಧಿಕಗೊಳಿಸುತ್ತದೆ.

ಸಾಮಾಜಿಕ ಸಂರಕ್ಷಣೆಯ ಕಾರ್ಯಕ್ರಮಗಳು ಹಸಿವೆ ಮತ್ತು ದಾರಿದ್ರ್ಯವನ್ನು ಕಡಿಮೆ ಮಾಡುವ ದಿಸೆಯಲ್ಲಿ ಯಶಸ್ಸು ಸಾಧಿಸುತ್ತವೆಯೆಂಬ ಸಂಗತಿಯನ್ನು ಹಲವಾರು ಅಧ್ಯಯನಗಳು ನಿರೂಪಿಸಿವೆ. ಈ ಕಾರ್ಯಕ್ರಮಗಳು ಕೇವಲ ಬಡವರ ವರಮಾನದ ಕೊರತೆಯನ್ನು ಪರಿಹರಿಸುವುದಕ್ಕಿಂತಲೂ ಹೆಚ್ಚಿನ ಧ್ಯೇಯ ಸಾಧನೆಗಾಗಿ ಪ್ರೇರಣೆ ನೀಡುತ್ತವೆ. ಸ್ವಾವಲಂಬನೆಯ ಮಾರ್ಗದಲ್ಲಿ ತ್ವರಿತಗತಿಯಿಂದ ಮುನ್ನಡೆಯಲು ಬಡವರನ್ನು ಸಜ್ಜುಗೊಳಿಸುತ್ತದೆ. ದುರ್ಬಲರ / ಬಡವರ ಕುಟುಂಬಗಳು ತಮ್ಮ ಭವಿಷ್ಯತ್ತಿನ ಯೋಜನೆಯನ್ನು ರೂಪಿಸಲು ಭರವಸೆ ಹಾಗೂ ಸಾಮರ್ಥ್ಯವನ್ನು ನೀಡಲಾಗುತ್ತದೆ. ಇಂತಹ ಕ್ರಮದ ಮೂಲಕ 2013ರಲ್ಲಿ ವಿಪರೀತವಾದ

ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರೋಡ್, ಸುಲ್ತಾನ್‌ಪಾಳ್ಯ, ಭೆಂಗಳೂರು - 560 032



ದಾರಿದ್ರ್ಯದ ಸಂಕಷ್ಟದಲ್ಲಿ ಸಿಲುಕಿದ ಸುಮಾರು 150 ದಶಲಕ್ಷ ಕಡುಬಡವರನ್ನು ಸಂರಕ್ಷಿಸಲಾಗಿದೆ.

## ಮಹಾನಿರ್ದೇಶಕರ ದೃಷ್ಟಿಕೋನ :

ಜಾಗತಿಕ ಆಹಾರ ದಿನಾಚರಣೆಯ (2015ರ ಅಕ್ಟೋಬರ್) ಸಂದರ್ಭದಲ್ಲಿ ಗ್ರಾಮೀಣ ದಾರಿದ್ರ್ಯದ ಸಂಕೋಲೆಯಿಂದ ಬಿಡುಗಡೆ ಹೊಂದುವ ಮಾರ್ಗವನ್ನು ಕುರಿತು ಸಂಯುಕ್ತ ರಾಷ್ಟ್ರ ಸಂಘದ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ನಿರ್ದೇಶಕ ಜೆ.ಜಿ. ಡಿ ಸಿಲ್ವಾ ಕೆಲವು ದೃಷ್ಟಿಕೋನವನ್ನು ನಿರೂಪಿಸಿದ್ದಾರೆ. ಜಗತ್ತಿನ ಎಲ್ಲ ದೇಶಗಳು ತಮ್ಮ ಸ್ವಾಮಿತ್ವ / ಸ್ವಾಧೀನದಲ್ಲಿರುವ ಜ್ಞಾನ ಹಾಗೂ ಸಾಧನ ಸಲಕರಣೆಗಳನ್ನು ಒಂದುಗೂಡಿಸಿ ಅವುಗಳ ಸಹಾಯದಿಂದ 2030 ಅವಧಿಯವರೆಗೆ ದೀರ್ಘಕಾಲೀನ ಹಸಿವೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡಲು ವಚನಬದ್ಧವಾಗಿವೆಯೆಂದು ಪ್ರಕಟಿಸಲಾಗಿದೆ.

ಯು.ಎನ್.ಓ. ದ ಆಹಾರ ಮತ್ತು ಕೃಷಿ ಸಂಸ್ಥೆಯ ಮೇಲ್ವಿಚಾರಣೆಗೆ ಒಳಪಟ್ಟಿರುವ 129 ದೇಶಗಳ ಪೈಕಿ 72 ದೇಶಗಳು ಸಹಸ್ರಮಾನದ ಅಭಿವೃದ್ಧಿ ಧ್ಯೇಯವನ್ನು ಅಂದರೆ 2015ರ ವರೆಗೆ, ಆ ದೇಶಗಳಲ್ಲಿ ವ್ಯಾಪಿಸಿರುವಂತಹ ಅಪೌಷ್ಟಿಕತೆಯ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡುವ ಗುರಿ ಸಾಧಿಸಿವೆಯೆಂದು ಸಮರ್ಥಿಸಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿ ವಾಸಿಸುವಂತಹ ಜನರ ವಿಪರೀತವಾದ ದಾರಿದ್ರ್ಯದ ಪ್ರಮಾಣವು 2015ರಲ್ಲಿ ಶೇಕಡಾ 17ಕ್ಕೆ ಗಮನಾರ್ಹವಾಗಿ ಕಡಿಮೆಯಾಗಿದೆ ಯೆಂದು ಭಾವಿಸಲಾಗಿದೆ. 1990ರಲ್ಲಿ ಶೇಕಡಾ 43ರಷ್ಟು ಆಗಿದ್ದ ದಾರಿದ್ರ್ಯದ ಪ್ರಮಾಣವು 2015ರಲ್ಲಿ ಶೇಕಡಾ 17ಕ್ಕೆ ಇಳಿಮುಖ ಆಗಿದೆ. ಆದರೆ, ಪ್ರಗತಿಯಲ್ಲಿ ಅಸಮಾನತೆಯು ಸ್ಪಷ್ಟವಾಗಿ ಕಂಡು ಬಂದಿದೆ. ಜಾಗತಿಕವಾಗಿ ಸುಮಾರು 800 ದಶಲಕ್ಷ ಜನರು ದೀರ್ಘಕಾಲೀನ ಹಸಿವೆಯಿಂದ ಬಳಲುತ್ತಾರೆ ಹಾಗೂ ಲಕ್ಷಾಂತರ ಕೋಟಿ ಜನರು ವಿಪರೀತವಾದ ದಾರಿದ್ರ್ಯದಲ್ಲಿ ಸಿಲುಕಿದ್ದಾರೆ.

ದಾರಿದ್ರ್ಯ, ಹಸಿವೆ, ವಿಶಿಷ್ಟವಾಗಿ ಆರೋಗ್ಯ ಮತ್ತು ಶಿಕ್ಷಣದಂತಹ ಉಭಯ ಕ್ಷೇತ್ರಗಳಲ್ಲಿ ವ್ಯಾಪಕವಾದ ಹಸ್ತಕ್ಷೇಪಗಳೊಂದಿಗೆ ಹೋರಾಟ ನಡೆಸಲು ಕೃಷಿ ಮತ್ತು ಸಾಮಾಜಿಕ ಸಂರಕ್ಷಣೆಯ ಸಂಯುಕ್ತವಾದ ಪಾತ್ರವನ್ನು ಮುನ್ನಡೆಸುವ ಅಗತ್ಯವಿದೆ.

## ಗ್ರಾಮೀಣ ರೈತರ ಸ್ಥಿತಿ–ಗತಿ

ಜಗತ್ತಿನಾದ್ಯಂತ ಬಹುಸಂಖ್ಯಾತ ಬಡವರು, ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಹಸಿವೆಯಿಂದ ಚಿಂತಾಗ್ರಸ್ತರಾದ ಗ್ರಾಮೀಣ ಕುಟುಂಬಗಳ ಸದಸ್ಯರು ತಮ್ಮ ದೈನಂದಿನ ಆಹಾರ ಹಾಗೂ ಜೀವನಾಧಾರಕ್ಕಾಗಿ ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿರುತ್ತಾರೆ. ಗ್ರಾಮೀಣ ರೈತರು ಮತ್ತು ಕೂಲಿಕಾರರು ಆದಾಯ ಸಂಪಾದನೆಗಾಗಿ ಕಡಿಮೆ ಅಪಾಯ ಹಾಗೂ ಅಲ್ಪ ಪ್ರತಿಫಲದ ಮಾರ್ಗವನ್ನು ಅನುಸರಿಸುತ್ತಾರೆ.

ಹಣಕಾಸಿನ ಸಮಸ್ಯೆಯ ಒತ್ತಡದಲ್ಲಿ ಸಿಲುಕಿ, ಖಿನ್ನತೆ / ಉದ್ವಿಗ್ನತೆಗೆ ಬಲಿಯಾಗುತ್ತಾರೆ. ಪ್ರಾಕೃತಿಕ ಗಂಡಾಂತರ ಹಾಗೂ ಹವಾಮಾನ ಬದಲಾವಣೆಗೆ ಗುರಿಯಾಗಿರುವ ಕೃಷಿ ಕ್ಷೇತ್ರದ ವಿಫಲತೆಯಿಂದ ಗ್ರಾಮೀಣ ಕೃಷಿಕರು ಆತ್ಮಹತ್ಯೆ ಇತ್ಯಾದಿ ಅಪರಾಧಗಳಿಗೆ ಬಲಿಯಾಗುತ್ತಾರೆ. ಇಂತಹ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಕೃಷಿ ಅಭಿವೃದ್ಧಿ ಕಾರ್ಯಗೊಳೊಂದಿಗೆ ಸಾಮಾಜಿಕ ಸಂರಕ್ಷಣಾ ಕಾರ್ಯಕ್ರಮಗಳನ್ನು ಸಂಯೋಜಿಸಲಾಗುತ್ತದೆ.

ಗ್ರಾಮೀಣ ರೈತರು ಬದುಕಿಗಾಗಿ ಹೋರಾಟ ನಡೆಸುತ್ತ ಅಂತರ- ತಲೆಮಾರಿನ ದೀರ್ಘಕಾಲೀನ ಹಸಿವೆ ಮತ್ತು ದಾರಿದ್ರ್ಯದ ಸಂಕೀರ್ಣವಾದ ಸಂಕೋಲೆಗಳಿಂದ ಬಂಧಿತರಾಗಿದ್ದಾರೆ. ಅವರು ಕೆಲವು ನಕಾರಾತ್ಮಕವಾದ ಹೋರಾಟ ತಂತ್ರಗಳನ್ನು ಅನುಸರಿಸುವ ಅನಿವಾರ್ಯತೆಗೆ ಗುರಿಯಾಗಿದ್ದಾರೆ.

- ಮಕ್ಕಳ ಆರೋಗ್ಯ ಮತ್ತು ಶಿಕ್ಷಣದಲ್ಲಿ ಅಲ್ಪ ಪ್ರಮಾಣದಲ್ಲಿ ಹಣ ಹೂಡಿಕೆ
- ಸ್ವಾಧೀನದಲ್ಲಿದ್ದ ಅಲ್ಪ-ಸ್ವಲ್ಪ ಆಸ್ತಿಯ ಮಾರಾಟ
- ಎಳೆಯ ವಯಸ್ಸಿನ ಮಕ್ಕಳನ್ನು ದುಡಿಯಲು ಪ್ರೇರೇಪಿಸುವುದು
- ಕೌಟುಂಬಿಕ ವೆಚ್ಚದ ನಿಯಂತ್ರಣಕ್ಕಾಗಿ ಆಹಾರ ಪದಾರ್ಥಗಳ ಬಳಕೆಯನ್ನು ಕಡಿಮೆ ಮಾಡುವುದು, ಇತ್ಯಾದಿ

### ಗ್ರಾಮೀಣ ಕುಟುಂಬಗಳ ಆದಾಯ

ಸಾಮಾಜಿಕ / ಆರ್ಥಿಕ ಮತ್ತು ಜಾತಿ ಜನಗಣತಿ 2011ರ ವರದಿಯ ಮೇರೆಗೆ ಕರ್ನಾಟಕ ರಾಜ್ಯದಲ್ಲಿ ಶೇಕಡಾ 69ರಷ್ಟು ಗ್ರಾಮೀಣ ಕುಟುಂಬಗಳು ಪ್ರತಿ ತಿಂಗಳಿಗೆ ಸುಮಾರು 5000 ರೂ.ಗಳಿಗಿಂತಲೂ ಕಡಿಮೆ ಆದಾಯವನ್ನು ಸಂಪಾದಿಸುತ್ತಿದ್ದವು. ಶೇಕಡಾ 22.27 ರಷ್ಟು ಕುಟುಂಬಗಳು ಪ್ರತಿ ತಿಂಗಳು ರೂ. 5,000 ದಿಂದ 10,000ಗಳನ್ನು ಸಂಪಾದಿಸಿದರೆ ಶೇಕಡಾ 8.63ರಷ್ಟು ಕುಟುಂಬಗಳು 10,000 ರೂ.ಗಳಿಗಿಂತಲೂ ಅಧಿಕ ಆದಾಯವನ್ನು ಪಡೆಯುತ್ತವೆ.

ಬಹು ಸಂಖ್ಯಾತ ಗ್ರಾಮೀಣ ಜನರು ವೈಯಕ್ತಿಕ ಸಾರಿಗೆ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಕೃಷಿ ಕ್ಷೇತ್ರದಲ್ಲಿ ತ್ವರಿತಗತಿಯ ಯಾಂತ್ರೀಕರಣಕ್ಕಾಗಿ ಸಾಕಷ್ಟು ಬಿರುಸಿನ ಪ್ರಚಾರ ನಡೆಸಿದ್ದರೂ ಸಹ ಶೇಕಡಾ 7.49ರಷ್ಟು ಕುಟುಂಬಗಳು ಮಾತ್ರ ಇಂತಹ ಕ್ರಮವನ್ನು ಕೈಗೊಂಡಿವೆ.

ಶೇಕಡಾ 9.87ರಷ್ಟು ಗ್ರಾಮೀಣ ಕುಟುಂಬಗಳು ಮಾತ್ರ ವೇತನ ಪಡೆಯುವ ಸದಸ್ಯರನ್ನು ಹೊಂದಿವೆ. ಶೇಕಡಾ 3.85ರಷ್ಟು ಜನರು ಸರ್ಕಾರಿ ಕಾರ್ಯಾಲಯಗಳಲ್ಲಿ ಶೇಕಡಾ 1.1 ರಷ್ಟು ಜನರು ಸಾರ್ವಜನಿಕ ವಲಯ ಹಾಗೂ ಉಳಿದಂತಹ ಶೇಕಡಾ 4.91ರಷ್ಟು ಜನರು ಖಾಸಗಿ ಕ್ಷೇತ್ರದಲ್ಲಿ ಕಾರ್ಯನಿರ್ವಹಣೆ ಮಾಡುತ್ತಾರೆ.

ದಾರಿದ್ರ್ಯ ನಿವಾರಣೆ / ಉಪಶಮನ ಮತ್ತು ಕಲ್ಯಾಣ ಕಾರ್ಯಕ್ರಮಗಳು ಯಾವುದೇ ಹೆಚ್ಚಿನ ಪರಿಣಾಮ ಬೀರಿಲ್ಲವೆಂಬಂತೆ ಕಾಣುತ್ತದೆ.

### ಪ್ರಧಾನ ಅಂಶ

ಸಾಮಾಜಿಕ ಸಂರಕ್ಷಣೆಯು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಗತಿಶೀಲಗೊಳಿಸಿ, ಜೀವನದ ಆಧಾರ ಹಾಗೂ ವರಮಾನವನ್ನು ಅಧಿಕಗೊಳಿಸುತ್ತದೆ. ಆದರೆ ವಾಸ್ತವಿಕವಾಗಿ ಏನು ಮಾಡಲಾಗುತ್ತದೆ ಮತ್ತು ಏನು ಮಾಡಬೇಕೆಂಬುದರ ವ್ಯತ್ಯಾಸವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಶತಶತಮಾನಗಳ ಗ್ರಾಮೀಣ ದಾರಿದ್ರ್ಯದ ಪುರಾತನ ಸಂಕೋಲೆಗಳನ್ನು ಭಗ್ನಗೊಳಿಸಬೇಕು. ಈ ದಿಶೆಯಲ್ಲಿ ಸಮಗ್ರ ಜಗತ್ತು ನಿರ್ಣಯಾತ್ಮಕವಾಗಿ ತ್ವರಿತಗತಿಯಿಂದ ಕಾರ್ಯತತ್ಪರವಾಗಬೇಕು.

**ಪರಿಣಾಮಕಾರಕ ಕಾರ್ಯಾಚರಣೆಗಾಗಿ ಕೆಲವು ಪ್ರಧಾನ ಅಂಶಗಳನ್ನು ಗುರುತಿಸಲಾಗಿದೆ :**

- ರಾಜಕೀಯ ವಚನಬದ್ಧತೆ
- ಸಾಕಷ್ಟು ಪ್ರಮಾಣದ ಹಣಕಾಸು ಪೂರೈಕೆ
- ಸಹಭಾಗಿತ್ವ
- ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದ ಪೂರಕ ಕಾರ್ಯಗಳು ಇತ್ಯಾದಿ

ಯಶೋಗಾಥೆ

# ಪಂಚಾಯತ್ ಸಶಕ್ತೀಕರಣ ಪುರಸ್ಕಾರ ವಿಜೇತ ಆವಲಹಳ್ಳಿ ಗ್ರಾಮ ಪಂಚಾಯತಿ

– ಕೆ. ರಾಜಶೇಖರ್

ಆವಲಹಳ್ಳಿ ಗ್ರಾಮ ಪಂಚಾಯತಿಯು ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿರುತ್ತದೆ. ಈ ಗ್ರಾಮ ಪಂಚಾಯತಿಯು ರಾಷ್ಟ್ರೀಯ ಹೆದ್ದಾರಿ–75 (ಹಿಂದೆ ರಾಷ್ಟ್ರೀಯ ಹೆದ್ದಾರಿ–4) ರಲ್ಲಿ ಬೆಂಗಳೂರಿನಿಂದ 20 ಕಿ.ಮೀ ದೂರದಲ್ಲಿದ್ದು, ಈ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಆವಲಹಳ್ಳಿ, ಚೀಮಸಂದ್ರ ಮತ್ತು ವೀರೇನಹಳ್ಳಿ ಕಂದಾಯ ಗ್ರಾಮಗಳು ಸೇರಿರುತ್ತದೆ. ಈ ಗ್ರಾಮಗಳನ್ನು ಒಳಗೊಂಡ ಭೌಗೋಳಿಕ ವಿಸ್ತೀರ್ಣ 1378.58 ಎಕರೆ ಹೊಂದಿರುತ್ತದೆ.




ಆವಲಹಳ್ಳಿ ಗ್ರಾಮ ಪಂಚಾಯಿತಿಯು ಕೇಂದ್ರ ಸರ್ಕಾರದಿಂದ 2014–15ನೇ ಸಾಲಿನ "ಪಂಚಾಯಿತಿ ಸಶಕ್ತಿಕರಣ ಪುರಸ್ಕಾರ" ಪ್ರಶಸ್ತಿ ಪಡೆದಿರುತ್ತದೆ.

ಈ ಗ್ರಾಮ ಪಂಚಾಯತಿಯು ಒಟ್ಟು 33 ಸದಸ್ಯರುಗಳನ್ನು ಹೊಂದಿರುತ್ತದೆ.

ಪಂಚಾಯತಿಯ ಸಕಾಲದಲ್ಲಿ ವಾರ್ಡ್ ಸಭೆಗಳು, ಮಹಿಳಾ ಸಭೆಗಳು ಮತ್ತು ಮಕ್ಕಳ ಗ್ರಾಮ ಸಭೆಗಳನ್ನು ಅಯೋಜಿಸುತ್ತ, ಪಂಚಾಯತಿಗಳಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳನ್ನು ಪರಾಮರ್ಶಿಸಿ ಆದ್ಯತೆ ಹಾಗೂ ಅನುದಾನಗಳ ಲಭ್ಯತೆಯನ್ನು ಆಧರಿಸಿ ಕೈಗೊಂಡಿರುತ್ತದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಆವಲಹಳ್ಳಿ ಗ್ರಾಮ ಪಂಚಾಯತ್, ಬೆಂಗಳೂರು ಪೂರ್ವ ತಾಲ್ಲೂಕು



ಗ್ರಾಮ ಪಂಚಾಯತಿಯು ವಿವಿಧ ಮೂಲಗಳಿಂದ ಲಭ್ಯವಾದ ಅನುದಾನಗಳಲ್ಲಿ ಸುಸಜ್ಜಿತವಾದ 30 ಹಾಸಿಗೆಗಳ ಆರೋಗ್ಯ ಕೇಂದ್ರ, ಒಂದು ಲಕ್ಷ ಲೀಟರ್ ಸಾಮರ್ಥ್ಯದ 4 ನೀರಿನ ತೊಟ್ಟಿಗಳು, (ಓವರ ಹೆಡ್ ಟ್ಯಾಂಕ್) ಮೂರು ಶುದ್ಧ ನೀರಿನ ಘಟಕ, ಎರಡು ಅಂಗನವಾಡಿ ಕಟ್ಟಡಗಳು, ಸ್ತ್ರೀ ಶಕ್ತಿ ಭವನಗಳು ಮತ್ತು ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಿದ್ದು, ಶಾಲಾ ಕಟ್ಟಡಗಳನ್ನು ಉನ್ನತೀಕರಿಸಲಾಗಿರುತ್ತದೆ.

ಪಂಚಾಯತಿಯು ಸ್ವಯಂಸೇವಾ ಸಂಸ್ಥೆಯ ಸಹಕಾರದೊಂದಿಗೆ ಶೇಖರಿಸಿದ ಕಸವನ್ನು ವಿಂಗಡಿಸಿ ಕಾಂಪೋಸ್ಟ್ ಗೊಬ್ಬರವನ್ನು ಸಹ ತಯಾರಿಸಿ ವಿತರಿಸಲಾಗುತ್ತಿದೆ. ಮಳೆ ನೀರನ್ನು ಸಮರ್ಪಕವಾಗಿ ಬಳಸಲು ಅನುವಾಗುವಂತೆ ಇಂಗುಗುಂಡಿಗಳನ್ನು ನಿರ್ಮಿಸಲಾಗಿದೆ.

ಗ್ರಾಮ ಪಂಚಾಯತಿಯು ಪ್ರಯಾಣಿಕರ ಅನುಕೂಲಕ್ಕಾಗಿ 3 ಬಸ್ ತಂಗುದಾಣಗಳನ್ನು ನಿರ್ಮಿಸಿದ್ದು, ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು ನೀಲಿನಕ್ಷೆಯನ್ನು ತಯಾರಿಸಲಾಗಿದ್ದು, ಅನುಷ್ಠಾನ ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.

ಪಂಚಾಯತಿಯು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಅನುಸರಿಸಿ ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯಿಂದ ಆಗಮಿಸಿದ ತಂಡವು ಪರಿಶೀಲನಾ ಕಾರ್ಯಗಳನ್ನು ಕೈಗೊಂಡ ಫಲವಾಗಿ 2014-15ನೇ ಸಾಲಿನ “ಪಂಚಾಯತಿ ಸಶಕ್ತಿಕರಣ ಪುರಸ್ಕಾರ” ಪ್ರಶಸ್ತಿಯನ್ನು ದಿನಾಂಕ 24-4-2016 ರಂದು ಮಾನ್ಯ ಪ್ರಧಾನ ಮಂತ್ರಿಗಳವರು ಜೆಮ್‌ಷೆಡ್‌ಪುರದಲ್ಲಿ ಜರುಗಿದ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಪ್ರಶಸ್ತಿ ಪ್ರದಾನ ಮಾಡಿರುತ್ತಾರೆ.

# ರಾಷ್ಟ್ರೀಯ ಗೌರವ ಗ್ರಾಮಸಭಾ ಪ್ರಶಸ್ತಿ ಪಡೆದ ಖಂಡಿಕಾ ಗ್ರಾಮ ಪಂಚಾಯತಿ

**ಯಶೋಗಾಥೆ**



**ಸಿದ್ದಲಿಂಗಯ್ಯ**

ಪಂಚತಂತ್ರದಲ್ಲಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಯ ಎಲ್ಲಾ ಮಾಹಿತಿಗಳನ್ನು ಸಕಾಲದಲ್ಲಿ ಅಳವಡಿಸಿದ್ದಕ್ಕಾಗಿ ರಾಷ್ಟ್ರೀಯ ಗೌರವ ಗ್ರಾಮಸಭಾ ಪ್ರಶಸ್ತಿಗೆ ಆಯ್ಕೆಯಾಗಿದೆ.

ಖಂಡಿಕಾ ಗ್ರಾಮ ಪಂಚಾಯತಿ, ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನಲ್ಲಿದೆ, ಶಿವಮೊಗ್ಗ ಜಿಲ್ಲೆಯು ಕರ್ನಾಟಕ ರಾಜ್ಯದ ಮದ್ಯ ಭಾಗದಲ್ಲಿದೆ ಸಾಗರ ತಾಲ್ಲೂಕು ಗುಡ್ಡಗಾಡು ಪ್ರದೇಶಗಳಿಂದ ಕೂಡಿದ್ದು ಮಲೆನಾಡು ಪ್ರದೇಶವೆಂದು ಗುರುತಿಸಲಾಗಿದೆ.

ಖಂಡಿಕಾ ಗ್ರಾಮ ಪಂಚಾಯತ್ ಹಳ್ಳಿಗಳ ಪ್ರಾಕೃತಿಕ ಭೂಗೋಳ ಹಚ್ಚ ಹಸಿರಿನಿಂದ ಕೂಡಿದ ಅರಣ್ಯ ಮುಚ್ಚಿದ ಮಲೆನಾಡ ಪ್ರದೇಶವಾಗಿದೆ ಮತ್ತು ಜಗತ್ಪ್ರಸಿದ್ದ ಜೋಗ ಜಲಪಾತ (Jog falls)ಕ್ಕೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ 206ರ ಎಡ ಭಾಗದಲ್ಲಿ ಇರುವ ಖಂಡಿಕಾ ಗ್ರಾಮ ಪಂಚಾಯತ್



ಏಳು ಕಂದಾಯ ಗ್ರಾಮಗಳಿಂದ ಕೂಡಿದ್ದು ಮತ್ತು ಸರಿಸುಮಾರು 5476.36 ಚ.ಕಿ.ಮೀ ಪ್ರದೇಶವನ್ನು ಹೊಂದಿರುತ್ತದೆ ಹಾಗೂ ಈ ಗ್ರಾಮ ಪಂಚಾಯತಿಯು 3894 ಜನಸಂಖ್ಯೆ ಇದರಲ್ಲಿ ಮಹಿಳಾ ಜನಸಂಖ್ಯೆಯು 1999 ಹಾಗೂ ಪುರುಷ ಜನಸಂಖ್ಯೆ 1895 ಆಗಿದೆ.

ಖಂಡಿಕಾ ಗ್ರಾಮ ಪಂಚಾಯತ್ 1993 ಪಂಚಾಯತ್ ರಾಜ್ ತಿದ್ದುಪಡಿ ನಂತರ ಕಳೆದ ಎರಡು ದಶಕಗಳಿಂದ ಪಾರದರ್ಶಕ ಮತ್ತು ನಿಷ್ಪಕ್ಷಪಾತ ಆಡಳಿತವನ್ನು ನಡೆಸುತ್ತ ಯಾವುದೇ ಪೂರ್ವಗ್ರಹವಿಲ್ಲದೆ ಕ್ರಿಯಾತ್ಮಕವಾಗಿ ನಿರ್ಗತಿಕರಿಗೆ ದೀನ ದಲಿತರಿಗೆ ಮತ್ತು ಬಡ ಜನರಿಗೆ ಸಮಾನ ಅವಕಾಶಗಳನ್ನು ನೀಡುತ್ತಾ ಬಂದಿದೆ.

ಖಂಡಿಕಾ ಗ್ರಾಮ ಪಂಚಾಯತಿಯು ತನ್ನ ಅಭಿವೃದ್ಧಿಗಾಗಿ ವಾರ್ಡ್ ಸಭೆ ಹಾಗೂ ಗ್ರಾಮ ಸಭೆಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಯಾವುದೇ

ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಸಾಗರ, ಶಿವಮೊಗ್ಗ ಜಿಲ್ಲೆ




ನಿರ್ಬಂದವಿಲ್ಲದೆ ಭಾಗವಹಿಸಲು ಅವಕಾಶ ಕಲ್ಪಿಸುತ್ತಿದೆ. ಈ ಮೂಲಕ ಬಸವ ವಸತಿ ಯೋಜನೆ, ಸ್ವಚ್ಛ ಭಾರತ್ ಅಭಿಯಾನ, ಐ.ಎ.ವೈ ಫಲಾನುಭವಿ ಗಳನ್ನು ಗ್ರಾಮ ಸಭೆಗಳಲ್ಲಿ ಮುಕ್ತವಾಗಿ ಆಯ್ಕೆ ಮಾಡಲಾಗುತ್ತಿದೆ. 14ನೇ ಹಣಕಾಸು ಯೋಜನೆ, ಅಭಿವೃದ್ಧಿ ಅನುದಾನ, ನರೇಗಾ ಕಾಮಗಾರಿಗಳನ್ನು ವಾರ್ಡ್ ಹಾಗೂ ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಿ ನಂತರ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ.

ಖಂಡಿಕಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಸ್.ಸಿ/ಎಸ್‌ಟಿ ಕುಟುಂಬಗಳಿಗೆ ಗ್ಯಾಸ್ ಸಿಲಿಂಡರ್, ಬ್ಯಾಂಡ್‌ಸೆಟ್ ಹಾಗೂ ಛಾವಣಿ ಸೀಟ್‌ಗಳನ್ನು ನೀಡುವ ಮೂಲಕ ಅವರ ಆದಾಯ ಉತ್ಪನ್ನ ಚಟುವಟಿಕೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಸುರಕ್ಷಿತ ಹಾಗೂ ಶುದ್ಧ ಕುಡಿಯುವ ನೀರು ಒದಗಿಸುವ ದೃಷ್ಟಿಯಲ್ಲಿ ನೀರು ಸಂಗ್ರಹಣಾ ಡ್ರಂಗಳನ್ನು ನೀಡಲಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಾದ ಜನನಿ ಸುರಕ್ಷ ಯೋಜನೆ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ, ಮಧ್ಯಾಹ್ನದ ಬಿಸಿ ಊಟದ ಯೋಜನೆ, ಶಾಲೆ ಬಿಟ್ಟ ಮಕ್ಕಳು ಹಾಗೂ ಶಾಲೆಗೆ ದಾಖಲಾಗದೇ ಇರುವ ಮಕ್ಕಳ ಬಗ್ಗೆ ಹಾಗೂ ನವಜಾತ ಶಿಶುಗಳು ಮತ್ತು ಗರ್ಭಿಣಿ, ಬಾಣಂತಿಯರ ಆರೈಕೆ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಮೂಲಕ ವಾರ್ಡ್ ಸಭೆ ಹಾಗೂ ಗ್ರಾಮಸಭೆಗಳಲ್ಲಿ ಮಾಹಿತಿಯನ್ನು ನೀಡಲಾಗಿದೆ.

ಖಂಡಿಕಾ ಗ್ರಾಮ ಪಂಚಾಯತಿಯು 2014–15ನೇ ಸಾಲಿನಲ್ಲಿ ಒಟ್ಟು 6 ಗ್ರಾಮ ಸಭೆಗಳನ್ನು ಹಾಗೂ 24 ವಾರ್ಡ್ ಸಭೆಗಳನ್ನು ನಡೆಸುವುದರ ಮೂಲಕ ಗ್ರಾಮ ಪಂಚಾಯತಿ ಸಮಗ್ರ ಅಭಿವೃದ್ಧಿಯ ಬಗ್ಗೆ ಹಾಗೂ ಸರ್ಕಾರದಿಂದ ಲಭ್ಯವಿರುವ ಎಲ್ಲಾ ಯೋಜನೆಗಳನ್ನು ಪ್ರತಿಯೊಬ್ಬರಿಗೂ ತಿಳಿಯುವಂತೆ ಮಾಡಿದ್ದು, ಆ ಮೂಲಕ ಪಾರದರ್ಶಕವಾಗಿ ಕಾಮಗಾರಿಗಳ ಆಯ್ಕೆ ಹಾಗೂ ವೈಯಕ್ತಿಕ ಫಲಾನುಭವಿಗಳ ಆಯ್ಕೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಯೋಜನೆಗಳ ಪ್ರಯೋಜನವನ್ನು ಪಡೆಯುವಂತೆ ಮಾಡಲಾಗಿರುತ್ತದೆ. ಈ ಸಂಬಂಧ ಗ್ರಾಮ ಪಂಚಾಯತಿಯ ಅಧ್ಯಕ್ಷರನ್ನೊಳಗೊಂಡಂತೆ ಸರ್ವ ಸದಸ್ಯರು ಗ್ರಾಮ ಪಂಚಾಯತಿಯ ಎಲ್ಲಾ ಸಿಬ್ಬಂದಿಗಳು ಹಾಗೂ ವ್ಯಾಪ್ತಿಯ ಎಲ್ಲಾ ಇಲಾಖಾ ಅಧಿಕಾರಿಗಳು, ಅದರಲ್ಲೂ ಪಂಚಾಯತ್ ರಾಜ್ ಇಲಾಖೆಯ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅಧಿಕಾರಿಗಳು ನೀಡಿದ ಸಲಹೆ ಮತ್ತು ಸಹಕಾರದಿಂದ ಹೆಚ್ಚು ಮಹತ್ವ ಬರುವಂತೆ ಆಗಲು ಕಾರಣವಾಗಿರುತ್ತದೆ.

ಈ ಬಗ್ಗೆ ಸರ್ಕಾರದಿಂದ ನಿಗದಿಪಡಿಸಿದ ಪಂಚತಂತ್ರದಲ್ಲಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಯ ಎಲ್ಲಾ ಮಾಹಿತಿಗಳನ್ನು ಸಕಾಲದಲ್ಲಿ ಅಳವಡಿಸಿದ್ದು, ಕೇಂದ್ರ ಸರ್ಕಾರವು ಗ್ರಾಮ ಪಂಚಾಯತಿಯನ್ನು ಗುರುತಿಸಿ ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರಕ್ಕೆ ಆಯ್ಕೆ ಮಾಡಿದ್ದು ಈ ಸಂಬಂಧ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಾಜ್ಯ ತಂಡ ಜನವರಿ 2016ರ ಮಾಹೆಯಲ್ಲಿ ಆಗಮಿಸಿ ಈ ಬಗ್ಗೆ ಕೂಲಂಕಶವಾಗಿ ಪರಿಶೀಲಿಸಿ ಕೇಂದ್ರ ಸರ್ಕಾರದ ಪಂ.ರಾಜ್ ಇಲಾಖೆಗೆ ಶಿಫಾರಸ್ಸು ಮಾಡಿದ ಅನ್ವಯ, ಕೇಂದ್ರ ತಂಡ ಫೆಬ್ರವರಿ 2016ರ ಮಾಹೆಯಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಸದಸ್ಯರನ್ನು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಒಳಗೊಂಡ ತಂಡಕ್ಕೆ ದಿನಾಂಕ:24.04.2016 ರಂದು ಜೆಮ್‌ಶೆಡ್‌ಪುರದಲ್ಲಿ ನಡೆದ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಹಾಗೂ ಗ್ರಾಮ ಉದಯ್ ಸೇ ಭಾರತ್ ಉದಯ್ ಅಭಿಯಾನ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದರು.

ಯಶೋಗಾಥೆ

# ಮೂಲಭೂತ ಸೌಕರ್ಯಗಳಿಗೆ ಆದ್ಯತೆ – ಶಿರಗುಪ್ಪಿ ಗ್ರಾಮ ಪಂಚಾಯತಿ

– ಗೋಪಾಲ ಪಿ. ಮಾಳಿ

ಶಿರಗುಪ್ಪಿ ಗ್ರಾಮ ಪಂಚಾಯತಿಯು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿದೆ. ಈ ತಾಲ್ಲೂಕಿನ ಒಟ್ಟು ಗ್ರಾಮ ಪಂಚಾಯತಿಗಳಲ್ಲಿ ಶಿರಗುಪ್ಪಿಗೆ ಮಹತ್ವದ ಸ್ಥಾನವಿದೆ. ಯಾಕೆಂದರೆ ಕಳೆದ ಐದಾರು ವರ್ಷಗಳಲ್ಲಿ ಶಿರಗುಪ್ಪಿ ಗ್ರಾಮ ಪಂಚಾಯತಿಯು ವಿಶಿಷ್ಠ ಸಾಧನೆಗಳ ಮೂಲಕ ಜನರ ಮನಸ್ಸನ್ನು ಗೆದ್ದಿದೆ. ಈ ಗ್ರಾಮ ಪಂಚಾಯತಿಯಲ್ಲಿ ಪ್ರಸಕ್ತ ನಡೆಯುತ್ತಿರುವ ಪ್ರಗತಿಯ ಚಟುವಟಿಕೆಗಳು ರಾಜ್ಯ ಹಾಗೂ ದೇಶ ಮಟ್ಟದಲ್ಲೂ ಗಮನ ಸೆಳೆಯಲ್ಪಟ್ಟಿದೆ. ಗ್ರಾಮ ಪಂಚಾಯತಿಯು ಜನರಿಗೆ ಒದಗಿಸಬೇಕಾದ ಮೂಲಭೂತ



ಸೌಕರ್ಯಗಳು, ಸೇವೆಗಳು ಮತ್ತು ಅಭಿವೃದ್ಧಿಯ ಎಲ್ಲ ರಂಗಗಳಲ್ಲಿ ಎದ್ದು ಕಾಣುತ್ತಿರುವ ಸಾಧನೆ ಶಿರಗುಪ್ಪಿ ಗ್ರಾಮ ಪಂಚಾಯತಿಯದು. ಪ್ರತಿನಿಧಿಗಳು, ಕ್ಷೇತ್ರ ಸಿಬ್ಬಂದಿಗಳು ಹಾಗೂ ವಿವಿಧ ಇಲಾಖೆಗಳು ಸಮನ್ವಯಕ್ಕೆ ಸಾಕ್ಷಿಯಾಗಿವೆ. ಇದಕ್ಕೆ ಪ್ರತಿಫಲವಾಗಿ ಗೂಗಲ್, ರಾಷ್ಟ್ರೀಯ ಗೌರವ ಗ್ರಾಮ ಸಭಾ, ನಿರ್ಮಲ ಗ್ರಾಮ, ನೈರ್ಮಲ್ಯ, ರಜತ ನೈರ್ಮಲ್ಯ, ಗಾಂಧಿ ಗ್ರಾಮ ಪುರಸ್ಕಾರ ಹೀಗೆ ಆರು ಪ್ರಶಸ್ತಿಗಳನ್ನು ತನ್ನ ಮಡಿಲಿಗೆ ಹಾಕಿಕೊಂಡು ಉತ್ತಮ ರೀತಿಯ ಪ್ರಗತಿಯ ಕಾರ್ಯಗಳನ್ನು ಮಾಡುತ್ತಿದೆ.

ಈ ಗ್ರಾಮ ಪಂಚಾಯತಿಗೆ ದಿನಾಂಕ 24–04–2016ರಂದು ಪಂಚಾಯತ್ ರಾಜ್ ದಿನ ನಿಮಿತ್ತ ಜೆಮ್‌ಶೆಡ್‌ಪುರದಲ್ಲಿ ಜರುಗಿದ ಗ್ರಾಮೋದಯದಿಂದ ಭಾರತ ಉದಯ ಕಾರ್ಯಕ್ರಮದಲ್ಲಿ ಏಳನೆಯ ಪ್ರಶಸ್ತಿ " ಪಂಚಾಯತ್ ಸಶಕ್ತಿಕರಣ ಪುರಸ್ಕಾರ " ಸಿಕ್ಕಿದ್ದು ನಮಗೆ ಹೆಮ್ಮೆಯಾಗಿದೆ. ಈ ಪ್ರಶಸ್ತಿಯು ಈ ಕೆಳಕಂಡ ಅಂಶಗಳಿಗೆ ಮಹತ್ವ ನೀಡಿದೆ.

2014–15ನೇ ಸಾಲಿನಲ್ಲಿ ಜರುಗಿದ ಗ್ರಾಮ ಸಭೆಗಳು, ಅದರಲ್ಲಿ ವಿಶೇಷವಾಗಿ ಮಹಿಳಾ, ಮಕ್ಕಳ ಗ್ರಾಮಸಭೆಗಳು ಮತ್ತು ಸ್ಥಾಯಿ ಸಮಿತಿಗಳ ಸಭೆಯ ಬಗ್ಗೆ ಹೆಚ್ಚಿನ ಆದ್ಯತೆ ಮತ್ತು ದಾಖಲಿಕರಣ. ಅಷ್ಟೇ ಅಲ್ಲದೇ ಎಲ್ಲ

ಗ್ರಾಮ, ಮಹಿಳಾ ಮತ್ತು ಮಕ್ಕಳ ಗ್ರಾಮಸಭೆಗಳು, ಸ್ಥಾಯಿ ಸಮಿತಿಗಳ ಸಭೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಪ್ರಶಸ್ತಿ ಪುರಸ್ಕಾರ.

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರಗುಪ್ಪಿ ಗ್ರಾಮ ಪಂಚಾಯತ್, ಅಥಣಿ ತಾಲ್ಲೂಕು

ಯೋಜನೆಗಳ ನಗದು ಪುಸ್ತಕ ಪರಿಶೀಲನೆ, ಅಂಗನವಾಡಿ, ಶಾಲಾ ವಿಭಾಗ, ಆಸ್ಪತ್ರೆ, ಗ್ರಾಮದ ಸಂಪೂರ್ಣ ಸ್ವಚ್ಛತೆ ಬಗ್ಗೆ ಪರಿಶೀಲನೆ ಹಾಗೂ ಗ್ರಾಮದ ಮನೆ ಮನೆಗೆ ಶೌಚಾಲಯ ಇರುವ ಬಗ್ಗೆ ತಪಾಸಣೆ, ಕಾಮಗಾರಿಗಳ ಪಾರದರ್ಶಕತೆ, ಪ.ಜಾತಿ/ಪ.ಪಂಗಡ ಜನರ ಅನುದಾನ ವೆಚ್ಚ ಮಾಡಿದ ಬಗ್ಗೆ, ಕರವಸೂಲಾತಿ ಸಾಧನೆ ಶೇ 87%, ಮಾಹಿತಿ ಹಕ್ಕು ಅರ್ಜಿದಾರರಿಗೆ ಮಾಹಿತಿ ನೀಡಿದ ಬಗ್ಗೆ, ಗ್ರಾಮಸ್ಥರ ಸಮಸ್ಯೆಗಳ ದಾಖಲೀಕರಣ, ಸರಕಾರದ ಅನುದಾನದ ಬಳಕೆ, ಘನ ತ್ಯಾಜ್ಯ ವಿಲೇವಾರಿ ಘಟಕ ಇತ್ಯಾದಿ ಅಂಶಗಳನ್ನು ಪರೀಶಿಲಿಸಿ ಪ್ರಶಸ್ತಿ ಅಂತಿಮಗೊಳಿಸಿದೆ. ಅಷ್ಟೇ ಅಲ್ಲದೇ ಈ ಕೇಳಗಿನ ಅಂಶಗಳು ಗ್ರಾಮದ ವೈಶಿಷ್ಟ್ಯತೆಯನ್ನು ತೋರಿಸುತ್ತದೆ.

- ಗ್ರಾಮದಲ್ಲಿ ಪ್ರತಿ ಮನೆಗೆ ಶೌಚಾಲಯ ನಿರ್ಮಾಣ ಮಾಡಲಾಗಿದೆ ಮತ್ತು ಬಯಲು ಮಲ ವಿಸರ್ಜನೆ ನಿಷೇಧಿಸಲಾಗಿದೆ.
- ಗ್ರಾಮಸ್ಥರಿಗೆ ಸ್ವಚ್ಛ ಮತ್ತು ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ.
- ಗ್ರಾಮ ಪಂಚಾಯತಿ ಸಾಮಾನ್ಯ ಸಭೆ ಮತ್ತು ಗ್ರಾಮ ಸಭೆಗಳನ್ನು ಲೋಕಲ್ ಟಿ.ವಿ ಮೂಲಕ ಮನೆ ಮನೆಗೆ ಪಾರದರ್ಶಕತ್ವವಾಗಿ ಪ್ರಸಾರ ಮಾಡುವುದು. ಸಮಸ್ಯೆಗಳನ್ನು ಫೋನ್ ಮುಖಾಂತರ ಸ್ವೀಕರಿಸಿ, ಸ್ಥಳದಲ್ಲೆ ಉತ್ತರಿಸುವುದನ್ನು ಸಹಿತ ನೇರ ಪ್ರಸಾರ ಮಾಡುವುದು.
- ತೆರಿಗೆದಾರರಿಂದ ಪಂಚಾಯುತಿ ಕರ ವಸೂಲಿಯನ್ನು ನೇರವಾಗಿ ಚಲನ್ ಮೂಲಕ ಬ್ಯಾಂಕಿಗೆ ಭರಣ ಮಾಡುವ ವ್ಯವಸ್ಥೆ.
- ಗ್ರಾಮದಲ್ಲಿ ಇರತಕ್ಕಂತಹ ಎಲ್ಲ ಆಸ್ತಿಗಳನ್ನು ಸರ್ವೆಮಾಡಿ ಚೆಕ್‌ಬಂದಿ ಸಹಿತ ಅಳತೆಗಳುಳ್ಳ ಕರ ಆಕರಣೆ ಪಟ್ಟಿ ನಮೂನೆ ನಂ.9 ನ್ನು ಗಣಕೀಕೃತಗೊಳಿಸಿ ಕಂಪ್ಯೂಟರ್ ಮೂಲಕ ಪೂರೈಸುವುದು.
- ಗ್ರಾಮ ಪಂಚಾಯತಿಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವದೊಂದಿಗೆ ಕಾರ್ಯ ನಿರ್ವಹಿಸುವುದು. ಉದಾ: ಪ್ರತಿ ಗ್ರಾಮ ಪಂಚಾಯತ್ ಸದಸ್ಯರಿಗೆ ಸಭೆಯ ನೋಟೀಸ್ ನೊಂದಿಗೆ ಗ್ರಾಮ ಪಂಚಾಯತಿಯಲ್ಲಿ ಆಯಾ ತಿಂಗಳದಲ್ಲಿ ನಡೆದಂತಹ ಎಲ್ಲ ಯೋಜನೆಗಳ ಜಮಾ-ಖರ್ಚು ಘೋಷ್ವಾರೆ ಪ್ರತಿಯನ್ನು ನೀಡಲಾಗುವುದು.



- ಗ್ರಾಮದ ಗ್ರಾಮಸ್ಥರಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಆರೋಗ್ಯ, ಶಿಕ್ಷಣ, ಬೀದಿದೀಪ ನಿರ್ವಹಣೆಯನ್ನು ಸಂಪೂರ್ಣವಾಗಿ ಯಶಸ್ವಿ ರೀತಿಯಲ್ಲಿ ಕಾರ್ಯನಿರ್ವಹಿಸಲಾಗುವುದು.
- ಹಳೆಯ ಕಾಲದ ಡಂಗೂರ ಪದ್ಧತಿಯನ್ನು ರದ್ದು ಪಡಿಸಿ, ತಾಂತ್ರಿಕತೆಯನ್ನೊಳಗೊಂಡ ಸೌಂಡ್ ಸಿಸ್ಟಮ್ ಮೂಲಕ ಯಾವುದೇ ಕಾರ್ಯಕ್ರಮ ಪ್ರಚಾರ, ತಿಳುವಳಿಕೆ ತುರ್ತು ಸಂದರ್ಭಗಳನ್ನು ಗ್ರಾಮಸ್ಥರಿಗೆ ತಿಳಿಸುವ ವ್ಯವಸ್ಥೆ ಮಾಡಲಾಗಿದೆ.
- ಗ್ರಾಮ ಪಂಚಾಯತಿಯ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಯಾವುದೇ ಜಾತಿ, ಮತ, ಪಂಥ, ಪಕ್ಷಪಾತವಿಲ್ಲದೇ ಸರ್ವಾಂಗೀಣ ಅಭಿವೃದ್ಧಿ ಕೈಗೊಳ್ಳಲು ಗ್ರಾಮಸ್ಥರು ಅವಿರೋಧ ಆಯ್ಕೆ ಮಾರ್ಗವನ್ನು ಅನುಸರಿಸಿದ್ದಾರೆ.
- ಪ್ರತಿಮನೆಗೆ ಪ್ರತಿದಿನ ಜಲದೂತ ವಾಹನ ಮುಖಾಂತರ ಶುದ್ಧ ಕುಡಿಯುವ ನೀರಿನ ಪೂರೈಕೆ.
- ಶುದ್ಧ ಕುಡಿಯುವ ನೀರನ್ನು ಪಡೆಯಲು ಎ.ಟಿ.ಡಬ್ಲ್ಯೂ ಕಾರ್ಡ್ ಬಳಕೆ. 2 ರೂ 20 ಲೀಟರ್. ವಾಹನ ಮೂಲಕ: 5 ರೂ. ಗೆ 20 ಲೀಟರ್.
- ಗ್ರಾಮದ ಪ್ರತಿದಿನ ಸ್ವಚ್ಛತೆಗಾಗಿ ಘನ ತ್ಯಾಜ್ಯ ವಿಲೇವಾರಿ ವಾಹನ ಹೊಂದಿದ್ದು ಮತ್ತು ಸ್ವಚ್ಛತಾ ಸಿಬ್ಬಂದಿ ನೇಮಕ ಮಾಡಲಾಗಿದೆ.
- ಗ್ರಾಮ ಪಂಚಾಯತಿಯು ಸುಂದರವಾದ ಸಭಾ ಭವನ ಮತ್ತು ಕಾರ್ಯಾಲಯ ಹೊಂದಿದೆ.

# ಅಭಿವೃದ್ಧಿಯತ್ತ ದಾಪುಗಾಲು – ಕಣ್ಣೂರು ಗ್ರಾಮ ಪಂಚಾಯಿತಿ

– ಎನ್. ಸುಜೇಂದ್ರ

ಕಣ್ಣೂರು ಗ್ರಾಮ ಪಂಚಾಯಿತಿಯು ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿರುತ್ತದೆ. ಈ ಗ್ರಾಮ ಪಂಚಾಯಿತಿಯು ಬೆಂಗಳೂರಿನಿಂದ 18 ಕಿ.ಮೀ. ದೂರದಲ್ಲಿದ್ದು ಈ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಕಣ್ಣೂರು, ಕಾಡುಸೊಣ್ಣಪ್ಪನಹಳ್ಳಿ, ಮಿಟ್ಟಗಾನಹಳ್ಳಿ, ಯರಪ್ಪನಹಳ್ಳಿ, ಬಂಡೆಬೊಮ್ಮಸಂದ್ರ, ನಾಡಗೌಡಗೊಲ್ಲಹಳ್ಳಿ, ಚಿಕ್ಕಗುಬ್ಬಿ ಎಂಬ ಕಂದಾಯ ಗ್ರಾಮಗಳು ಸೇರಿರುತ್ತವೆ. ಕಣ್ಣೂರು ಗ್ರಾಮಕ್ಕೆ ಬಂಡೆಹೊಸೂರು ಎಂಬ ದಾಖಲೆ ಗ್ರಾಮವು ಇರುತ್ತದೆ. ಈ ಗ್ರಾಮಗಳನ್ನು ಒಳಗೊಂಡ ಬೌಗೋಳಿಕ ವಿಸ್ತೀರ್ಣ 1698.5 ಹೆಕ್ಟೇರ್ ಜಮೀನು ಹೊಂದಿರುತ್ತದೆ. 2011ರ ಜನಗಣತಿಯಂತೆ ಪಂಚಾಯಿತಿಯ ಎಲ್ಲಾ ಗ್ರಾಮಗಳ ಜನಸಂಖ್ಯೆ 12157 ಆಗಿದ್ದು, ಪ.ಜಾ–3388




ಪ.ಪಂ–327, ಇತರೆ–8442 ಇರುತ್ತಾರೆ. ಪಂಚಾಯಿತಿಯಲ್ಲಿ ಒಬ್ಬರು ಬಿಲ್‌ಕಲೆಕ್ಟರ್‌ಗಳು, 13 ಜನ ವಾಟರ್‌ಮ್ಯಾನ್‌ಗಳು, 11 ಜನ ಪೌರ ಕಾರ್ಮಿಕರು, ಇಬ್ಬರು ಗಣಕ ಯಂತ್ರ ನಿರ್ವಾಹಕ ಹಾಗೂ ಒಬ್ಬ ಕಛೇರಿ ಸಹಾಯಕ ಕೆಲಸವನ್ನು ನಿರ್ವಹಿಸುತ್ತಿರುತ್ತಾರೆ.

ದಿನಾಂಕ 06–07–2015 ರಲ್ಲಿ ಚುನಾವಣೆ ನಡೆದು, ಶ್ರೀ. ಬಿ.ಕೆ. ನಾಗರಾಜು ರವರು ಗ್ರಾಮ ಪಂಚಾಯಿತಿ ಅದ್ಯಕ್ಷರಾಗಿಯೂ ಮತ್ತು ಶ್ರೀಮತಿ. ಉಮಾ ಕೆ. ರವಿ ರವರು ಉಪಾದ್ಯಕ್ಷರಾಗಿಯೂ ಅಧಿಕಾರ ಚುಕ್ಕಾಣಿ ಹಿಡಿದಿರುತ್ತಾರೆ. ಗ್ರಾಮ ಪಂಚಾಯತಿಯ ಆಡಳಿತ ಮಂಡಳಿಯಲ್ಲಿ ಒಟ್ಟು 31 ಜನ ಸದಸ್ಯರಿದ್ದು, ಇವರಲ್ಲಿ 14 ಜನ ಪುರುಷರು ಮತ್ತು 17 ಮಹಿಳಾ ಸದಸ್ಯರು. ಇವರಲ್ಲಿ ಒಟ್ಟು 9 ಪರಿಶಿಷ್ಟ ಜಾತಿ ಮತ್ತು 1 ಪರಿಶಿಷ್ಟ ಪಂಗಡದವರು, ಉಳಿದವರು ಇತರೆ ವರ್ಗಕ್ಕೆ ಸೇರಿರುತ್ತಾರೆ.

ಪಂಚಾಯಿತಿ ಗ್ರಾಮಠಾಣ ಬೌಗೋಳಿಕ ವಿಸ್ತೀರ್ಣ 1698.5 ಹೆಕ್ಟೇರ್ ಇದ್ದು, ಈ ಪಂಚಾಯಿತಿ ವ್ಯಾಪ್ತಿಯಲ್ಲಿ 2 ಪ್ರಾಥಮಿಕ ಆರೋಗ್ಯ ಕೇಂದ್ರ, 3 ಪಶು ವೈದ್ಯ ಶಾಲೆಗಳು, 1 ಅಂಚೆ ಕಛೇರಿ, 5 ಹಾಲು ಉತ್ಪಾದಕ ಸಹಕಾರ ಸಂಘಗಳು ಮತ್ತು ಕಣ್ಣೂರಿನಲ್ಲಿ 1 ಗ್ರಂಥಾಲಯ ಮತ್ತು 4 ಸರ್ಕಾರಿ ನ್ಯಾಯ ಬೆಲೆ ಅಂಗಡಿ, 25 ಸ್ತ್ರಿ ಶಕ್ತಿ ಗುಂಪುಗಳು ಮತ್ತು ಗ್ರಾಮ ಲೆಕ್ಕಾಧಿಕಾರಿ ಕಛೇರಿಗಳು ಅಸ್ತಿತ್ವದಲ್ಲಿವೆ.

ಕಣ್ಣೂರು ಗ್ರಾಮ ಪಂಚಾಯಿತಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕೆ ಮಾದರಿಯಾಗಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಣ್ಣೂರು ಗ್ರಾಮ ಪಂಚಾಯತ್, ಬೆಂಗಳೂರು ಪೂರ್ವ ತಾಲ್ಲೂಕು

**ಪಾಠ ಶಾಲೆಗಳು:** ಈ ಪಂಚಾಯಿತಿ ವ್ಯಾಪ್ತಿಯಲ್ಲಿ 6 ಪ್ರಾಥಮಿಕ ಶಾಲೆಗಳು, 3 ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು 1 ಪ್ರೌಢಶಾಲೆ ಜೊತೆಗೆ 10 ಅಂಗನವಾಡಿ ಕೇಂದ್ರಗಳಿರುತ್ತವೆ. ಪಾಠಶಾಲೆ / ಅಂಗನವಾಡಿ ಕೇಂದ್ರಗಳಿಗೆ ಸುಸಜ್ಜಿತ ಕಟ್ಟಡ, ಶೌಚಾಲಯ, ವಿದ್ಯುಚ್ಛಕ್ತಿ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿರುತ್ತದೆ.

**ಕುಡಿಯುವ ನೀರಿನ ವ್ಯವಸ್ಥೆ:** ಈ ಪಂಚಾಯಿತಿಯಲ್ಲಿ 7 ಮೇಲು ತೊಟ್ಟಿ, 10 ಕಿರುನೀರು ಸರಬರಾಜು ಯೋಜನೆಗಳಿದ್ದು, ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿದೆ.

## ಅಭಿವೃದ್ಧಿ ಕಾಮಗಾರಿಗಳು

**ಆಸ್ಪತ್ರೆ:** ಕಣ್ಣೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎರಡು ಸಮುದಾಯ ಆರೋಗ್ಯ ಕೇಂದ್ರಗಳಿದ್ದು, ಹೊರ ರೋಗಿಗಳ ಚಿಕಿತ್ಸೆ, ಅವಶ್ಯ ಪರೀಕ್ಷೆಗಳು, ಇತ್ಯಾದಿ ಸೌಲಭ್ಯಗಳು ಸಾರ್ವಜನಿಕರಿಗೆ ಲಭ್ಯವಿದ್ದು, ಇದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗಿದೆ.

ಪ್ರತಿ ನಿತ್ಯ ಗ್ರಾಮಗಳಲ್ಲಿ ಪೌರ ಕಾರ್ಮಿಕರು ಘನತ್ಯಾಜ್ಯ ಸಂಗ್ರಹಿಸಿ ಗ್ರಾಮದ ಹೊರಗೆ ಸಾಗಿಸುತ್ತಾರೆ. ಕ್ರಿಮಿನಾಶಕಗಳನ್ನು ಖರೀದಿಸಿ, ಚರಂಡಿ ಮೋರಿಗಳಿಗೆ ಸಿಂಪರಣೆ ಮಾಡಲಾಗುತ್ತಿದೆ ಹಾಗೂ ಕಾಲಕಾಲಕ್ಕೆ ನೀರಿನ ಮೇಲುತೊಟ್ಟಿ, ಕಿರುನೀರು ಸರಬರಾಜು ತೊಟ್ಟಿಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ.

**ಪಶು ವೈದ್ಯ ಆಸ್ಪತ್ರೆ :** ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಣ್ಣೂರು, ಕಾಡುಸೊಣ್ಣಪ್ಪನಹಳ್ಳಿ, ನಾಡಗೌಡಗೊಲ್ಲಹಳ್ಳಿ ಗ್ರಾಮಗಳಲ್ಲಿ ಪಶು ವೈದ್ಯ ಆಸ್ಪತ್ರೆಗಳಿದ್ದು, ಇದರಿಂದ ಜಾನುವಾರುಗಳಿಗೆ ಆರೋಗ್ಯ ತಪಾಸಣೆ ಸಕಾಲದಲ್ಲಿ ದೊರೆಯುತ್ತಿರುತ್ತದೆ.

**ಹಾಲು ಉತ್ಪಾದಕರ ಸಹಕಾರ ಸಂಘ :** ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಣ್ಣೂರು, ಕಾಡು ಸೊಣ್ಣಪ್ಪನಹಳ್ಳಿ, ಯರಪ್ಪನಹಳ್ಳಿ, ಬಂಡೆಬೊಮ್ಮಸಂದ್ರ ಗ್ರಾಮಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಇದರಿಂದ ಗ್ರಾಮಸ್ಥರಿಗೆ ಪಶು ಸಂಗೋಪನೆ ಹಾಗೂ ಆರೋಗ್ಯ ಸಂಜೀವಿನಿ ಬಗ್ಗೆ ತುಂಬ ಉಪಯೋಗವಾಗುತ್ತಿರುತ್ತದೆ.

**ಸರ್ಕಾರಿ ನ್ಯಾಯಬೆಲೆ ಅಂಗಡಿ :** ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಣ್ಣೂರು, ಹೊಸೂರುಬಂಡೆ, ಕಾಡುಸೊಣ್ಣಪ್ಪನಹಳ್ಳಿ, ಯರಪ್ಪನಹಳ್ಳಿ, ಬಂಡೆಬೊಮ್ಮಸಂದ್ರ ಗ್ರಾಮಗಳಲ್ಲಿ ಸರ್ಕಾರಿ ನ್ಯಾಯಬೆಲೆ ಅಂಗಡಿಗಳಿದ್ದು, ಇದರಿಂದ ಗ್ರಾಮಸ್ಥರಿಗೆ ಸಕಾಲದಲ್ಲಿ ಪಡಿತರ ನೀಡಲಾಗುತ್ತಿರುತ್ತದೆ.

## ಗ್ರಾಮಸ್ಥರಿಗೆ ನೀರು ಸರಬರಾಜು ಯೋಜನೆಗಳ ಬಗ್ಗೆ:

**ಶುದ್ಧ ಕುಡಿಯುವ ನೀರಿನ ಘಟಕ :** ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಣ್ಣೂರು ಗ್ರಾಮದಲ್ಲಿ ಮತ್ತು ಬಂಡೆಬೊಮ್ಮಸಂದ್ರ ಗ್ರಾಮದಲ್ಲಿ ಚಾಲ್ತಿಯಲ್ಲಿದ್ದು, 20 ಲೀಟರ್ ಶುದ್ಧ ಕುಡಿಯುವ ನೀರಿಗೆ ರೂ. 5/- ರಂತೆ ಗ್ರಾಮಸ್ಥರಿಗೆ ಸರಬರಾಜು ಮಾಡಲಾಗುತ್ತಿರುತ್ತದೆ.

## ಸ್ತ್ರೀ ಶಕ್ತಿ ಭವನ:

ಕಣ್ಣೂರು ಗ್ರಾಮದಲ್ಲಿ ತಾಲ್ಲೂಕು ಪಂಚಾಯತಿ ಅನುದಾನದಿಂದ ಸ್ತ್ರೀ ಶಕ್ತಿ ಭವನ ನಿರ್ಮಿಸಲಾಗಿದೆ, ಇನ್ನೂ ಉದ್ಘಾಟನೆಯಾಗಿರುವುದಿಲ್ಲ. ಉದ್ಘಾಟನೆಯ ನಂತರ ಸ್ತ್ರೀಶಕ್ತಿ ಭವನದಲ್ಲಿ ಕಾರ್ಯಕಲಾಪಗಳನ್ನು ನಡೆಸಲಾಗುವುದು.

## ಸಮುದಾಯ ಭವನ:

ಕಣ್ಣೂರು ಗ್ರಾಮದಲ್ಲಿ ತಾಲ್ಲೂಕು ಪಂಚಾಯತಿ ಅನುದಾನದಿಂದ ಸಮುದಾಯ ಭವನ ನಿರ್ಮಿಸಲಾಗಿದೆ, ಇನ್ನೂ ಉದ್ಘಾಟನೆಯಾಗಿರುವುದಿಲ್ಲ. ಉದ್ಘಾಟನೆಯ ನಂತರ ಸಮುದಾಯ ಭವನದಲ್ಲಿ ಕಾರ್ಯಕಲಾಪಗಳನ್ನು ನಡೆಸಲಾಗುವುದು.

## ಬಯಲು ರಂಗ ಮಂದಿರ:

ಕಣ್ಣೂರು ಗ್ರಾಮದಲ್ಲಿ ತಾಲ್ಲೂಕು ಪಂಚಾಯತಿ ಅನುದಾನದಿಂದ ಬಯಲು ರಂಗ ಮಂದಿರ ನಿರ್ಮಿಸಲಾಗಿದ್ದು, ಈ ಬಯಲು ರಂಗ ಮಂದಿರದಲ್ಲಿ ಸರ್ಕಾರಿ ಸಾರ್ವಜನಿಕ ಸಮಾರಂಭ, ಬೀದಿ ನಾಟಕ ಹಾಗೂ ಇತರೆ ಸಾರ್ವಜನಿಕ ಕಾರ್ಯಕಲಾಪಗಳನ್ನು ನಡೆಸಲಾಗುವುದು.

ಕಾಡುಸೊಣ್ಣಪ್ಪನಹಳ್ಳಿ ಗ್ರಾಮದಲ್ಲಿ ಜಿಲ್ಲಾ ಪಂಚಾಯತ್ ಅನುದಾನದಿಂದ ಸರ್ಕಾರಿ ಕನ್ನಡ ಪ್ರೌಢಶಾಲೆಯ ಆವರಣದಲ್ಲಿ ಬಯಲು ರಂಗ ಮಂದಿರ ನಿರ್ಮಿಸಲಾಗಿದ್ದು, ಈ ಬಯಲು ರಂಗ ಮಂದಿರದಲ್ಲಿ ಸರ್ಕಾರಿ ಸಾರ್ವಜನಿಕ ಸಮಾರಂಭ, ಬೀದಿ ನಾಟಕ ಹಾಗೂ ಇತರೆ ಸಾರ್ವಜನಿಕ ಕಾರ್ಯಕಲಾಪಗಳನ್ನು ನಡೆಸಲಾಗುವುದು.

## ಗ್ರಾಮ ಪಂಚಾಯಿತಿ ವಾಣಿಜ್ಯ ಮಳಿಗೆಗಳು:

ಕಣ್ಣೂರು ಗ್ರಾಮದ ಯಲಹಂಕ ಮುಖ್ಯ ರಸ್ತೆಯಲ್ಲಿ 13ನೇ ಹಣಕಾಸು ಆಯೋಗ, ವಿಧಾನ ಪರಿಷತ್ ಸದಸ್ಯರ ಅನುದಾನ, ಮತ್ತು ಗ್ರಾಮ ಪಂಚಾಯತಿ ಅನುದಾನದಿಂದ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗಿದ್ದು, ಒಟ್ಟು ರೂ. 1,00,000/- ಮಾಸಿಕ ಬಾಡಿಗೆ ಗ್ರಾಮಪಂಚಾಯತಿಗೆ ಬರುತ್ತಿದೆ.

# ಅರಿಯಿರಿ ನೀರಿನ ಮಹತ್ವ

ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದಾಗಿ ಜನರು ನೀರಿಗಾಗಿ ಪರದಾಡುತ್ತಿರುವುದು, ಮಹಿಳೆಯರು ನೀರಿಗಾಗಿ ಆಳದ ಬಾವಿಯಲ್ಲಿ ಇಳಿದು ನೀರನ್ನು ತರುತ್ತಿರುವುದನ್ನು ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ, ಟಿ.ವಿ ಚಾನಲ್‌ಗಳಲ್ಲಿ ಕಾಣುತ್ತಿದ್ದೇವೆ. ಅಷ್ಟು ಕಷ್ಟಪಟ್ಟು ನೀರನ್ನು ಮೇಲಕ್ಕೆ ತಂದರೂ ನೀರಿನಲ್ಲಿ ಕ್ರಿಮಿ ಕೀಟಗಳು ಸತ್ತಿರುವುದು, ಪಾಚಿಯ ವಾಸನೆಯಿಂದ ಕೂಡಿರುವುದರನ್ನು ನೋಡುತ್ತಿದ್ದೇವೆ. ಈ ನೀರನ್ನು ಕುಡಿಯುವುದಕ್ಕೆ ಯೋಗ್ಯವಲ್ಲದಿದ್ದರೂ ಮನುಷ್ಯನ ಜೀವನಕ್ಕೆ ನೀರು ಅತ್ಯಾವಶ್ಯಕವಾಗಿರುವುದರಿಂದ ಬಳಸಲೇಬೇಕಾದ ಪರಿಸ್ಥಿತಿ ಉದ್ಭವಿಸಿದೆ.

ಇನ್ನು ಕೆಲವು ವರ್ಷಗಳು ಕಳೆದರೆ ನಮ್ಮ ಮಕ್ಕಳು ಮೊಮ್ಮಕ್ಕಳು ಒಂದೊಂದು ಹನಿ ನೀರಿಗೂ ಪರದಾಡುವ ಪರಿಸ್ಥಿತಿಯನ್ನು ಎದುರಿಸಬೇಕಾದೀತು. ಈ ಎಲ್ಲದಕ್ಕೂ ಕಾರಣ ನಾವುಗಳು. ಜಲ ಸಂಪನ್ಮೂಲವನ್ನು ಆದಷ್ಟು ಜಾಗರೂಕತೆಯಿಂದ ಬಳಸಿದಲ್ಲಿ ಮಾತ್ರ ಮುಂದೊಂದು ದಿನ ನಾವು ಅಲ್ಪ ಸ್ವಲ್ಪ ವಾದರೂ ಉತ್ತಮ ನೀರನ್ನು ಪಡೆಯಲು ಸಾಧ್ಯವಾಗುತ್ತದೆ.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ನಾವು ಉಳಿಸುವ ಒಂದೊಂದು ಹನಿ ನೀರು ಮತ್ತೊಬ್ಬರ ಜೀವ ಉಳಿಸಬಹುದಲ್ಲವೇ?
2. ನೀರು ಇದ್ದಾಗ ಅನಾವಶ್ಯಕವಾಗಿ ಬಳಸಿ ಹಾಳು ಮಾಡುವುದರ ಬದಲು ಅದರ ಮಿತವ್ಯಯ ಮಾಡಿ ಉಳಿಸುವುದು ಸರಿಯಲ್ಲವೇ?
3. ಬಟ್ಟೆ ಮತ್ತು ಪಾತ್ರೆ ತೊಳೆದ ನೀರು, ಸ್ನಾನದ ಮನೆಯ ನೀರನ್ನು ವ್ಯರ್ಥವಾಗಿ ಚರಂಡಿಗೆ ಬಿಡುವುದಕ್ಕಿಂತ ಗಿಡ ಮರಗಳಿಗೆ ಬಿಡುವುದು ಒಳ್ಳೆಯದಲ್ಲವೇ?
4. ಪ್ರತಿ ಮನೆಯಲ್ಲೂ ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿದಲ್ಲಿ ಮಳೆ ನೀರು ವ್ಯರ್ಥವಾಗಿ ಹರಿಯುವುದನ್ನು ತಪ್ಪಿಸಬಹುದಲ್ಲವೇ?
5. ವಾಹನಗಳನ್ನು ಸ್ವಚ್ಛಮಾಡಲು ಗಂಟೆಗಟ್ಟಲೆ ಪೈಪ್‌ಗಳಲ್ಲಿ ನೀರನ್ನು ಬಳಸುವುದಕ್ಕಿಂತ ಒಂದು ಬಕೆಟ್ ನೀರಿನಲ್ಲಿ ತೊಳೆಯುವುದು ಒಳ್ಳೆಯದಲ್ಲವೇ?

**ಗಂಗರಾಜು ಎಂ.**
ನಂ.13, ಜಿ–ಬ್ಲಾಕ್, ಎನ್.ಜಿ.ಒ ಕ್ವಾರ್ಟಸ್,
ಡಾ॥ರಾಜ್‌ಕುಮಾರ್ ರಸ್ತೆ, 6ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – 560010.

ಕಾವ್ಯ ವಿಕಾಸ

# ಹಳ್ಳಿಗಳ ಅಭಿವೃದ್ಧಿ



ಜಯರಾಮು ಎನ್.

ಹಳ್ಳಿಗಳ ಗ್ರಾಮೀಣಾಭಿವೃದ್ಧಿ
ಆಗಲಿ ಸರ್ವಜನಾಂಗದ ಶ್ರೇಯೋಭಿವೃದ್ಧಿ.

ದಿನನಿತ್ಯ ನಡೆಯಲಿ ಸ್ವಚ್ಛ ಭಾರತದ ಆಚರಣೆ
ಗ್ರಾಮೀಣ ಪ್ರದೇಶದ ಸಮಸ್ಯೆಗಳು ಆಗಲಿ ನಿವಾರಣೆ.

ನಡೆಯಲಿ ಗ್ರಾಮಸಭೆ ದಿನನಿತ್ಯ
ಆಗಲಿ ಗ್ರಾಮೀಣಾಭಿವೃದ್ಧಿ ಅಕ್ಷರಶಃ ಸತ್ಯ.

ಶಾಲೆಗಳಲ್ಲಿ ನಡೆಯಲಿ ಸರ್ವ ಶಿಕ್ಷಣ ಅಭಿಯಾನ
ಸರ್ವರಲ್ಲೂ ಮೂಡಲಿ ಸ್ವಚ್ಛ ಭಾರತ ಅಭಿಯಾನ

ಮಹಾತ್ಮಗಾಂಧಿ ಕಂಡ ಕನಸು ಸುವರ್ಣ ಗ್ರಾಮೋದಯ
ಇಂದಿರಾಗಾಂಧಿ ಕಂಡ ಕನಸು ಬಡವರ ಅಂತ್ಯೋದಯ

ಮನೆಯೇ ಮಂತ್ರಾಲಯ ಮನಸೇ ದೇವಾಲಯ
ಮನೆಯಲ್ಲಿ ಇಲ್ಲದಿದ್ದರೆ ಕಟ್ಟಿಸಿಕೊಳ್ಳಿ ಶೌಚಾಲಯ

ಹಾರಾಡಲಿ ದಿನನಿತ್ಯ ಕರ್ನಾಟಕದಲ್ಲಿ ಕನ್ನಡ ಧ್ವಜ.
ಪ್ರತಿಯೊಬ್ಬ ಭಾರತೀಯನು ಗೌರವಿಸಬೇಕು ರಾಷ್ಟ್ರಧ್ವಜ.

ಗ್ರಾಮ ಪಂಚಾಯತಿ ಸದಸ್ಯರು,
ತಮ್ಮೇನಹಳ್ಳಿ ಪಾಳ್ಯ, ಸರ್ಕಾರಿ ಶಾಲೆ ಹತ್ತಿರ,
ಅಚ್ಯುತನಗರ ಪೋಸ್ಟ್, ದಾಸನಪುರ ಹೋಬಳಿ,
ಬೆಂಗಳೂರು ಉತ್ತರ 560107

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 28-04-2016 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2014-15 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2015-16 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2015-16 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 231 | 89 | 0 | 81 | 29 | 84 | 99 | 87 | 67 | 1 |
| ಉಡುಪಿ | 158 | 90 | 0 | 68 | 53 | 38 | 100 | 93 | 63 | 2 |
| ಬೆಂಗಳೂರು (ಗ್ರಾ) | 105 | 93 | 5 | 5 | 89 | 72 | 99 | 82 | 63 | 3 |
| ದಕ್ಷಿಣ ಕನ್ನಡ | 230 | 87 | 0 | 89 | 13 | 56 | 99 | 90 | 62 | 4 |
| ಕೋಲಾರ | 156 | 100 | 0 | 1 | 100 | 89 | 96 | 48 | 62 | 5 |
| ರಾಮನಗರ | 127 | 99 | 0 | 0 | 73 | 85 | 100 | 75 | 61 | 6 |
| ಚಿಕ್ಕಬಳ್ಳಾಪುರ | 157 | 96 | 0 | 1 | 89 | 82 | 96 | 56 | 60 | 7 |
| ಬಾಗಲಕೋಟೆ | 198 | 79 | 2 | 3 | 73 | 95 | 100 | 68 | 60 | 8 |
| ಮಂಡ್ಯ | 234 | 99 | 5 | 1 | 39 | 88 | 100 | 69 | 57 | 9 |
| ಮೈಸೂರು | 266 | 87 | 0 | 0 | 56 | 74 | 99 | 74 | 55 | 10 |
| ಶಿವಮೊಗ್ಗ | 271 | 95 | 0 | 14 | 45 | 85 | 98 | 43 | 54 | 11 |
| ತುಮಕೂರು | 331 | 96 | 0 | 1 | 77 | 63 | 93 | 53 | 54 | 12 |
| ಕೊಡಗು | 104 | 94 | 0 | 31 | 2 | 61 | 100 | 85 | 53 | 13 |
| ದಾವಣಗೆರೆ | 233 | 97 | 0 | 0 | 50 | 93 | 98 | 31 | 52 | 14 |
| ಚಾಮರಾಜನಗರ | 130 | 91 | 0 | 0 | 25 | 66 | 98 | 80 | 51 | 15 |
| ಬೀದರ್ | 186 | 94 | 0 | 0 | 50 | 65 | 99 | 54 | 51 | 16 |
| ಧಾರವಾಡ | 144 | 88 | 0 | 0 | 54 | 92 | 98 | 31 | 51 | 17 |
| ಚಿಕ್ಕಮಗಳೂರು | 227 | 99 | 1 | 25 | 19 | 44 | 97 | 65 | 50 | 18 |
| ಬೆಂಗಳೂರು (ನ) | 96 | 84 | 0 | 22 | 52 | 13 | 100 | 78 | 49 | 19 |
| ಗದಗ | 122 | 86 | 0 | 0 | 54 | 83 | 100 | 24 | 49 | 20 |
| ಹಾವೇರಿ | 223 | 92 | 0 | 0 | 49 | 70 | 97 | 37 | 49 | 21 |
| ಚಿತ್ರದುರ್ಗ | 189 | 97 | 0 | 0 | 57 | 71 | 99 | 16 | 48 | 22 |
| ಹಾಸನ | 267 | 96 | 1 | 6 | 22 | 42 | 99 | 59 | 46 | 23 |
| ವಿಜಯಪುರ | 213 | 90 | 0 | 0 | 47 | 49 | 98 | 22 | 43 | 24 |
| ಬಳ್ಳಾರಿ | 199 | 91 | 3 | 5 | 6 | 48 | 99 | 34 | 40 | 25 |
| ಬೆಳಗಾವಿ | 502 | 93 | 0 | 0 | 17 | 56 | 88 | 27 | 40 | 26 |
| ರಾಯಚೂರು | 180 | 88 | 0 | 0 | 36 | 41 | 81 | 38 | 40 | 27 |
| ಕೊಪ್ಪಳ | 153 | 84 | 0 | 0 | 19 | 44 | 99 | 25 | 38 | 28 |
| ಕಲಬುರಗಿ | 264 | 82 | 0 | 0 | 14 | 42 | 86 | 1 | 32 | 29 |
| ಯಾದಗಿರಿ | 123 | 92 | 0 | 4 | 0 | 29 | 95 | 1 | 31 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಏಪ್ರಿಲ್ 2016)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ಕೋಲಾರ | 21443 | 20966 | 0.3 | 2 | 1429 | 1 | 1 |
| ಬೆಂಗಳೂರು (ಗ್ರಾ) | 11076 | 11038 | 2.6 | 8 | 1230 | 2 | 2 |
| ಚಿಕ್ಕಬಳ್ಳಾಪುರ | 9927 | 9687 | 0.9 | 6 | 827 | 3 | 3 |
| ಚಿತ್ರದುರ್ಗ | 5168 | 5132 | 0.7 | 4 | 323 | 5 | 4 |
| ಬಾಗಲಕೋಟೆ | 7601 | 7094 | 3.3 | 10 | 422 | 4 | 5 |
| ಉಡುಪಿ | 3344 | 2804 | 0.7 | 4 | 304 | 7 | 6 |
| ಉತ್ತರ ಕನ್ನಡ | 2461 | 2303 | 0 | 1 | 175 | 9 | 7 |
| ತುಮಕೂರು | 8122 | 7911 | 6.3 | 21 | 312 | 6 | 8 |
| ಚಿಕ್ಕಮಗಳೂರು | 2334 | 2088 | 4.5 | 17 | 212 | 8 | 9 |
| ದಕ್ಷಿಣ ಕನ್ನಡ | 2066 | 1763 | 0.5 | 3 | 103 | 14 | 10 |
| ಕೊಪ್ಪಳ | 1872 | 1816 | 3.7 | 12 | 144 | 11 | 11 |
| ಮೈಸೂರು | 3327 | 3344 | 4.4 | 15 | 114 | 13 | 12 |
| ಹಾವೇರಿ | 1437 | 1485 | 3.6 | 11 | 95 | 15 | 13 |
| ಶಿವಮೊಗ್ಗ | 2387 | 2532 | 7.8 | 23 | 140 | 12 | 14 |
| ರಾಮನಗರ | 1567 | 1439 | 19.2 | 29 | 156 | 10 | 15 |
| ಹಾಸನ | 1421 | 1383 | 5.1 | 18 | 83 | 16 | 16 |
| ಗದಗ | 676 | 608 | 4.4 | 15 | 67 | 18 | 17 |
| ಕೊಡಗು | 196 | 175 | 2.9 | 9 | 39 | 23 | 18 |
| ಬೀದರ್ | 1194 | 1288 | 9.3 | 24 | 70 | 17 | 19 |
| ಚಾಮರಾಜನಗರ | 558 | 585 | 5.1 | 18 | 55 | 21 | 20 |
| ದಾವಣಗೆರೆ | 749 | 719 | 4.2 | 14 | 39 | 23 | 21 |
| ವಿಜಯಪುರ | 1365 | 1391 | 10.4 | 25 | 65 | 19 | 22 |
| ಬಳ್ಳಾರಿ | 323 | 374 | 1.9 | 7 | 12 | 27 | 23 |
| ಮಂಡ್ಯ | 1051 | 896 | 12.4 | 27 | 58 | 20 | 24 |
| ಬೆಳಗಾವಿ | 845 | 866 | 4 | 13 | 17 | 26 | 25 |
| ರಾಯಚೂರು | 736 | 702 | 6.1 | 20 | 38 | 25 | 26 |
| ಬೆಂಗಳೂರು (ನ) | 4277 | 4509 | 17.8 | 28 | 45 | 22 | 27 |
| ಧಾರವಾಡ | 193 | 182 | 11 | 26 | 10 | 28 | 28 |
| ಕಲಬುರಗಿ | 165 | 155 | 7.7 | 22 | 6 | 30 | 29 |
| ಯಾದಗಿರಿ | 95 | 70 | 27.1 | 30 | 8 | 29 | 30 |

ಕರ್ನಾಟಕ ಸರ್ಕಾರ

ಸುತ್ತೋಲೆ

ಗ್ರಾಅಪ 298 ಉಖಾಯೋ 2016

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3 ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–1.
ದೂ. 080–22372738 E-mail: nregs-ka@nic.in
ದಿನಾಂಕ: 01–04–2016

# ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕಾರ್ಮಿಕರ ಕನಿಷ್ಠ ಕೂಲಿದರವನ್ನು ಪರಿಷ್ಕರಿಸಿ ದಿನಾಂಕ: 01–04–2016ರಿಂದ ಅನ್ವಯವಾಗುವಂತೆ ಜಾರಿಗೊಳಿಸುವ ಕುರಿತು.

**ಉಲ್ಲೇಖ:** ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರ ಅಧೀನ ಕಾರ್ಯದರ್ಶಿಯವರ ಪತ್ರದ ಸಂಖ್ಯೆ: J-11011/1/2009-MGNREGA(pt) ದಿನಾಂಕ: 29–03–2016

***********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣ 6(1)ರನ್ವಯ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಅಕುಶಲ ಕಾರ್ಮಿಕರಿಗೆ ಪ್ರಸ್ತುತ ಪಾವತಿಸುತ್ತಿರುವ ಕೂಲಿದರವನ್ನು ರೂ. 204/– ರಿಂದ ರೂ. 224/–ಗಳಿಗೆ ಹೆಚ್ಚಿಸಿ ದಿನಾಂಕ: 01–04–2016 ರಿಂದ ಅನ್ವಯವಾಗುವಂತೆ ರಾಜ್ಯ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೊಳಿಸಲು ಕೇಂದ್ರ ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಅಧಿಸೂಚನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಟ್ಟಿರುತ್ತಾರೆ. ಪ್ರತಿ ಲಗತ್ತಿಸಿದೆ. ಆದ ಪ್ರಯುಕ್ತ ಪರಿಷ್ಕೃತ ಕೂಲಿ ದರವನ್ನು ದಿನಾಂಕ: 01–04–2016ರಿಂದ ಅಕುಶಲ ಕಾರ್ಮಿಕರಿಗೆ ಕೂಡಲೇ ಪಾವತಿಸಲು ಕ್ರಮವಹಿಸುವಂತೆ ಸೂಚಿಸಿದೆ.

ಕೂಲಿದರದ ಪರಿಷ್ಕರಣೆಯಿಂದ ಸಾಮಗ್ರಿ ವೆಚ್ಚದ ದರ ರೂ. 149.33 ಪೈಸೆಗಳಾಗಿರುತ್ತದೆ. ಆಡಳಿತಾತ್ಮಕ ವೆಚ್ಚದ ದರ ರೂ. 22.40 ಪೈಸೆಗಳಾಗಿರುತ್ತದೆ. ಆದ್ದರಿಂದ ದಿನ ಒಂದಕ್ಕೆ ಘಟಕದ ವೆಚ್ಚದ ದರವು ಒಬ್ಬ ಕೂಲಿ ಕಾರ್ಮಿಕನಿಗೆ ಕೂಲಿ ವೆಚ್ಚ, ಸಾಮಗ್ರಿ ವೆಚ್ಚ ಮತ್ತು ಆಡಳಿತಾತ್ಮಕ ವೆಚ್ಚವು ಸೇರಿದಂತೆ ರೂ. 395.73 ಪೈಸೆಗಳನ್ನು ವೆಚ್ಚ ಮಾಡಬೇಕಾಗಿರುತ್ತದೆ. ಯಾವುದೇ ಕಾರಣಕ್ಕೂ ಈಗ ಹೇಳಿರುವ ಘಟಕದ ವೆಚ್ಚದ ದರವು ಮೀರದಂತೆ ಕಾಮಗಾರಿಗಳ ಅನುಷ್ಠಾನದಲ್ಲಿ ಎಚ್ಚರವಹಿಸುವುದು. ಆದ್ದರಿಂದ ಈ ಘಟಕದ ವೆಚ್ಚದ ದರವನ್ನು ಯೋಜನೆಯ ಅನುಷ್ಠಾನದಲ್ಲಿ ಅಳವಡಿಸಿಕೊಂಡು ಕಾಮಗಾರಿಗಳನ್ನು ನಿರ್ವಹಿಸಲು ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

ಕೇಂದ್ರ ಸರ್ಕಾರವು 2015–16ನೇ ಸಾಲಿಗೆ ಕೂಲಿದರವನ್ನು ಅಕುಶಲ ಕೂಲಿಕಾರ್ಮಿಕರಿಗೆ ರೂ. 224.00ನ್ನು ನಿಗಧಿಪಡಿಸಿರುವುದರಿಂದ ಒಂದು ದಿನಕ್ಕೆ ತಗಲುವ ವೆಚ್ಚ ಕೂಲಿ, ಸಾಮಗ್ರಿ ಮತ್ತು ಆಡಳಿತಾತ್ಮಕ ವೆಚ್ಚವು ಸೇರಿದಂತೆ (i.e Cost perday) ರೂ. 395.73 ಪೈಸೆ ಆಗುತ್ತದೆ. (ಕೂಲಿ+ಸಾಮಗ್ರಿ+ಆಡಳಿತಾತ್ಮಕ ವೆಚ್ಚ = ರೂ. 224.00 + ರೂ. 149.33 + ರೂ. 22.40 = ರೂ. 395.73 ಪೈಸೆ).

(ಮುನೀಷ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2016–17 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಹೊಸ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ

**ಉಲ್ಲೇಖ** :

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 23.10.2013
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 186 ಉಖಾಯೋ 2012 ಬೆಂಗಳೂರು ದಿನಾಂಕ: 02.09.2014
3. 2016–17 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕಂಡಿಕೆ (281) ರಲ್ಲಿ ಘೋಷಿಸಿದ ರೀತ್ಯಾ
4. ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರ ಪತ್ರ ಸಂಖ್ಯೆ: ತೋಇ/ಜಂನಿ/ಜೈ/ಕೇ/ತಾಸ/51/2015–16 ದಿನಾಂಕ: 03.03.2016
5. ಈ ಕಛೇರಿ ಪತ್ರ ಸಂಖ್ಯೆ: ಗ್ರಾಅಪ 716 ಉಖಾಯೋ 2015 ದಿನಾಂಕ: 11.03.2016
6. ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ ಸಂಖ್ಯೆ: ಗ್ರಾಅಪ 95 ಉಖಾಯೋ 2016 ದಿನಾಂಕ: 11.03.2016
7. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರ ಸಂಖ್ಯೆ: ಎ–12036/1/2016–MGNREGA-IV ದಿನಾಂಕ: 21.03.2016
8. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2016–17 ನೇ ಸಾಲಿನ ಕೂಲಿ ಆಯವ್ಯಯ ಹಂಚಿಕೆ ಮಾಡುವ ಕುರಿತು ಈ ಕಛೇರಿ ಪತ್ರ ಸಂಖ್ಯೆ: ಗ್ರಾಅಪ 439 ಉಖಾಯೋ 2015 ದಿನಾಂಕ: 26.03.2015
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ದಿನಾಂಕ: 01.04.2016

**********

**ಪ್ರಸ್ತಾವನೆ:**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದು ಕೇಂದ್ರ ಪುರಸ್ಕೃತ ಹಕ್ಕು ಆಧಾರಿತ ಮತ್ತು ಮಹತ್ವಕಾಂಕ್ಷೆಯ ಯೋಜನೆಯಾಗಿರುತ್ತದೆ. ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ತೋಟಗಾರಿಕೆ ಇಲಾಖೆಗೆ ಈ ಯೋಜನೆಯ ಅನುಷ್ಠಾನ ಇಲಾಖೆ ಎಂದು ಘೋಷಿಸಲಾಗಿದೆ.

ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ ತೋಟಗಾರಿಕೆ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಾದ ಸಹಾಯಕ ನಿರ್ದೇಶಕರಿಗೆ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಎಂದು ಘೋಷಿಸಲಾಗಿದೆ ಹಾಗೂ ಸದರಿಯವರ ಲಾಗಿನ್‌ನಲ್ಲಿ ಅಂದಾಜು ಪಟ್ಟಿಗಳ ಫ್ರೀಜಿಂಗ್, ಇ–ಹಾಜರಾತಿ ಪಟ್ಟಿಗಳ ಸೃಜನೆ ಹಾಗೂ ಪಾವತಿ ಮತ್ತು ಸಾಮಗ್ರಿ ಬಿಲ್ಲುಗಳ ಸೃಜನೆ ಹಾಗೂ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ.

2016–17 ನೇ ಸಾಲಿನ ಆಯವ್ಯಯದ ಕಂಡಿಕೆ 281 ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 10,000 ಎಕರೆ ಹೊಸ ತೋಟಗಾರಿಕೆ ಕ್ಷೇತ್ರ ವಿಸ್ತರಣೆ ಮಾಡಲು ಘೋಷಣೆ ಮಾಡಲಾಗಿರುತ್ತದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಅನುಸೂಚಿ – 1 ರ ಕಂಡಿಕೆ – 4 ರ ಪ್ರವರ್ಗ – ಬಿ ದಡಿ ವ್ಯಕ್ತಿಗತ ಫಲಾನುಭವಿಗಳಿಗೆ ತೋಟಗಾರಿಕೆಯ ಕಾಮಗಾರಿಗಳ ಸೌಲಭ್ಯವನ್ನು ಕಂಡಿಕೆ – 5 ರಲ್ಲಿ ಸೂಚಿಸಿದ ಅರ್ಹಫಲಾನುಭವಿಗಳಿಗೆ ಒದಗಿಸಿ ಅನುಷ್ಠಾನಿಸಲು ಅವಕಾಶ ಕಲ್ಪಿಸಲಾಗಿದೆ. ತೋಟಗಾರಿಕೆಯ ಸಮುದಾಯ ಕಾಮಗಾರಿಗಳನ್ನು ಸಹ ನರೇಗಾ ಅಧಿನಿಯಮದ ಅನುಸೂಚಿ – 1 ರ ಕಂಡಿಕೆ – 4 ರ ಪ್ರವರ್ಗ – ಎ (v) ರಡಿ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿದೆ. ಈ ಎರಡರ ಕಾಮಗಾರಿಗಳನ್ನು ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಅನುಷ್ಠಾನಗೊಳಿಸಬಹುದಾಗಿರುತ್ತದೆ.

ಕೇಂದ್ರ ಸರ್ಕಾರವು ವ್ಯಕ್ತಿಗತ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆಗೆದುಕೊಳ್ಳಲು ಹಾಗೂ ಅನುಷ್ಠಾನ ಇಲಾಖೆಗಳ ಯೋಜನೆಗಳೊಂದಿಗೆ ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಕೃಷಿ ಮತ್ತು ಕೃಷಿಯೇತರ ಕಾಮಗಾರಿಗಳನ್ನು ತೆಗೆದುಕೊಳ್ಳಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚು ಒತ್ತನ್ನು ನೀಡಿದೆ. ರಾಜ್ಯ ಸರ್ಕಾರವು 2016–17 ನೇ ಸಾಲಿನ ಆಯವ್ಯಯ ಕಂಡಿಕೆ (283) ರಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ 5 ಲಕ್ಷ ವ್ಯಕ್ತಿಗತ ಕಾಮಗಾರಿಗಳನ್ನು ತೆಗೆದುಕೊಳ್ಳಲು ಘೋಷಿಸಲಾಗಿದೆ.

ಉಲ್ಲೇಖ (5), (6) ಹಾಗೂ (9) ರಲ್ಲಿ ತೀರ್ಮಾನಿಸಿದಂತೆ, ತೋಟಗಾರಿಕೆ ಇಲಾಖೆ ರವರು 20,000 ಎಕರೆ ಹೊಸ ತೋಟಗಾರಿಕೆ ಕ್ಷೇತ್ರ ಅಭಿವೃದ್ಧಿ ಕಾಮಗಾರಿಗಳು ಸ್ವತಂತ್ರವಾಗಿ ಅಥವಾ ಇಲಾಖಾ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಅನುಷ್ಠಾನ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ನಿರ್ದೇಶಕರು, ತೋಟಗಾರಿಕೆ ರವರು 17,769 ಎಕರೆ ತೋಟಗಾರಿಕೆ ಕ್ಷೇತ್ರಗಳ ವಿಸ್ತರಣೆ ಕಾಮಗಾರಿಗಳ ಜಿಲ್ಲಾವಾರು ವಿಂಗಡಣೆ ನೀಡಿದ್ದು, ಅದರಂತೆ ಮತ್ತು ಇನ್ನೂ 2,231 ಅರ್ಹ ಫಲಾನುಭವಿಗಳನ್ನು ಗುರುತಿಸಿ, ಒಟ್ಟಾರೆ ಕನಿಷ್ಠ 20,000 ಎಕರೆ ಹೊಸ ತೋಟಗಾರಿಕೆ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆ ಉದ್ಯೋಗ ಖಾತರಿ ಯೋಜನೆಯ ನಿಯಮಾನುಸಾರ ಅನುಮೋದನೆ ಪಡೆದು, ಕಾಮಗಾರಿಗಳ ಋತುಮಾನಕ್ಕೆ ತಕ್ಕಂತೆ ಒಗ್ಗೂಡಿಸುವಿಕೆಯ ಮೂಲಕ ಅಥವಾ ಸ್ವತಂತ್ರವಾಗಿ ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 270 ಉಖಾಯೋ 2016 ಬೆಂಗಳೂರು ದಿನಾಂಕ: 07.04.2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ 2016–17 ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ಘೋಷಿಸಿದಂತೆ, ತೋಟಗಾರಿಕೆ ಇಲಾಖೆಯ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವತಂತ್ರವಾಗಿ ಅಥವಾ ಒಗ್ಗೂಡಿಸುವಿಕೆಯ ಮೂಲಕ 20,000 ಎಕರೆ ಏಕರೆಗಳನ್ನು ವಿಸ್ತೀರ್ಣಗೊಳಿಸುವ ಕಾರ್ಯಕ್ರಮವನ್ನು ಈ ಯೋಜನೆಯ ಅಧಿನಿಯಮದ ಅನುಸೂಚಿ – 1 ರ ಕಂಡಿಕೆ – 4 ರ ಪ್ರವರ್ಗ – ಬಿ ಅಡಿ ಅವಕಾಶ ಕಲ್ಪಿಸಿದಂತೆ ಕಂಡಿಕೆ – 5 ರಲ್ಲಿ ಸೂಚಿಸಿರುವ ಅರ್ಹಫಲಾನುಭವಿಗಳ ಜಮೀನುಗಳ ವಿಸ್ತೀರ್ಣದಲ್ಲಿ ಜಿಲ್ಲಾವಾರು ಹಮ್ಮಿಕೊಳ್ಳಬೇಕಾದ ಕಾಮಗಾರಿಗಳ ಸಂಖ್ಯೆ ಅನುಬಂಧ – 1 ರಲ್ಲಿ ಲಗತ್ತಿಸಿದಂತೆ ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗಳ ಅನುಪಾಲನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

1. ಎಂ.ಜಿ.ಎನ್.ಆರ್.ಇ.ಜಿ.ಎ. ಅನುಸೂಚಿ – 1 ಹಾಗೂ ಕಾರ್ಯಾಚರಣೆ ಮಾರ್ಗಸೂಚಿಯಂತೆ ಕಾಮಗಾರಿಗಳ ಕ್ರಿಯಾಯೋಜನೆ ತಯಾರಿಸಿಕೊಂಡು ನಿಯಮಾನುಸಾರ ಗ್ರಾಮ ಸಭೆ ಹಾಗೂ ಜಿಲ್ಲಾ ಕಾರ್ಯಕ್ರಮ ಸಂಯೋಜಕರ (DPC)ಮಂಜೂರಾತಿ ಪಡೆದುಕೊಳ್ಳುವುದು.
2. 2013–14, 2014–15 ಹಾಗೂ 2015–16ನೇ ಸಾಲಿನಲ್ಲಿ ಗ್ರಾಮ ಸಭೆ ಹಾಗೂ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳಿಂದ ಮಂಜೂರಾತಿ ಆಗಿರುವ ಕಾಮಗಾರಿಗಳು 2016–17 ನೇ ಸಾಲಿನ ಕೂಲಿ ದರ ಹಾಗೂ SoR ಅನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.
3. 2016 ನೇ ಮಳೆಗಾಲದಲ್ಲಿ ಈ ಯೋಜನೆಯಡಿಯಲ್ಲಿ 20,000 ಎಕರೆ ತೋಟಗಾರಿಕೆ ಅಭಿವೃದ್ಧಿ ಸಮರ್ಪಕವಾಗಿ ಮಾಡಬೇಕಾಗಿದೆ. ಆದ್ದರಿಂದ, ಅರ್ಹ ಫಲಾನುಭವಿಗಳನ್ನು ಗುರುತಿಸಿ, ಕ್ರಿಯಾ ಯೋಜನೆ ತಯಾರಿಸಿ, end2endnrega.in ನಲ್ಲಿ ಏಪ್ರಿಲ್ 2016 ರೊಳಗೆ ದಾಖಲಿಸಿ, ಯೋಜನೆಯ ನಿಯಮಾನುಸಾರ ಅನುಮೋದನೆ ಪಡೆಯುವುದು.

4. ಗಿಡಗಳನ್ನು ನೆಡುವ ಕಾಮಗಾರಿಗಳು ತೋಟಗಾರಿಕೆ ಇಲಾಖೆ ಅನುಮೋದಿತ ಮಾದರಿಯಂತೆ ಅನುಷ್ಠಾನಗೊಳಿಸುವುದು. ಇದಕ್ಕೆ ಅವಶ್ಯಕವಿರುವ ಸೂಕ್ತ ಮಾದರಿ ಅಂದಾಜು ಪತ್ರಿಕೆಯನ್ನು ನಿರ್ದೇಶಕರು, ತೋಟಗಾರಿಕೆ ಇಲಾಖೆಯವರ ಹಂತದಲ್ಲಿ ಹೊರಡಿಸಬಹುದಾಗಿರುತ್ತದೆ.

5. ಸ್ಥಳೀಯ ತೋಟಗಾರಿಕೆ ಬೆಳೆಗಳಿಗೆ ಆದ್ಯತೆ ನೀಡುವುದು ಮತ್ತು ಅರ್ಹ ರೈತರಿಗೆ ಆರ್ಥಿಕ ಸಬಲತೆಯನ್ನು ಹೆಚ್ಚಿಸುವ ಬೆಳೆಗಳಿಗೆ ಪ್ರಾಮುಖ್ಯತೆ ನೀಡುವುದು.

6. ಈ ಕಾಮಗಾರಿಗಳು ಋತುಮಾನ ಆಧಾರಿತವಾಗಿದ್ದು, ಮಣ್ಣು ಮತ್ತು ತೇವಾಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು.

7. ಇಲಾಖಾ ಅಧಿಕಾರಿಗಳು ಅವರ ವಿತ್ತಾಧಿಕಾರದಂತೆ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ನೀಡಿ, ಕಾಮಗಾರಿಗಳನ್ನು ಚಾಲನೆ ಮಾಡುವುದು.

8. ಈ ಕಾಮಗಾರಿಗಳು ತೋಟಗಾರಿಕೆ ಇಲಾಖೆ ಲಾಗಿನ್‌ನಿಂದ ಮೊದಲನೇ ಆದ್ಯತೆ ಮೇರೆಗೆ ಹಾಗೂ ಅನಿವಾರ್ಯ ಪರಿಸ್ಥಿತಿಯಲ್ಲಿ ಗ್ರಾಮ ಪಂಚಾಯಿತಿ ಲಾಗಿನ್ ಮೂಲಕ ಅನುಷ್ಠಾನ ಮಾಡತಕ್ಕದ್ದು. ತೋಟಗಾರಿಕೆ ಇಲಾಖೆಯು ಅನುಷ್ಠಾನ ಮಾಡುವ ಎಲ್ಲಾ ಕಾಮಗಾರಿಗಳ ಕೂಲಿ ಮತ್ತು ಸಾಮಗ್ರಿಗಳ ಶೇಕಡ 60:40 ರ ಅನುಪಾತವನ್ನು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸತಕ್ಕದ್ದು.

9. ವ್ಯಕ್ತಿಗತ ಫಲಾನುಭವಿಗಳು ಮೂರು ಹಂತಗಳ ಛಾಯಚಿತ್ರಗಳನ್ನು ಕಡ್ಡಾಯವಾಗಿ ನಿರ್ವಹಣೆ ಮಾಡತಕ್ಕದ್ದು ಹಾಗೂ ಕಾಮಗಾರಿಗಳ ಸ್ಥಳದಲ್ಲಿ ಕಡ್ಡಾಯವಾಗಿ ನಾಮಫಲಕಗಳನ್ನು ಅಳವಡಿಸುವುದು. ನಾಮಫಲಕಗಳಿಗೆ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ಸೇರಿಸುವುದು ಮತ್ತು ಇದರ ವೆಚ್ಚವನ್ನು ಶೇಕಡ 40ರಷ್ಟಿನ ಸಾಮಗ್ರಿ ಘಟಕದಲ್ಲಿ ಭರಿಸುವುದು.

10. ವ್ಯಕ್ತಿಗತ ಫಲಾನುಭವಿಗಳಿಗೆ ಅವರ ಹೆಸರಿನಲ್ಲಿ e-NMR ಗಳನ್ನು ವಿತರಿಸಿ ಕೂಲಿ ಮತ್ತು ಸಾಮಗ್ರಿ ವೆಚ್ಚಗಳ ಸಂದಾಯಕ್ಕೆ e-FMS ಮೂಲಕ ಕ್ರಮವಹಿಸುವುದು.

11. ವೈಯಕ್ತಿಕ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಥಮ ಆದ್ಯತೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಿ ನಂತರ ಉಳಿದ ಅರ್ಹ ಫಲಾನುಭವಿಗಳಿಗೆ ಆದ್ಯತೆ ನೀಡುವುದು.

12. ಒಗ್ಗೂಡಿಸುವಿಕೆಯ ಕಾಮಗಾರಿಗಳಿಗೆ ಆದ್ಯತೆ ನೀಡುವುದು.

13. ಪ್ರತಿ ಕಾಮಗಾರಿಗೆ ಪ್ರತ್ಯೇಕವಾದ ಕಡತವನ್ನು ನಿರ್ವಹಿಸುವುದು. ಸದರಿ ಕಡತದಲ್ಲಿ ಆಯುಕ್ತಾಲಯದಿಂದ ತಿಳಿಸಿದ 16 ದಾಖಲೆಗಳನ್ನು ನಿರ್ವಹಿಸುವುದು ಮತ್ತು ಪರಿವೀಕ್ಷಣಾ ಅಧಿಕಾರಿಗೆ ವೀಕ್ಷಣ ಸಮಯದಲ್ಲಿ ಲಭ್ಯವಾಗುವಂತೆ ಕ್ರಮವಹಿಸುವುದು.

14. 2017 ನೇ ಮಳೆಗಾಲದಲ್ಲಿ ಈ ಯೋಜನೆಯಡಿಯಲ್ಲಿ ಕನಿಷ್ಠ 20,000 ಎಕರೆ ತೋಟಗಾರಿಕೆ ಅಭಿವೃದ್ಧಿ ಸಮರ್ಪಕವಾಗಿ ಮಾಡಬೇಕಾಗಿದೆ. ಆದ್ದರಿಂದ, ಬೇಕಾಗಿರುವ ಅರ್ಹ ಸಸಿಗಳನ್ನು ಬೆಳೆಸುವ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿ, end2endnrega.in ನಲ್ಲಿ ದಾಖಲಿಸಿ, ಯೋಜನೆಯ ನಿಯಮಾನುಸಾರ ಅನುಮೋದನೆ ಪಡೆದು, ಸಸಿಗಳನ್ನು 2016–17 ನೇ ಸಾಲಿನಲ್ಲಿ ಋತುಮಾನಕ್ಕೆ ತಕ್ಕಂತೆ ಬೆಳೆಸುವುದು.

15. ಈ ಯೋಜನೆಯಲ್ಲಿ ಕೈಗೊಂಡಿರುವ ಎಲ್ಲಾ ಕಾಮಗಾರಿಗಳ ಜಿಯೋ ಟ್ಯಾಗ್ (Latitude & Longitude) ಮಾಹಿತಿ ಆದ್ಯತೆ ಮೇರೆಗೆ ಮತ್ತು ಆಸ್ತಿ ವಹಿ ಸಮರ್ಪಕವಾಗಿ ನಿರ್ವಹಿಸುವುದು.

16. ಯೋಜನೆಯ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಋಣಾತ್ಮಕ ಕಾಮಗಾರಿಗಳನ್ನು ತೆಗೆದುಕೊಳ್ಳುವಂತಿಲ್ಲ. (ಕಾರ್ಯಾಚರಣೆಯ ಮಾರ್ಗಸೂಚಿಗಳು 2013 ರ 4 ನೇ ಆವೃತ್ತಿ – ಅಧ್ಯಾಯ – 7 ರ ಕಂಡಿಕೆ 7.3)

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಸಿದ್ದೇಶ್ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಅನುಬಂಧ – 1

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 270 ಉಖಾಯೋ 2016 ಬೆಂಗಳೂರು ದಿನಾಂಕ: 07.04.2016

# 2016–17 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಪ್ರದೇಶ ಅಭಿವೃದ್ಧಿ ಕಾಮಗಾರಿಗಳ ವಿವರ

| ಕ್ರ.ಸಂ. | ಜಿಲ್ಲೆ / ವಿಭಾಗ | 2016–17 ನೇ ಸಾಲಿನಲ್ಲಿ ತೋಟಗಾರಿಕೆ ಪ್ರದೇಶ ಅಭಿವೃದ್ಧಿ ವಿವರ (ಎಕರೆಗಳಲ್ಲಿ) |
|---|---|---|
| 1 | ಬಾಗಲಕೋಟೆ | 554 |
| 2 | ಬೆಂಗಳೂರು ನಗರ | 606 |
| 3 | ಬೆಂಗಳೂರು ಗ್ರಾಮಾಂತರ | 316 |
| 4 | ಬೆಳಗಾಂ | 801 |
| 5 | ಬಳ್ಳಾರಿ | 745 |
| 6 | ಬೀದರ್ | 521 |
| 7 | ಬಿಜಾಪುರ | 542 |
| 8 | ಚಾಮರಾಜನಗರ | 597 |
| 9 | ಚಿಕ್ಕಬಳ್ಳಾಪುರ | 447 |
| 10 | ಚಿಕ್ಕಮಗಳೂರು | 1331 |
| 11 | ಚಿತ್ರದುರ್ಗ | 705 |
| 12 | ದಕ್ಷಿಣ ಕನ್ನಡ | 776 |
| 13 | ದಾವಣಗೆರೆ | 647 |
| 14 | ಧಾರವಾಡ | 443 |
| 15 | ಗದಗ | 437 |
| 16 | ಕಲಬುರ್ಗಿ | 439 |
| 17 | ಹಾಸನ | 455 |
| 18 | ಹಾವೇರಿ | 481 |
| 19 | ಕೊಡಗು | 521 |
| 20 | ಕೋಲಾರ | 491 |
| 21 | ಕೊಪ್ಪಳ | 577 |
| 22 | ಮಂಡ್ಯ | 460 |
| 23 | ಮೈಸೂರು | 543 |
| 24 | ರಾಯಚೂರು | 572 |
| 25 | ರಾಮನಗರ | 371 |
| 26 | ಶಿವಮೊಗ್ಗ | 771 |
| 27 | ತುಮಕೂರು | 760 |
| 28 | ಉಡುಪಿ | 401 |
| 29 | ಉತ್ತರ ಕನ್ನಡ | 826 |
| 30 | ಯಾದಗಿರಿ | 433 |
| ಒಟ್ಟು | | **17,569** |

(ಸಿದ್ದೇಶ್ ಮೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ/42/ಜಿಪಸ/2016,

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:15.4.2016.

# ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 177(2)ರಲ್ಲಿ ಮತ್ತು ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ) ನಿಯಮಗಳು, 2005 ಮತ್ತು (ತಿದ್ದುಪಡಿ) ನಿಯಮಗಳು, 2016 ರಲ್ಲಿ ನಿಗಧಿಪಡಿಸಿದಂತೆ, ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾರ್ಚ್ 2016 ರಲ್ಲಿ ರಚಿತವಾಗಿರುವ ಜಿಲ್ಲಾ ಪಂಚಾಯತಿಗಳ ಐದು ವರ್ಷಗಳ ಅವಧಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿಯನ್ನು ನಿಗಧಿಗೊಳಿಸಬೇಕಾಗಿದ್ದು, ಅದರಂತೆ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಅನುಸೂಚಿತ ಪಂಗಡ/ಅನುಸೂಚಿತ ಜಾತಿ/ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿರಿಸದವರಿಗೆ ಹಂಚಿಕೆಯಾದ ಹುದ್ದೆಗಳ ವಿವರಗಳನ್ನು ದಿನಾಂಕ: 05–04–2016ರ ಇದೇ ಸಮಸಂಖ್ಯೆಯ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿತ್ತು ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 14676/2016 ಮತ್ತು 14677–14680/2016ರಲ್ಲಿ ದಿನಾಂಕ: 23–03–2016ರಂದು ನೀಡಿದ ನಿರ್ದೇಶನದಂತೆ ಮೀಸಲಾತಿ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಮತ್ತು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು.

ವಿವಿಧ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಸಾರ್ವಜನಿಕರು ಸಲ್ಲಿಸಿದ ಆಕ್ಷೇಪಣೆ/ಮನವಿಗಳನ್ನು ಸರ್ಕಾರವು ನಿಯಮಾನುಸಾರ ಪರಿಶೀಲಿಸಿರುತ್ತದೆ. ಅದರಂತೆ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳಿಗೆ ಅನುಸೂಚಿತ ಪಂಗಡ/ಅನುಸೂಚಿತ ಜಾತಿ / ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಹಾಗೂ ಅದರೊಂದಿಗೆ ಮೀಸಲಿರಿಸದವರಿಗೆ ಹಂಚಿಕೆಯಾದ ಪರಿಷ್ಕೃತ ವಿವರಗಳನ್ನು ಈ ಕೆಳಗೆ ನಿರ್ದಿಷ್ಟಪಡಿಸಲಾಗಿದೆ. ಅದರನ್ವಯ ದಿನಾಂಕ: 05–04–2016ರ ಅಧಿಸೂಚನೆಯನ್ನು ಪರಿಷ್ಕರಿಸಿ, ಅಂತಿಮ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಅಧ್ಯಕ್ಷ ಸ್ಥಾನ | ಉಪಾಧ್ಯಕ್ಷ ಸ್ಥಾನ |
|---|---|---|---|
| 1 | ಬಾಗಲಕೋಟೆ | ಸಾಮಾನ್ಯ(ಮ) | ಹಿಂದುಳಿದ ವರ್ಗ(ಅ) |
| 2 | ಬೆಂಗಳೂರು ನಗರ | ಸಾಮಾನ್ಯ | ಪರಿಶಿಷ್ಟ ಜಾತಿ (ಮ) |
| 3 | ಬೆಂಗಳೂರು ಗ್ರಾಮಾಂತರ | ಹಿಂದುಳಿದ ವರ್ಗ(ಅ) | ಪರಿಶಿಷ್ಟ ಜಾತಿ (ಮ) |
| 4 | ಬೆಳಗಾವಿ | ಪರಿಶಿಷ್ಟ ಜಾತಿ (ಮ) | ಸಾಮಾನ್ಯ |
| 5 | ಬಳ್ಳಾರಿ | ಹಿಂದುಳಿದ ವರ್ಗ–ಬ (ಮ) | ಪರಿಶಿಷ್ಟ ಜಾತಿ |

| ಕ್ರ.ಸಂ | ಜಿಲ್ಲೆಯ ಹೆಸರು | ಅಧ್ಯಕ್ಷ ಸ್ಥಾನ | ಉಪಾಧ್ಯಕ್ಷ ಸ್ಥಾನ |
|---|---|---|---|
| 6 | ಬೀದರ | ಪರಿಶಿಷ್ಟ ಪಂಗಡ (ಮ) | ಸಾಮಾನ್ಯ |
| 7 | ವಿಜಯಪುರ | ಹಿಂದುಳಿದ ವರ್ಗ–ಅ | ಸಾಮಾನ್ಯ |
| 8 | ಚಾಮರಾಜನಗರ | ಪರಿಶಿಷ್ಟ ಪಂಗಡ | ಸಾಮಾನ್ಯ |
| 9 | ಚಿಕ್ಕಬಳ್ಳಾಪುರ | ಸಾಮಾನ್ಯ | ಹಿಂದುಳಿದ ವರ್ಗ(ಅ) (ಮ) |
| 10 | ಚಿಕ್ಕಮಗಳೂರು | ಪರಿಶಿಷ್ಟ ಜಾತಿ(ಮ) | ಸಾಮಾನ್ಯ |
| 11 | ಚಿತ್ರದುರ್ಗ | ಸಾಮಾನ್ಯ(ಮ) | ಪರಿಶಿಷ್ಟ ಪಂಗಡ |
| 12 | ದಕ್ಷಿಣ ಕನ್ನಡ | ಪರಿಶಿಷ್ಟ ಜಾತಿ | ಸಾಮಾನ್ಯ(ಮ) |
| 13 | ದಾವಣಗೆರೆ | ಸಾಮಾನ್ಯ(ಮ) | ಪರಿಶಿಷ್ಟ ಜಾತಿ |
| 14 | ಧಾರವಾಡ | ಸಾಮಾನ್ಯ(ಮ) | ಹಿಂದುಳಿದ ವರ್ಗ(ಅ) |
| 15 | ಗದಗ | ಸಾಮಾನ್ಯ | ಸಾಮಾನ್ಯ(ಮ) |
| 16 | ಕಲಬುರಗಿ | ಸಾಮಾನ್ಯ(ಮ) | ಪರಿಶಿಷ್ಟ ಜಾತಿ (ಮ) |
| 17 | ಹಾಸನ | ಪರಿಶಿಷ್ಟ ಪಂಗಡ (ಮ) | ಸಾಮಾನ್ಯ |
| 18 | ಹಾವೇರಿ | ಸಾಮಾನ್ಯ | ಸಾಮಾನ್ಯ(ಮ) |
| 19 | ಕೊಡಗು | ಪರಿಶಿಷ್ಟ ಜಾತಿ | ಸಾಮಾನ್ಯ(ಮ) |
| 20 | ಕೋಲಾರ | ಸಾಮಾನ್ಯ | ಪರಿಶಿಷ್ಟ ಪಂಗಡ (ಮ) |
| 21 | ಕೊಪ್ಪಳ | ಸಾಮಾನ್ಯ | ಹಿಂದುಳಿದ ವರ್ಗ(ಅ) (ಮ) |
| 22 | ಮಂಡ್ಯ | ಸಾಮಾನ್ಯ(ಮ) | ಪರಿಶಿಷ್ಟ ಪಂಗಡ (ಮ) |
| 23 | ಮೈಸೂರು | ಹಿಂದುಳಿದ ವರ್ಗ(ಅ)(ಮ) | ಸಾಮಾನ್ಯ |
| 24 | ರಾಯಚೂರು | ಹಿಂದುಳಿದ ವರ್ಗ(ಅ) (ಮ) | ಸಾಮಾನ್ಯ |
| 25 | ರಾಮನಗರ | ಸಾಮಾನ್ಯ | ಸಾಮಾನ್ಯ(ಮ) |
| 26 | ಶಿವಮೊಗ್ಗ | ಸಾಮಾನ್ಯ(ಮ) | ಹಿಂದುಳಿದ ವರ್ಗ(ಬ) (ಮ) |
| 27 | ತುಮಕೂರು | ಹಿಂದುಳಿದ ವರ್ಗ(ಅ) | ಪರಿಶಿಷ್ಟ ಜಾತಿ |
| 28 | ಉತ್ತರ ಕನ್ನಡ | ಪರಿಶಿಷ್ಟ ಜಾತಿ (ಮ) | ಹಿಂದುಳಿದ ವರ್ಗ(ಅ) |
| 29 | ಉಡುಪಿ | ಪರಿಶಿಷ್ಟ ಜಾತಿ | ಸಾಮಾನ್ಯ(ಮ) |
| 30 | ಯಾದಗಿರಿ | ಸಾಮಾನ್ಯ | ಸಾಮಾನ್ಯ(ಮ) |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸುತ್ತೋಲೆ

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:16.4.2016.

ಸಂಖ್ಯೆ:ಗ್ರಾಅಪ:46:ಆರ್‌ಆರ್‌ಸಿ:2016.

## ಸುತ್ತೋಲೆ

**ವಿಷಯ** : 2016–17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾರ್ಯಕ್ರಮ ಲೆಕ್ಕಶೀರ್ಷಿಕೆ–3054–ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿದ ಜಿಲ್ಲಾವಾರು ಅನುದಾನ ಹಾಗೂ MGNREGA ಅನುದಾನದೊಂದಿಗೆ Convergence ಮಾಡಿ ಕ್ರಿಯಾ ಯೋಜನೆ ರೂಪಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ**

1. ಸಿಎಂಜಿಎಸ್‌ವೈ ಲೆಕ್ಕಶೀರ್ಷಿಕೆ–3054–80–196–1–03–(ಜಿಲ್ಲಾ ವಲಯ) ಅಡಿ 2016–17ನೇ ಸಾಲಿಗೆ ಒದಗಿಸಿರುವ ರೂ.118.11ಕೋಟಿಗಳನ್ನು ಬಳಸಿಕೊಳ್ಳಲು ಕ್ರಿಯಾ ಯೋಜನೆ ರೂಪಿಸುವ ಬಗ್ಗೆ.
2. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ:12:ಆರ್‌ಆರ್‌ಸಿ:2016, ದಿನಾಂಕ:14–3–2016.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:222:ಎಫ್‌ಎನ್: 2016, ದಿನಾಂಕ:1–4–2016.

**********

2016–17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾರ್ಯಕ್ರಮ ಲೆಕ್ಕಶೀರ್ಷಿಕೆ–3054–80–196–1–03– ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಜಿಲ್ಲಾವಾರು ಹಂಚಿಕೆಯಾಗಿ ಆಯವ್ಯಯದಲ್ಲಿ ರೂ.118.11 ಕೋಟಿಗಳನ್ನು ಒದಗಿಸಲಾಗಿದೆ. ಜಿಲ್ಲಾವಾರು ಆಯವ್ಯಯ ಹಂಚಿಕೆಯ ಪಟ್ಟಿ ಲಗತ್ತಿಸಿದೆ.

ಹೀಗೆ ಒದಗಿಸಿರುವ ರೂ.118.11ಕೋಟಿಗಳನ್ನು 2016–17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳು ತಾಲ್ಲೂಕುವಾರು ಹಂಚಿಕೆ ಮಾಡಿಕೊಂಡು ಕಾರ್ಯಕ್ರಮಕ್ಕಾಗಿ ವಿನಿಯೋಗಿಸಬೇಕಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿಯೋಜನೆಯಡಿ, ಒಗ್ಗೂಡಿಸಿದ ಕ್ರಿಯಾ ಯೋಜನೆಯ ಅನುಬಂಧ–2ರ ಕಲಂ ನಂ. 6ರಲ್ಲಿ ಸೂಚಿಸಿರುವ ಮೊತ್ತವಾಧ ರೂ. 25.47 ಕೋಟಿಗಳಿಗೆ ಪ್ರತ್ಯೇಕವಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿ ಹಾಗೂ ರೂ. 25.47 ಕೋಟಿಗಳನ್ನು ಹೊರತುಪಡಿಸಿ ಉಳಿದ ಮೊತ್ತದಲ್ಲಿ ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯ ಕ್ರಿಯಾ ಯೋಜನೆಯನ್ನು ರೂಪಿಸಿ, ಜಿಲ್ಲಾ ಪಂಚಾಯತ್‌ಗಳಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು. ಆದ್ದರಿಂದ,

**ಪಿಎಂಜಿಎಸ್‌ವೈ ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಅಭಿವೃದ್ಧಿಪಡಿಸಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಈಗಾಗಲೇ ಹಸ್ತಾಂತರಿಸಿರುವ ರಸ್ತೆಗಳನ್ನು ಸಿಎಂಜಿಎಸ್‌ವೈ ಅಡಿ ಜೀರ್ಣೋದ್ಧಾರ (Renovate) ಮಾಡಲು**

- **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಅನುದಾನದೊಂದಿಗೆ Convergent (ಒಗ್ಗೂಡಿಸಿ) ಮಾಡಿಕೊಳ್ಳುವಂತೆ ಸೂಚಿಸಿರುವುದರಿಂದ ಅದರಂತೆ 2016–17ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕಾರ್ಯಕ್ರಮ ರೂಪಿಸುವಂತೆ ಸೂಚಿಸಿದೆ.**

- ಲೆ.ಶೀ.3054ರ ರಸ್ತೆ ನಿರ್ವಹಣೆ ಅನುದಾನವು ಜಿಲ್ಲಾ ವಲಯ ಕಾರ್ಯಕ್ರಮದಡಿ ಜಿಲ್ಲಾವಾರು ನೇರ ಹಂಚಿಕೆಯಾಗಿದ್ದು, ಆಯಾ ಜಿಲ್ಲಾ ಪಂಚಾಯತಿಗಳು ಅನುದಾನ ಲಭ್ಯತೆಗನುಗುಣವಾಗಿ MGNREGA ಅನುದಾನದೊಂದಿಗೆ Convergence ಮಾಡಿ ಕ್ರಿಯಾ ಯೋಜನೆ ರೂಪಿಸಿ ಜಿಲ್ಲಾ ಪಂಚಾಯತಿಯಲ್ಲಿ ಅನುಮೋದನೆ ಪಡೆದು, ಗ್ರಾಮೀಣ ರಸ್ತೆ ನಿರ್ವಹಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
- **ಮುಖ್ಯ ಇಂಜಿನಿಯರ್, ಪಂ.ರಾ.ಇಂ. ಇಲಾಖೆ ರವರು ಲೆ.ಶೀ.3054ರಡಿ ರೂ.25.00 ಕೋಟಿಗಳು ಮತ್ತು MGNREGA ಅನುದಾನದಲ್ಲಿ ರೂ.25.00 ಕೋಟಿಗಳು ಸೇರಿ ಒಟ್ಟು ರೂ.50.00 ಕೋಟಿಗಳಲ್ಲಿ ತೆಗೆದುಕೊಳ್ಳಬೇಕಾಗಿರುವ ರಸ್ತೆಗಳ ಜೀರ್ಣೋದ್ಧಾರ (Renovate) ಕಾರ್ಯಕ್ರಮಕ್ಕೆ ಜಿಲ್ಲಾವಾರು ನೀಡಿರುವ ರಸ್ತೆಗಳ ಪರಿಮಾಣವನ್ನು ಕ್ರಿಯಾ ಯೊಜನೆಯಲ್ಲಿ ಅನುಬಂಧದಲ್ಲಿರುವಂತೆ ಅಳವಡಿಸಿಕೊಳ್ಳುವುದು.**
- MGNREGA ಅನುದಾನದ ರೂ. 25.00 ಕೋಟಿಗಳ ಜೊತೆಗೆ ಲೆ.ಶೀ.3054ರ ರೂ. 25.00 ಕೋಟಿಗಳ ಅನುದಾನದೊಂದಿಗೆ Convergence ಮಾಡಿ ರಸ್ತೆಗಳ ನಿರ್ವಹಣೆ / ಜೀರ್ಣೋದ್ಧಾರ (Renovate) ಮಾಡುವುದನ್ನು ಹೊರತುಪಡಿಸಿ ಉಳಿದ ಅನುದಾನದಲ್ಲಿ ತೆಗೆದುಕೊಳ್ಳುವ ರಸ್ತೆ ನಿರ್ವಹಣೆ ಕಾರ್ಯಕ್ರಮವನ್ನು ಆಯಾ ತಾಲ್ಲೂಕಿನ ರಸ್ತೆ ವಿಸ್ತೀರ್ಣ ಹಾಗೂ DRRP ಯನ್ನು ಗಣನೆಗೆ ತೆಗೆದುಕೊಂಡು 2016–17ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ತಾಲ್ಲೂಕುಗಳಿಗೆ ಹಂಚಿಕೆ ಮಾಡಿ ಕ್ರಿಯಾ ಯೋಜನೆಯನ್ನು ರೂಪಿಸಿ ಕಾರ್ಯಕ್ರಮ ಅನುಷ್ಠಾನಕ್ಕೆ ತರಲು ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಸೂಚನೆ ನೀಡಿದೆ.

ಈ ಕಾರ್ಯಕ್ರಮದ ಅನುದಾನದಲ್ಲಿ ತೆಗೆದುಕೊಳ್ಳುವ ರಸ್ತೆಗಳು ಪಿ.ಎಂ.ಜಿ.ಎಸ್.ವೈ., ನಮ್ಮ ಗ್ರಾಮ ನಮ್ಮ ರಸ್ತೆ, ನಬಾರ್ಡ್ ಮತ್ತು ಇತರೆ ಯೋಜನೆಗಳಡಿಯಲ್ಲಿ ಅಭಿವೃದ್ಧಿ ಪಡಿಸಿದ ಈ ರಸ್ತೆಗಳು DRRP ಪಟ್ಟಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು. ಹಾಗೂ DRRP ಪಟ್ಟಿಯಲ್ಲಿರುವ ರಸ್ತೆಗಳನ್ನೇ ತಪ್ಪದೆ ಆಯ್ಕೆ ಮಾಡಿ ಕ್ರಿಯಾ ಯೋಜನೆಗೆ ಸೇರ್ಪಡೆಗೊಳಿಸುವುದು. ಆಯ್ಕೆ ಮಾಡಿದ ರಸ್ತೆಗಳ DRRP Code ಸಂಖ್ಯೆಯನ್ನು ತಪ್ಪದೆ ಕಡ್ಡಾಯವಾಗಿ ನಮೂದಿಸುವುದು.

ಜಿಲ್ಲಾ ಪಂಚಾಯತಿಗಳು ಕಾರ್ಯಕ್ರಮ ಅನುಷ್ಠಾನವನ್ನು ಸರ್ಕಾರದಿಂದ ಕಾಲ ಕಾಲಕ್ಕೆ ಹೊರಡಿಸುವ ಸರ್ಕಾರದ ಆದೇಶಗಳು, ಸುತ್ತೋಲೆ ಸೂಚನೆಯನ್ವಯ ಕೈಗೊಳ್ಳತಕ್ಕದ್ದು.

ಲೆಕ್ಕಶೀರ್ಷಿಕೆ–3054–ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿದ ಜಿಲ್ಲಾವಾರು ಅನುದಾನ ಹಾಗೂ MGNREGA ಅನುದಾನದೊಂದಿಗೆ Convergence ಮಾಡಿ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರುವ ಸಂಬಂಧ ಮುಖ್ಯ ಇಂಜಿನಿಯರ್, ಪಂ.ರಾಜ್. ಇಂ. ಇಲಾಖೆ ಇವರು ನೀಡುವ ಸೂಚನೆಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರುಗಳು ಪಾಲಿಸಿ ಕಾರ್ಯಕ್ರಮವನ್ನು ಅನಷ್ಠಾನ ಮಾಡತಕ್ಕದ್ದು.

ರಸ್ತೆ ನಿರ್ವಹಣೆ ಕಾರ್ಯಕ್ರಮವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಮೂಲಕವೇ ಅನುಷ್ಠಾನ ಮಾಡತಕ್ಕದ್ದು.

ಈ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ತಮ್ಮ ವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚನೆ ನೀಡತಕ್ಕದ್ದು ಮತ್ತು ಪ್ರಗತಿಯ ವರದಿಯನ್ನು ಮುಖ್ಯ ಇಂಜಿನಿಯರ್, ಪಿ.ಆರ್.ಇ.ಡಿ. ರವರಿಗೆ ಸಲ್ಲಿಸಲು ಸಹಾ ಸೂಚಿಸುವುದು.

ಕಾರ್ಯಕ್ರಮ ಅನುಷ್ಠಾನ ಘಟಕಗಳು ರಸ್ತೆ ನಿರ್ವಹಣೆ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿ ಆಧರಿಸಿದ ದರಸೂಚಿ / PWD Code/Rules volume-1 & 2 ನ್ನು ಅನುಸರಿಸತಕ್ಕದ್ದು.

**(ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ

2016–17ನೇ ಸಾಲಿನ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿದ ಜಿಲ್ಲಾವಾರು ಅನುದಾನದ ವಿವರಗಳು

(Rs. In laks)

| ಕ್ರ. ಸಂ. | ಜಿಲ್ಲೆ | ರಸ್ತೆಗಳ ಸಂಖ್ಯೆ | ಮಂಜೂರಾದ ಉದ್ದ (ಕಿ.ಮೀಗಳಲ್ಲಿ) | ಒಟ್ಟು ವೆಚ್ಚ | ಅಂದಾಜು ಮೊತ್ತ | | ನರೇಗಾ ವಿಭಾಗಗಳು | | |
|---|---|---|---|---|---|---|---|---|---|
| | | | | | 3054 ಯೋಜನೆ | ನರೇಗಾ | ಕೂಲಿ | ಸಾಮಗ್ರಿ | ಮಾನವ ದಿನಗಳು |
| 1 | 2 | 3 | 4 | 5 | 6 | 7 | 8 | 9 | 10 |
| 1 | ಬಾಗಲಕೋಟೆ | 71 | 236.55 | 187.82 | 93.91 | 93.91 | 56.35 | 37.56 | 25155 |
| 2 | ಬೆಂಗಳೂರು ಗ್ರಾಮಾಂತರ | 79 | 376.68 | 299.08 | 179.45 | 119.63 | 71.78 | 47.85 | 32045 |
| 3 | ರಾಮನಗರ | 49 | 161.53 | 128.25 | 76.95 | 51.30 | 30.78 | 20.52 | 13742 |
| 4 | ಬೆಂಗಳೂರು ನಗರ | 28 | 116.02 | 92.12 | 50.67 | 41.45 | 24.87 | 16.58 | 11104 |
| 5 | ಬೆಳಗಾವಿ | 63 | 329.53 | 261.65 | 130.82 | 130.82 | 78.49 | 52.33 | 35042 |
| 6 | ಬಳ್ಳಾರಿ | 53 | 252.82 | 200.74 | 100.37 | 100.37 | 60.22 | 40.15 | 26885 |
| 7 | ಬಳ್ಳಾರಿ | 54 | 279.42 | 221.86 | 110.93 | 110.93 | 66.56 | 44.37 | 29713 |
| 8 | ವಿಜಯಪುರ | 50 | 268.16 | 212.92 | 106.46 | 106.46 | 63.88 | 42.58 | 28516 |
| 9 | ಚಾಮರಾಜನಗರ | 5 | 14.86 | 11.80 | 5.90 | 5.90 | 3.54 | 2.36 | 1580 |
| 10 | ಚಿಕ್ಕಮಗಳೂರು | 23 | 78.25 | 62.13 | 31.07 | 31.07 | 18.64 | 12.43 | 8321 |
| 11 | ಚಿತ್ರದುರ್ಗ | 88 | 335.63 | 266.49 | 133.25 | 133.25 | 79.95 | 53.30 | 35691 |
| 12 | ದಾವಣಗೆರೆ | 66 | 197.45 | 156.78 | 78.39 | 78.39 | 47.03 | 31.36 | 20997 |
| 13 | ಧಾರವಾಡ | 32 | 148.85 | 118.19 | 59.09 | 59.09 | 35.46 | 23.64 | 15829 |
| 14 | ಗದಗ | 32 | 168.95 | 134.15 | 67.07 | 67.07 | 40.24 | 26.83 | 17966 |
| 15 | ಕಲಬುರಗಿ | 73 | 511.38 | 406.04 | 203.02 | 203.02 | 121.81 | 81.21 | 54380 |
| 16 | ಯಾದಗಿರಿ | 26 | 129.59 | 102.89 | 51.45 | 51.45 | 30.87 | 20.58 | 13781 |
| 17 | ಹಾಸನ | 55 | 100.66 | 79.92 | 39.96 | 39.96 | 23.98 | 15.98 | 10704 |
| 18 | ಹಾವೇರಿ | 34 | 133.01 | 105.61 | 52.80 | 52.80 | 31.68 | 21.12 | 14144 |
| 19 | ಕೋಲಾರ | 70 | 410.57 | 325.99 | 163.00 | 163.00 | 97.80 | 65.20 | 43660 |
| 20 | ಚಿಕ್ಕಬಳ್ಳಾಪುರ | 76 | 281.77 | 223.73 | 111.86 | 111.86 | 67.12 | 44.75 | 29963 |
| 21 | ಕೊಪ್ಪಳ | 63 | 273.90 | 217.48 | 108.74 | 108.74 | 65.24 | 43.50 | 29126 |
| 22 | ಮಂಡ್ಯ | 74 | 300.27 | 238.41 | 119.21 | 119.21 | 71.52 | 47.68 | 31930 |
| 23 | ಮೈಸೂರು | 41 | 177.17 | 140.67 | 70.34 | 70.34 | 42.20 | 28.13 | 18840 |
| 24 | ರಾಯಚೂರು | 90 | 475.82 | 377.80 | 188.90 | 188.90 | 113.34 | 75.56 | 50598 |
| 26 | ತುಮಕೂರು | 122 | 538.42 | 427.51 | 213.75 | 213.75 | 128.25 | 85.50 | 57255 |
| | **ಒಟ್ಟು** | **1417** | **6297.26** | **5000.02** | **2547.35** | **2452.67** | **1471.60** | **981.07** | **656966** |

(ಬೂವನಹಳ್ಳಿ ನಾಗರಾಜ್)

ನಿರ್ದೇಶಕರು, ಸು. ಗ್ರಾ. ಯೋ. ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸುತ್ತೋಲೆ

# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20.04.2016

ಗ್ರಾಅಪ 296 ಗ್ರಾಪಂಅ 2015

## ಸುತ್ತೋಲೆ

**ವಿಷಯ:** ಶೇ.1 ರಷ್ಟರ ಕಾರ್ಮಿಕ ಸುಂಕವನ್ನು ಕಾರ್ಮಿಕ ಕಲ್ಯಾಣ ಮಂಡಳಿಗೆ ಪಾವತಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರ ಆದೇಶ ಸಂಖ್ಯೆ:ಎಲ್‌ಡಿ 300 ಎಲ್‌ಇಟಿ 2006, ದಿನಾಂಕ 18.01.2007

**********

ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಸುಂಕ ಅಧಿನಿಯಮ 1996 ರ ನಿಯಮ 2(ಡಿ) ರನ್ವಯ ಸ್ಥಳೀಯ ಸಂಸ್ಥೆಗಳ ವತಿಯಿಂದ ನೇರವಾಗಿ ಅಥವಾ ಗುತ್ತಿಗೆದಾರರ ಮೂಲಕ ಕಾಮಗಾರಿಯನ್ನು ಅನುಷ್ಠಾನಗೊಳಿಸಿದಲ್ಲಿ ಆಯಾ ಸ್ಥಳೀಯ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ವೈಯಕ್ತಿಕ ವಸತಿ ಮನೆಯನ್ನು ನಿರ್ಮಿಸುವ ಸಾರ್ವಜನಿಕರು ಹಾಗೂ ವಾಣಿಜ್ಯ ಉದ್ದೇಶಕ್ಕಾಗಿ ವಸತಿ ಸಮುಚ್ಚಯಗಳು, ಆಸ್ಪತ್ರೆಗಳು, ಮಾಲ್‌ಗಳನ್ನು ನಿರ್ಮಿಸುವ ಬಿಲ್ಡರ್ ಅಥವಾ ಗುತ್ತಿಗೆದಾರರು ಶೇ.1 ರಷ್ಟು ಕಾರ್ಮಿಕ ಸುಂಕವನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಬೇಕಾಗಿರುತ್ತದೆ.

ಉಲ್ಲೇಖಿತ ಆದೇಶದಲ್ಲಿ ತಿಳಿಸಿದಂತೆ, ಸ್ಥಳೀಯ ಸಂಸ್ಥೆಗಳು ಆಂತರಿಕವಾಗಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಒಟ್ಟು ವೆಚ್ಚದ ಶೇ.1 ರಷ್ಟು ಕಾರ್ಮಿಕ ಸುಂಕವನ್ನು 30 ದಿನಗಳೊಳಗಾಗಿ "ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿ" ಯ ಹೆಸರಿಗೆ ಚೆಕ್ ಮೂಲಕ ಪಾವತಿಸತಕ್ಕದ್ದು.

ಸ್ಥಳೀಯ ಸಂಸ್ಥೆಗಳ ಪರವಾನಗಿ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಗುತ್ತಿಗೆದಾರರಿಂದ ಶೇ.1 ರಷ್ಟು ಕಾರ್ಮಿಕ ಸುಂಕವನ್ನು ಪಡೆದು ನಂತರ ಸ್ಥಳೀಯ ಸಂಸ್ಥೆಗಳು ಸದರಿ ಕಾಮಗಾರಿ ಅನುಷ್ಠಾನಕ್ಕೆ ಪರವಾನಗಿ ನೀಡತಕ್ಕದ್ದು. ವಾಣಿಜ್ಯ ಉದ್ದೇಶಕ್ಕೆ ಕಟ್ಟಡ ನಿರ್ಮಿಸುವ ಕಟ್ಟಡ ಮಾಲೀಕ ಅಥವಾ ಗುತ್ತಿಗೆದಾರರಿಂದ ಶೇ.1 ರಷ್ಟು ಹಾಗೂ ರೂ.10 ಲಕ್ಷ ನಿರ್ಮಾಣ ವೆಚ್ಚ ಮೀರಿ ವಸತಿ ಉದ್ದೇಶಕ್ಕೆ ಕಟ್ಟಡ ನಿರ್ಮಿಸುವ ಕಟ್ಟಡ ಮಾಲೀಕರಿಂದ ಶೇ.1 ರಷ್ಟು ಕಾರ್ಮಿಕ ಸುಂಕವನ್ನು ಪಡೆದುಕೊಂಡ ನಂತರವೇ ಕಟ್ಟಡ ಪರವಾನಗಿಯನ್ನು ನೀಡತಕ್ಕದ್ದು. ಈ ರೀತಿ ವಸೂಲಿ ಮಾಡಿದ ಸುಂಕದ ಮೊತ್ತವನ್ನು ಡಿಮಾಂಡ್ ಡ್ರಾಫ್ಟ್ ಮೂಲಕ 30 ದಿನಗಳೊಳಗಾಗಿ ಆಯಾ ಸ್ಥಳೀಯ ಸಂಸ್ಥೆಗಳು "ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿ" ಗೆ ಸದರಿ ಕಾಮಗಾರಿ/ ಕಟ್ಟಡ ನಿರ್ಮಾಣದ ವಿವರಗಳೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಕಲ್ಯಾಣ ಮಂಡಳಿ, 3 ನೇ ಹಂತ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು. ಈ ರೀತಿ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿ ಮಾಡಿದ ಒಟ್ಟು ಸುಂಕದ ಮೊತ್ತದಲ್ಲಿ ಶೇ.1 ರಷ್ಟನ್ನು ಕಾರ್ಮಿಕ ಮಂಡಳಿಯು ಸದರಿ ಸುಂಕವನ್ನು ವಸೂಲಿ ಮಾಡಿದ ಸ್ಥಳೀಯ ಸಂಸ್ಥೆಗೆ ಆಡಳಿತ ವೆಚ್ಚಗಳಿಗಾಗಿ ಹಿಂದಿರುಗಿಸುತ್ತದೆ.

ಉಲ್ಲೇಖಿತ ಕಾರ್ಮಿಕ ಇಲಾಖೆಯ ಆದೇಶದಂತೆ ಕಾರ್ಮಿಕ ಸುಂಕವನ್ನು ಕಡ್ಡಾಯವಾಗಿ ಪಾವತಿಸಲು ಕ್ರಮವಹಿಸುವಂತೆ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಮೂಲಕ ಸೂಚಿಸಿದೆ.

(ಟಿ.ವಿ. ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.











ದಿನಾಂಕ:21.04.2016 ರಿಂದ 24.04.2016ರ ವರೆಗೆ ರಾಷ್ಟ್ರೀಯ ಪಂಚಾಯತ್ ರಾಜ್ ದಿವಸದ ಅಂಗವಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗ್ರಾಮ ಮತ್ತು ವಿಶೇಷ ಗ್ರಾಮ ಸಭೆಗಳನ್ನು ನಡೆಸಲಾಯಿತು.

# KARNATAKA VIKAS : MAY 2016

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road,
Bengaluru on 9th, 10th, 11th of Every Month




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00